ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ-೫೮೩ ೨೭೬

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

೨೦೧೪-೧೫

ವಿಷಯ

ವಚನಗಳಲ್ಲಿ ವ್ಯಕ್ತಿತ್ವ ವಿಕಸನ-ಒಂದು ತಾತ್ವಿಕ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ

ಎನ್. ಗಣೇಶ

ನೋ. ಸಂಖ್ಯೆ: ೧೪೨೦೦೧೩೦೦೩೮

ಮಾರ್ಗದರ್ಶಕರು

ಡಾ. ಬೈರಮಂಗಲ ರಾಮೇಗೌಡ

ಕನ್ನಡ ಪ್ರಾಧ್ಯಾಪಕರು

ಬೆಂಗಳೂರು

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು

ಸಂಶೋಧನಾ ಕೇಂದ್ರ

ಪಂಪ ಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ-೫೮೩ ೨೭೬

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

೨೦೧೪-೧೫

ವಿಷಯ

ವಚನಗಳಲ್ಲಿ ವ್ಯಕ್ತಿತ್ವ ವಿಕಸನ-ಒಂದು ತಾತ್ವಿಕ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ

ಎನ್. ಗಣೇಶ

ನೋ. ಸಂಖ್ಯೆ: ೧೪೨೦೦೧೩೦೦೩೮

ಮಾರ್ಗದರ್ಶಕರು

ಡಾ. ಬೈರಮಂಗಲ ರಾಮೇಗೌಡ

ಕನ್ನಡ ಪ್ರಾಧ್ಯಾಪಕರು

ಬೆಂಗಳೂರು

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು

ಸಂಶೋಧನಾ ಕೇಂದ್ರ

ಪಂಪ ಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

1231

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ **ವಚನಗಳಲ್ಲಿ ವ್ಯಕ್ತಿತ್ವ ವಿಕಸನ–ಒಂದು ತಾತ್ವಿಕ ಅಧ್ಯಯನ** ಎಂಬ ಶೀರ್ಷಿಕೆಯ ಈ ಎಂ.ಫಿಲ್. ನಿಬಂಧವನ್ನು **ಡಾ. ಬೈರಮಂಗಲ ರಾಮೇಗೌಡ, ಕನ್ನಡ ಪ್ರಾಧ್ಯಾಪಕರು, ಬೆಂಗಳೂರು**. ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಇತರೇ ಉದ್ದೇಶಗಳಿಗಾಗಲೀ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ:
ಸ್ಥಳ:–ಬೆಂಗಳೂರು

ಎನ್. ಗಣೇಶ
ನೋ.ಸಂಖ್ಯೆ: ೧೪೨೦೦೧೩೦೦೩೮
ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಎನ್. ಗಣೇಶ ರವರು ಎಂ.ಫಿಲ್. ಪದವಿಗಾಗಿ ಬರೆದು ಸಿದ್ಧಪಡಿಸಿರುವ **ವಚನಗಳಲ್ಲಿ ವ್ಯಕ್ತಿತ್ವ ವಿಕಸನ–ಒಂದು ತಾತ್ವಿಕ ಅಧ್ಯಯನ** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ:
ಸ್ಥಳ:–ಬೆಂಗಳೂರು

ಮಾರ್ಗದರ್ಶಕರು
ಡಾ. ಬೈರಮಂಗಲ ರಾಮೇಗೌಡ
ಕನ್ನಡ ಪ್ರಾಧ್ಯಾಪಕರು
ಬೆಂಗಳೂರು.

ಡಾ. ರಾಮೇಗೌಡ
ಸಹ ಪ್ರಾಧ್ಯಾಪಕ ಮತ್ತು ಕನ್ನಡ ವಿಭಾಗದ ಮುಖ್ಯಸ್ಥ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಜಾಜಿನಗರ, ಬೆಂಗಳೂರು - 560 010.

ಪರಿವಿಡಿ

ಅಧ್ಯಾಯ –೧

ವಚನಗಳ ಉಗಮ–ವಿಕಾಸ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ವಚನ' ಎನ್ನುವುದು ಕನ್ನಡದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಯಾವುದೇ ದೃಷ್ಟಿಯಿಂದಲೂ ಅನುಕರಣೆ ಮಾಡದೇ ಆದರ್ಶವಾಗಿಟ್ಟುಕೊಳ್ಳದೇ ಕೇವಲ ಅನುಭವ ಮತ್ತು ಚಿಂತನೆಗಳಿಂದಲೇ ಮೂಡಿ ರೂಪಿತವಾದ ಈ ಪ್ರಕಾರವು ಕನ್ನಡದ ಒಂದು ಹೆಗ್ಗಳಿಕೆಯಾಗಿದೆ.

೧೩ನೇ ಶತಮಾನದ ಮಧ್ಯಭಾಗದಿಂದ ೧೫ನೇ ಶತಮಾನದವರೆಗಿನ ಈ ಯುಗದಲ್ಲಿ ರಾಜ್ಯ ಸಾಮ್ರಾಜ್ಯಗಳ ಉದಯಾಸ್ತಗಳು, ಯುದ್ಧಕೋಲಾಹಲಗಳು, ಮಾತ್ರವಲ್ಲದೆ ಜನಜೀವನವನ್ನೇ ಅಲ್ಲಾಡಿಸಿ ಹೊಸ ಪಲ್ಲಟಗಳನ್ನು ಬರಮಾಡಿದ ರಾಜಕೀಯ–ಧಾರ್ಮಿಕ, ಸ್ಥಿತ್ಯಂತರಗಳು ತಲೆದೋರಿದವು. ಆಗಿನ ಕಲೆ ವಾಙ್ಮಯಗಳ ಮೇಲೆ ತೀವ್ರ ಪ್ರಭಾವವನ್ನು ಬೀರಿದವು. ಶಾಸನದ ಚಾರಿತ್ರಿಕ ಸಾಮಗ್ರಿಯಲ್ಲೂ ಅವುಗಳ ಕಥಾವಿವರಗಳು ಸುಪ್ತವಾಗಿದ್ದ ಕಾರಣ ಪರಿಚಿತವಾದ ಪ್ರಮುಖ ಅಂಶಗಳನ್ನು ಮಾತ್ರ ನಾವು ತಿಳಿದಿರುತ್ತೇವೆ. ಕಲ್ಯಾಣದ ಚಾಲುಕ್ಯರ ವಂಶದ ವೈಭವ ೬ನೇ ವಿಕ್ರಮಾದಿತ್ಯ ಮತ್ತು ೨ನೇ ಸೋಮೇಶ್ವರ ಇವರಲ್ಲಿ ಕೊನೆಮುಟ್ಟಿ ೧೨ನೇ ಶತಮಾನದ ಮಧ್ಯಕಾಲಕ್ಕೆ ಇಳಿಮೊಗವಾಯಿತು. ಕೈಲಾಗದ ೩ನೇ ತೈಲಪನನ್ನು ಹೆಸರಿಗೆ ಅರಸನನ್ನಾಗಿರಿಸಿ ಕಲಚೂರ್ಯ ವಂಶದ ಬಿಜ್ಜಳನು ರಾಜಸೂತ್ರಗಳನ್ನೆಲ್ಲ ವಹಿಸಿಕೊಂಡನು. ಬರಬರುತ್ತ ಮಹಾಮಂಡಳೇಶ್ವರನಾಗಿದ್ದವನು 'ನಿಜಭುಜಬಲ' ಚಕ್ರವರ್ತಿಯಾದನು. ಇತ್ತ ದಕ್ಷಿಣ ಕರ್ನಾಟಕದಲ್ಲಿ ವಿಷ್ಣುವರ್ಧನನ ಕಾಲದಿಂದ ಸ್ವತಂತ್ರ ರಾಜ್ಯಗಳ ಭಿನ್ನಸತ್ತೆಗಳು ತಲೆಯೆತ್ತತೊಡಗಿದವು. ಅಲ್ಪಕಾಲಿಕವಾದ ಕಲಚೂರ್ಯನ ರಾಜ್ಯವು ಕಣ್ಮರೆಯಾಗುವಷ್ಟರಲ್ಲಿ ಉತ್ತರದಲ್ಲಿ ಯಾದವರು, ದಕ್ಷಿಣದಲ್ಲಿ ಹೊಯ್ಸಳರು ಪ್ರಬಲಿಸುತ್ತ ಬಂದು ಒಬ್ಬರನ್ನೊಬ್ಬರು ಸೋಲಿಸಿ ಇವೆರೆಲ್ಲರನ್ನೂ ಹಿಮ್ಮೆಟ್ಟಿಸುತ್ತ ಕರ್ನಾಟಕದ ರಾಜಕೀಯ ದೌರ್ಬಲ್ಯಕ್ಕೆ ಬಲಿಯಾಯಿತು. ೧೩ನೇ ಶತಮಾನದಲ್ಲಿ ಹೊಯ್ಸಳ–ಯಾದವರ ಹೋರಾಟದಲ್ಲಿ ನಾಡಿನ ಒಕ್ಕೂಟ ಕಡಿಮೆಯಾಯಿತು. ಇದೇ ಸುಸಮಯವೆಂದು ೧೩ನೇ ಶತಮಾನದ ಕೊನೆಯಿಂದ ಮಹಮ್ಮದೀಯರ ಸೈನ್ಯಗಳ ದಾಳಿ ನಡೆಸಲು ಕರ್ನಾಟಕದ ಮೇಲೆ ನುಗ್ಗಿದವು. ಮೊದಲು ಅಲ್ಲಾವುದ್ದೀನ್, ಮಲ್ಲಿಕ್‌ಕಾಫರ್ ಇವರು ದಾಳಿನಡೆಸಿ ಯಾದವ–ಹೊಯ್ಸಳರಿಬ್ಬರನ್ನೂ ನಿರ್ನಾಮ ಮಾಡಿ ದೆಹಲಿಯ ಪ್ರಭುತ್ವಕ್ಕೆ ಮಾಂಡಳಿಕರನ್ನಾಗಿ ಮಾಡಿದರು. ಹೋದ ಕಡೆಯಲ್ಲೆಲ್ಲ ಕ್ರೂರ–ಹಿಂಸೆಯ ಕೃತ್ಯಗಳಿಂದ, ಪವಿತ್ರ ಸ್ಥಳಗಳ ವಿನಾಶದಿಂದ ನಾಡಿನ ಜನಸಾಮಾನ್ಯರಲ್ಲಿ ಎಲ್ಲೆಲ್ಲೂ ಹಾಹಾಕಾರ ಉಂಟಾಗುವಂತೆ ಮಾಡಿದರು. ಕರ್ನಾಟಕದ ಪಡೆ ಇವರ ಶಕ್ತಿಯ ಮುಂದೆ ಹತಾಶವಾಗಿ ಕೈಸೋತಿತು. ದಕ್ಷಿಣದ ಸಂಸ್ಕೃತಿ ಸಂಕಷ್ಟಕ್ಕೆ ಸಿಲುಕಿತ್ತು. ಈ

ಸಂದರ್ಭದಲ್ಲಿ ನಾಡಿನ ಸುದೈವದಿಂದಲೂ, ವಿದ್ಯಾರಣ್ಯರ ಪ್ರೇರಣೆಯಿಂದಲೂ ಹೊಯ್ಸಳ ದೊರೆಗಳ ಚಾತುರ್ಯದಿಂದಲೂ ವಿಜಯನಗರದಲ್ಲಿ ಸಂಗಮ ವಂಶದ ರಾಜ್ಯವು ೧೪ನೇ ಶತಮಾನದ ಮೊದಲಲ್ಲಿ ಸ್ಥಾಪನೆಯಾಗಿ ಜನತೆಯ ವಿಲಕ್ಷಣವಾದ ಚೈತನ್ಯ ಬಲದಿಂದ ಬೇಗಬೇಗನೆ ಬೆಳೆದು ದಕ್ಷಿಣ ಭರತ ಖಂಡಕ್ಕೆ ಶಕ್ತಿಯಾಗಿ ಪರಿಣಮಿಸಿತು. ೧೫ನೇ ಶತಮಾನದ ಹೊತ್ತಿಗೆ ಮಹಮ್ಮದೀಯ ವೈರಿಗಳನ್ನು ತಡೆಗಟ್ಟಿ ಜನಜೀವನವನ್ನು ಸಂಘಟಿಸಿ ಎಲ್ಲಾ ಮತಪಂಥಗಗಳಿಗೆ, ಕಲೆ, ಸಂಸ್ಕೃತಿಗಳಿಗೆ ಆಶ್ರಯಸ್ಥಾನವಾದ ವಿಜಯನಗರ ಸಾಮ್ರಾಜ್ಯವಾಯಿತು.

ರಾಜಕೀಯ ಹಿನ್ನೆಲೆಯಲ್ಲಿ ಜನಜೀವನವು ಏಳುಬೀಳುಗಳನ್ನು ಅನುಭವಿಸುತ್ತಲೇ ಇರಬೇಕು. ಚಾಲುಕ್ಯರ ಏರಿಕೆಯ ಕಾಲದಲ್ಲಿ ಅದು ಸುಸ್ಥಿತಿಯ ಏಣಿಯನ್ನು ಏರಿ ಪರಕೀಯರ ದಾಳಿಯಿಂದ ಮಣ್ಣು ಮುಕ್ಕಿತ್ತು. ಮತ್ತೆ ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಸಂಪತ್ತು, ರಸಿಕತೆ, ಸೋದರಭಾವಗಳಲ್ಲಿ ಮಿಗಿಲಾದ ಏರಿಕೆಯನ್ನು ಪಡೆಯಿತು. ಧಾರ್ಮಿಕ, ಸಾಮಾಜಿಕ ಜೀವನದಲ್ಲಿ ಹೊಸ ಮತ-ಪಂಥಗಳ ಉದಯದಿಂದಲೂ ಮಹಮ್ಮದೀಯರ ಅಭಿಯೋಗದಿಂದಲೂ ಜನತೆಯಲ್ಲಿ ಹೊಸ ಶಕ್ತಿಗಳಿಂದ ಭಯ ಭೀತಿಗಳುಂಟಾದವು. ೧೨ನೇ ಶತಕದ ಮಧ್ಯಭಾಗದ ಧಾರ್ಮಿಕ ಪರಂಪರೆಗಳಲ್ಲಿ ಒಂದಾದ ಜೈನಮತವು ಹಿಂದಿನ ಉತ್ಕರ್ಷಕ್ಕೆ ಹೊರತಾಗಿ, ಧರ್ಮವನ್ನು ಕಾಪಾಡಿಕೊಳ್ಳುವುದರಲ್ಲಿ ಮುಂದುವರೆದಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಆಗ ತಾನೇ ತಲೆಯೆತ್ತುತ್ತಿದ್ದ ಧೈವ ಪ್ರಧಾನವಾದ ಭಕ್ತಿಯ ಆಕರ್ಷಣೆಯನ್ನು ತರಲು ಕಷ್ಟವಾಗಿದ್ದ ಸಮಯವಾಗಿತ್ತು. ವೈದಿಕ ಮತಧರ್ಮಗಳ ಆಚಾರಗಳು ಧರ್ಮದ ಹಿಂದೆ ಹೋಗುತ್ತಿದ್ದವು. ಇದರಿಂದ ತೋರಿಕೆಯ ಭಕ್ತಿ, ಡಾಂಭಿಕತೆ, ಒಂದೇ ರೀತಿಯ ಭಾವನೆಗಳು, ಭಕ್ತಿ ಪ್ರಧಾನವಾದ ಮತಗಳ ಆಕರ್ಷಣೆಯನ್ನು ತರಲು ಶಕ್ತಿ ಸಾಲದಾಗಿತ್ತು. ಒಂದು ದಾರುಣವಾದ ಪರಿಸ್ಥಿತಿಯನ್ನು ಪ್ರತಿಭಟಿಸುವ ಸುಸಮಯಕ್ಕಾಗಿ ಕಾಯಬೇಕಾದ ಪರಿಸ್ಥಿತಿ ಉಂಟಾಯಿತು. ಹೊಸ ಹೊಸ ಚಿಂತನೆಗಳಿಂದ ಸಮಾಜಕ್ಕೆ ದಾರಿತೋರಿ ಕೆಡುಕನ್ನು ತಿದ್ದುವ ಮಹಾವ್ಯಕ್ತಿಗಳ ಉದಯಕ್ಕೆ ಇದು ಯೋಗ್ಯ ಸಮಯವಾಗಿತ್ತು. ಬಸವಣ್ಣ, ಪ್ರಭುದೇವ, ಸಿದ್ಧರಾಮರಂಥ ಶಿವಶರಣರನ್ನು 'ಕಲ್ಯಾಣ' ಪಥಕ್ಕೆ ಕರೆಯುವುದರ ಮೂಲಕ ಕಹಳೆಯನ್ನು ಊದುತ್ತ ಹೊಸ ಪರಂಪರೆಗೆ ಕಾಲಿಟ್ಟಂತಾಯಿತು. ಆಗ ಅನೇಕ ಶೈವಪಂಥಗಳಿದ್ದವು. ಕರ್ನಾಟಕದಲ್ಲಿ ವೈದಿಕವಾದ ಆರಾಧ್ಯಶೈವಪರಂಪರೆ ಪಾಶುಪತವನ್ನು ಒಳಗೊಂಡಿತ್ತು. ಶಿವಶರಣರು ಅವುಗಳ ತತ್ವವನ್ನು ಸ್ವೀಕರಿಸಿ ವೀರಶೈವ ಎಂಬುದಾಗಿ ನಿಧಾನವಾಗಿ ಎಲ್ಲ ಕಡೆ ಸ್ವತಂತ್ರವಾಗಿ ಹರಡುವ ಹೊಸ ದಾರಿಯನ್ನು ಸಾಮಾಜಿಕ-ಧಾರ್ಮಿಕ ಕ್ರಾಂತಿಗೆ ತಳಹದಿಯನ್ನಾಗಿ ಮಾಡಿಕೊಂಡರು. ವೀರಶೈವಮತದ ಸ್ಥಾಪನೆ ಉದ್ಧಾರವಾಗಬೇಕು ಇಲ್ಲವಾದರೆ ಬೇರೆ ಮತಗಳ ಉಚ್ಚಾಟನೆ ನಡೆಯಬೇಕೆನ್ನುವ ಉದ್ದೇಶದಿಂದ ಕೂಡಿತ್ತು. ಮಾನವನ ಪ್ರೀತಿ, ನೀತಿ, ನಿಷ್ಠೆ, ಶಿವಭಕ್ತಿ, ಸಮಾನಭಾವ ಇವುಗಳನ್ನು ತಿಳಿದು ಹೊಸ ಸಮಾಜ ವ್ಯವಸ್ಥೆ,

ಅದಕ್ಕೆ ಮಾದರಿಯಾಗಿ ಎತ್ತರದ ಶರಣಮಾರ್ಗದಲ್ಲಿರುವ ದಿವ್ಯ ಸ್ವರೂಪಗಳ ಅನುಭಾವಗೋಷ್ಠಿ ಇದು ಎಲ್ಲಾ ಶರಣರ ಮಹಾದಾಸೆಯಾಗಿತ್ತು. ಇದನ್ನು ಶರಣರು ನಡೆ ನುಡಿದು, ನುಡಿದಂತೆ ನಡೆದು ತೋರಿಸಿದವರು. ಆದರೆ ಇದನ್ನು ದಕ್ಕಿಸಿಕೊಳ್ಳಲಾಗದ ಸಾಂಪ್ರದಾಯಿಕ ಸಮಾಜವು ಕುಡಿದ ಅಮೃತವನ್ನು ಉಗುಳಿದಂತೆ ಮತ್ತೆ ತನ್ನ ದಾರಿಯನ್ನೇ ಹಿಡಿಯಿತು. ಇದರಿಂದಾಗಿ ಕೆಲವು ದಿನಗಳ ಕಾಲ ಶರಣರ ಮಾರ್ಗ ಹಿಮ್ಮೆಟ್ಟಿಸಿತು. ಮಹಮ್ಮದೀಯರ ಆಘಾತಕ್ಕೆ ಸಿಲುಕಿದ ಜನಸಮುದಾಯ ಕೆಂಗೆಟ್ಟರೂ, ಮತ್ತೆ ಪೂರ್ವಜನ್ಮದ ಪುಣ್ಯವೆಂಬಂತೆ ಜಾಗೃತರಾಗಿ ವಿಜಯನಗರದ ಸಹಾಯದಿಂದ ವೈದಿಕ, ಜೈನ, ವೀರಶೈವ ಎಲ್ಲಾ ಮತಪಂಥಗಳು ಹೊಸ ಹುಮ್ಮಸ್ಸು ಸಮನ್ವಯ ಸಾಧಿಸಿ ಸಾಮರಸ್ಯದ ದಾರಿಯಲ್ಲಿ ಪದಾರ್ಪಣೆ ಮಾಡಿದವು. ವಿವಿಧತೆಯಲ್ಲಿ ಏಕತೆ ತಂದವು.

'ವಚನ' ಎಂದರೆ ಸಂಸ್ಕೃತದಲ್ಲಿ ಮಾತು, ಮಾತನಾಡುವುದು, ಅಭಿವ್ಯಕ್ತಪಡಿಸುವುದು ಇತ್ಯಾದಿ ಅರ್ಥಗಳಿವೆ. ಭಾಷೆಯು ಬೆಳೆದಂತೆಲ್ಲಾ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ವಿಕಾಸಗೊಳ್ಳುತ್ತ ಸಾಗಿತು. ಕಾವ್ಯ ಮತ್ತು ಗದ್ಯ ಪ್ರಕಾರಗಳನ್ನು ಮಿಶ್ರಣ ಮಾಡಿದ ಕವಿಗಳು ಚಂಪೂಶೈಲಿಯಲ್ಲಿ ಸಾಹಿತ್ಯವನ್ನು ಕಟ್ಟಿಕೊಟ್ಟರು. ಚಂಪೂ ಶೈಲಿಯ ನಂತರದಲ್ಲಿ ಕನ್ನಡ ಸಾಹಿತ್ಯದಲ್ಲಿ ಮೂಡಿಬಂದುದೇ ವಚನಸಾಹಿತ್ಯ. ವಚನ ಸಾಹಿತ್ಯ ಹುಟ್ಟಿಕೊಳ್ಳಲು ಅನೇಕ ಕಾರಣಗಳಿದ್ದವು. ಬುದ್ಧನ ಕಾಲ, ಶಂಕರಾಚಾರ್ಯರ ಕಾಲದ ನಂತರ ಧರ್ಮದಲ್ಲಿ ಜಟಿಲತೆ ಸಂಕೀರ್ಣತೆಗಳ ನಡುವಿನಲ್ಲಿ ಜನತೆ ನಿಜದ ನೆಲೆ ತಿಳಿಯದೆ ಗೊಂದಲದ ಪರಿಸ್ಥಿತಿಯಲ್ಲಿದ್ದರು. ಮತ್ತೊಂದು ಕಡೆ ಭಾಷೆ ಸಂಸ್ಕೃತ ಭೂಯಿಷ್ಠವಾಗಿತ್ತು. ಅದು ಜನತೆಯ ಆತ್ಮೋನ್ನತಿಯ ಹಂಬಲಕ್ಕಾಗಿ ಹಾಗೂ ಜ್ಞಾನದ ಬೆಳಕಿಗಾಗಿ ಪರಿತಪಿಸುತ್ತಿದ್ದ ಕಾಲಘಟ್ಟವಾಗಿತ್ತು.

ವಚನ ಸಾಹಿತ್ಯ ಕರ್ನಾಟಕದಲ್ಲಿ ಆವಿರ್ಭವಿಸಲು ಪ್ರಧಾನವಾಗಿ ನಾಲ್ಕು ಅಂಶಗಳು ಕಾರಣೀಭೂತವಾಗಿವೆ. ಅವುಗಳೆಂದರೆ, ರಾಜಕೀಯ ಸ್ಥಿತಿ, ಸಾಮಾಜಿಕ ಸ್ಥಿತಿ, ಧಾರ್ಮಿಕ ಸ್ಥಿತಿ, ಸಾಂಸ್ಕೃತಿಕ ಸ್ಥಿತಿ. ಅಂದಿನ ಕಾಲದಲ್ಲಿ ರಾಜಕೀಯ ಶಕ್ತಿಗಳು ಸಾಮಾನ್ಯ ಜನತೆಯನ್ನು ರಾಜಕೀಯ ಬಾಹುಗಳಿಂದ ಬಂಧಿಸಿದ್ದವು. ಜನರನ್ನು ಶೋಷಣೆಯ ಕೂಪಕ್ಕೆ ತಳ್ಳಿದ್ದವು. ವ್ಯವಸ್ಥಿತವಾಗಿ ಪ್ರಭುವರ್ಗ ಮತ್ತು ಪುರೋಹಿತ ವರ್ಗದವರು ಸಮಾಜದ ಕೆಳವರ್ಗದವರನ್ನು ಶೋಷಿಸುತ್ತಿದ್ದರು. ಶೋಷಣೆಗೆ ಒಳಗಾದವರು ಶೋಷಣೆಯಿಂದ ಮುಕ್ತರಾಗಲು ಹೊರಬಂದು ಶರಣರಾದರು.

ಸಮಸ್ತ ಜನರನ್ನು ರಾಜಕಾರಣದ ಕಪಿಮುಷ್ಟಿಯಿಂದ ಬಿಡಿಸುವ ಹೋರಾಟವು ಮೌನವಾಗಿ ಸಾಗುತ್ತಿತ್ತು. ಅನಾದಿಕಾಲದಿಂದಲೂ ಶೋಷಣೆಗೆ ಬಲಿಯಾದವರನ್ನು ಮೇಲೆ ಎತ್ತಬೇಕು, ಇದರಿಂದ ಮುಕ್ತರಾಗಿಸಬೇಕೆಂಬ ಹಂಬಲವೇ ಶರಣರ ಉಗಮಕ್ಕೆ ನಾಂದಿಯಾಯಿತು.

ಆಗಿನ ಜನತೆ ವಿದ್ಯೆಯಿಂದ ವಂಚಿತರಾಗಿದ್ದರು. ವಿದ್ಯೆ ಎಂಬುದು ಬುದ್ಧಿಜೀವಿಗಳಿಗೆ ಪಂಡಿತರಿಗೆ ಮಾತ್ರ ಸಿದ್ಧಿಸಿತ್ತು. ವಿದ್ಯೆಯೆಂಬುದು ಯಾರಪ್ಪನ ಸೊತ್ತಲ್ಲ ಎಂದು ತಿಳಿದ ತಳಸಮುದಾಯದವರು ವಿದ್ಯೆಯನ್ನು ಕಲಿತು ಸಾಂಸ್ಕೃತಿಕ ರಂಗದಲ್ಲಿ ಜಯ ಗಳಿಸಿ ಸೀಮಿತವಲಯದಿಂದ ಹೊರಬಂದು ನೇರವಾಗಿ ಹೋರಾಟ ನಡೆಸಿದವರು ಶರಣರೆನಿಸಿಕೊಂಡರು.

ಈ ನಿಟ್ಟಿನಲ್ಲಿ ಜನರನ್ನು ಸಂಘಟಿಸಲು ಮುಂದಾಳತ್ವ ವಹಿಸಿದವನು ಬಸವಣ್ಣ. ಇವರು ತಳಸಮುದಾಯದ ಜೀವನದ ದಿಕ್ಕನ್ನೇ ಬದಲಿಸಿದರು. ದಲಿತರು, ಶೋಷಿತರು, ಕೆಳವರ್ಗದವರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ. ಅರಮನೆಗಳಿಂದ ಹೊರಬಂದು, ರಾಜಾಶ್ರಯದಿಂದ ದೂರವಾಗಿ, ಪಂಡಿತರ ಕಪಿಮುಷ್ಟಿಯಿಂದ ಪಾರಾಗಿ ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿದ್ದು, ನೆಲದ ಮಾತಿನಲ್ಲಿ ನಳನಳಿಸಿದ್ದು ವಚನಕಾರರಲ್ಲಿ ಮಾತ್ರ. ಜಾತಿ-ಮತ ಪಂಥಗಳನ್ನು ಬಿಟ್ಟು, ದೇಶ-ಭಾಷೆ-ವಯಸ್ಸುಗಳ ಅಂತರಗಳನ್ನು ಮರೆತು, ಮೇಲು-ಕೀಳೆಂಬ ತಾರತಮ್ಯವನ್ನಳಿದು, ಸಾಮಾನ್ಯ ಜನತೆ ಮೊದಲ ಬಾರಿಗೆ ತಮ್ಮನ್ನು ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದು, ಸಾರ್ವಕಾಲಿಕ ಮಹತ್ವದ ಮೌಲಿಕ ಸಾಹಿತ್ಯವನ್ನು ಕೊಟ್ಟಿದ್ದು ೧೨ ನೇ ಶತಮಾನದಲ್ಲಿ ಎಂಬುದು ಗಮನಿಸಬೇಕಾದ ಸಂಗತಿ.

ಬಸವಣ್ಣನ ವಚನ ಸಾಹಿತ್ಯದ ಮುಂದಾಳತ್ವವನ್ನು ವಹಿಸಿಕೊಂಡು, ನೇರವಾದ-ದಿಟ್ಟವಾದ ಭಾಷೆ ಮತ್ತು ನಡವಳಿಕೆಯನ್ನು ರೂಢಿಸಿಕೊಂಡರು. ನೂರಾರು ಶರಣರನ್ನು ಸಂಘಟಿಸಿದರು. ಸಾರ್ವತ್ರಿಕವಾದ ಭ್ರಾತೃತ್ವವನ್ನು ನಡೆದು ತೋರಿಸಿದರು. ಒಬ್ಬ ಸಂತನಾಗಿ, ಸಮಾಜ ಸುಧಾರಕನಾಗಿ, ಕವಿ-ತತ್ವಜ್ಞಾನಿಯಾಗಿ, ಕ್ರಾಂತಿಕಾರಿಯೂ ಧರ್ಮಗುರುವೂ ಆಗಿ, ನುಡಿದಂತೆ ನಡೆದು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ದೀನ-ದಲಿತರ ಉದ್ಧಾರಕ್ಕಾಗಿ ಪಣತೊಟ್ಟಿದ್ದು ಬಸವಣ್ಣನ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ವ್ಯಕ್ತಿ-ವ್ಯಕ್ತಿತ್ವ ಶುದ್ದವಾಗದ ಹೊರತು ಸಮಾಜ ಶುದ್ದವಾಗಲಾರದು ಎಂದು ನಂಬಿದ್ದ ಶರಣರು ಅಂತರಂಗ-ಬಹಿರಂಗ ಶುದ್ಧಿಯನ್ನೇ ತಮ್ಮ ಧರ್ಮದ ಜೀವಾಳ ಮಾಡಿಕೊಂಡರು. ಅಂತೆಯೇ ವಚನಕಾರರು ರಚಿಸಿದ ಸಾಹಿತ್ಯ ಒಂದು ಧರ್ಮದ ಸಾಹಿತ್ಯವಾಗದೆ ಮಾನವ ಕುಲದ ಉದ್ಧಾರವನ್ನು ಬಯುಸುವ ಸಾಹಿತ್ಯವಾಗಿದೆ.

ಜ್ಞಾನಮಾರ್ಗಕ್ಕೆ ತಳಹದಿಯನ್ನು ಹಾಕಿದ ಬಸವಣ್ಣ ಅದರಿಂದ ಪರವಸ್ತು, ಜೀವ, ಸೃಷ್ಟಿ ಮೊದಲಾದ ವಿಚಾರಗಳೆಲ್ಲ ಚರ್ಚೆಯಾಗಿ ಹೊಸಬೆಳಕು ಹುಟ್ಟುವಂತೆ ಮಾಡಿದರು. ಬಸವಣ್ಣ ಸಾಮಾನ್ಯ ಜನರನ್ನು ಮುಟ್ಟುವಂತಹ ಭಾಷಿಕತೆಯಲ್ಲಿ ವಚನಗಳನ್ನು

ರೂಪಿಸಿದರು. ಹಾಗಾಗಿಯೇ ರಾಜ್ಯ, ರಾಷ್ಟ್ರಮಟ್ಟದಲ್ಲಿ ಅಷ್ಟೇ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಇವರ ವಚನಗಳಿಂದ ಪ್ರಭಾವಿತರಾದ ಜನತೆ ಇವರನ್ನು ವಿಶ್ವಮಾನವನೆಂದು ಘೋಷಿಸಿದ್ದಾರೆ. ಕೆ.ಎನ್. ಶ್ರೀಕಂಠನ್ ಅವರು ಉಲ್ಲೇಖಿಸಿದ ಈ ಮಾತುಗಳು ತುಂಬಾ ಪ್ರಸ್ತುತ.

"ಬಸವೇಶ್ವರರು ಗೌತಮ ಬುದ್ಧನಂತೆ ಮೃದು ಸ್ವಭಾವದವರೂ, ಮಹಾವೀರನಂತೆ ಸರಳ ಮನಸ್ಕರೂ, ಧೈರ್ಯಶಾಲಿಯೂ ಆಗಿದ್ದರು. ಬಸವೇಶ್ವರರನ್ನು ಯಾವ ಆಯಾಮದಿಂದ ನೋಡಿದರೂ ಅವರೊಬ್ಬ ನಿಸರ್ಗದ ವಿಸ್ಮಯಕರ ಪ್ರತಿಭಾ ಸೃಷ್ಟಿಯಾಗಿದ್ದಾರೆ". ಎಂದು ಅಭಿಪ್ರಾಯಪಡುತ್ತಾರೆ.

ವಚನ ಸಾಹಿತ್ಯವನ್ನು ಕಟ್ಟುವುದು ಪೂರಕವಾಗಿ ಮತ್ತೊಂದು ವರ್ಗವನ್ನೇ ಸೃಷ್ಟಿ ಮಾಡಿದಂತಾಯಿತು. ಇದರಿಂದ ಶ್ರೇಣೀಕೃತ ಸಮಾಜಕ್ಕೆ ಬಹುದೊಡ್ಡ ಹೊಡೆತ ಬಿತ್ತು. ವ್ಯವಸ್ಥೆಯಲ್ಲಿ ಪ್ರಗತಿಪರ, ಸುಧಾರಣೆ ಹಾಗೂ ವಿಕಾಸಶೀಲವಾದ ಕಾರ್ಯಗಳು ನಡೆದಿದ್ದೂ ಬಿಜ್ಜಳನು ಬಸವಣ್ಣನನ್ನು ಮಾತ್ಸರ್ಯ-ನಿಂದನೆಗಳಿಂದ ಕಾಣುತ್ತಿದ್ದ. ಅದನ್ನು ಬಸವಣ್ಣ ತಾಳ್ಮೆಯಿಂದಲೇ ಅನುಭವಿಸುತ್ತಿದ್ದನು. ನಿತ್ಯವೂ ಬಿಜ್ಜಳನ ನಿಂದನೆಯಿಂದ ರೋಸಿಹೋದ ಬಸವಣ್ಣನು ನಾವೀನ್ಯತೆಯನ್ನು ಒಳಗೊಂಡ ಸರಳಯುಕ್ತವಾದ ಭಾಷಾ ಬೋಧನೆಯಿಂದ ಸಾಮಾನ್ಯ ಜನತೆಯ ಮನಗೆದ್ದನು. ವಚನಕಾರರು ಸದ್ಭಕ್ತಿ-ಸದಾಚಾರಗಳ ತಳಹದಿಯ ಮೇಲೆ ಸ್ಥಾನ, ಜಾತಿ ಭೇದವೆನ್ನೆಣಿಸದೆ ಸಮಾನತೆಯ ಆಧಾರದ ಮೇಲೆ, ಆಂತರಿಕ ಅನುಭವಗಳನ್ನು ಪರಸ್ಪರರು ಹಂಚಿಕೊಂಡು ಚರ್ಚಿಸಿ ಸಮಾನವಾಗಿ ಚಿಂತಿಸಿ ಹೊಂದಾಣಿಕೆಯ ನೆಲೆಯಲ್ಲಿ ಸಾಗುತ್ತಿದ್ದರು. ಈ ರೀತಿಯ ವಿಚಾರ-ಆಚರಣೆಗಳಲ್ಲಿ ಅಂತರಂಗ ಪರಿಶುದ್ಧಿ, ಭಕ್ತಿ, ಪರಮಾತ್ಮನ ಸಾಕ್ಷಾತ್ಕಾರದಲ್ಲಿ ಕಾಯಕವೇ ಕೈಲಾಸವೆಂದುಕೊಂಡರು. ಮರಣವೇ ಮಹಾನವಮಿಯೆಂದುಕೊಂಡಿದ್ದ ಶರಣರು ಲಿಂಗದ ಸಾಮರಸ್ಯದಿಂದ ಧಾರ್ಮಿಕ ವಿಷಯಗಳೊಂದಿಗೆ ಅಸ್ಪೃಶ್ಯರ ಉದ್ಧಾರ, ಸಾಮಾಜಿಕ ಸಮತೋಲನ, ಜಾತಿಭೇದ ನಿರಾಕರಣೆ, ಮಹಿಳೆಯರ ಉನ್ನತಿ, ಕಾಯಕತತ್ವ ಮುಂತಾದ ಸಾಮಾಜಿಕ ವಿಚಾರಗಳಿಗಾಗಿ ಸಮಾವೇಶಗೊಳ್ಳುತ್ತಿದ್ದರು. ಇದೊಂದು ಹೊಸ ಸಾಮಾಜಿಕ ಸಂಘಟನೆಗೆ ನಾಂದಿಯಾಗಿತ್ತು. ಬಸವಣ್ಣನವರು ಕಟ್ಟಿಕೊಂಡ ಶರಣರ ಸಂಘವು ಷಟ್ಸ್ಥಲ (ಆತ್ಮ ಸಾಧನ) ಸಿದ್ಧಾಂತವನ್ನು ರೂಪಿಸಿಕೊಂಡಿತು. ಇದೇ ವೀರಶೈವ ಧರ್ಮದ ಸಿದ್ಧಾಂತವಾಗಿ ಬೆಳೆಯಿತು. ಮನುಷ್ಯನು ದೇವರಿಂದ ಬೇರ್ಪಟ್ಟು ಸಂಸಾರದಲ್ಲಿ ಜನಿಸಿ ಗುರುವಿನ ದೀಕ್ಷೆಯಿಂದ ನಿಜಸ್ವರೂಪವನ್ನು ಅರಿಯುತ್ತಾನೆ. ಶರಣರು ನಡೆಯುವ ದಾರಿಯಲ್ಲಿ ಆರು ಮೆಟ್ಟಿಲುಗಳಿವೆ, ಅವುಗಳ ವಿವೇಚನೆಯೇ ಷಟ್ಸ್ಥಲ ಸಿದ್ಧಾಂತಗಳಾಗಿವೆ. ಅಂಗವೇ ನಿಧಾನವಾಗಿ ವಿಕಾಸಹೊಂದಿ ಲಿಂಗದಲ್ಲಿ ಸಾಮರಸ್ಯ ಪಡೆಯುವ ದಾರಿಯಲ್ಲಿರುವ ಹಂತಗಳು ಇವು ಆರು ರೀತಿಯಲ್ಲಿ ಕಂಡುಬರುತ್ತವೆ. ಭಕ್ತ,

ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಆರು ಹಂತಗಳ ವಿವರಣೆ ವಚನಗಳಲ್ಲಿದೆ.

ಬಸವಣ್ಣನವರ ಧರ್ಮ ಜನ್ಮತಾಳಿದ್ದು ಗುಹೆ, ಅರಣ್ಯ, ವೃಕ್ಷ ಮತ್ತು ಪರ್ವತಗಳಲ್ಲಿ ಅಲ್ಲ, ಅದು ಕಾಯಕ ಜೀವಿಗಳ ನೋವು, ಅಸಹಾಯಕತೆ ವಿಮೋಚನೆ ಮತ್ತು ಆತ್ಮಶೋಧನೆಯ ಹೋರಾಟದ ಮೂಲಕ ಹುಟ್ಟಿದ ವಚನ ಚಳುವಳಿ. ಇಡೀ ದೇಶದಲ್ಲಿ ಹೋರಾಟದ ತುಡಿತದ ಮೂಲಕ ದೇಶಾದ್ಯಂತ ಹರಡುವಂತೆ ಮಾಡಿದ್ದು ವಚನ ಚಳುವಳಿಯ ಪರಂಪರೆ. ಕಾಯಕವೇ ಕೈಲಾಸ, ಅನ್ನದಾಸೋಹ, ಸಹಪಂಕ್ತಿ ಭೋಜನ, ಸ್ತ್ರೀ ಸಮಾನತೆ, ಅಂತರ್‌ಜಾತಿ ವಿವಾಹ ಮುಂತಾದವುಗಳಿಗೆ ಪ್ರೇರಣೆ ನೀಡಿ ವಚನಕಾರರು ನುಡಿದಂತೆ ನಡೆದವರು. ಕಾವ್ಯ, ಕಾದಂಬರಿ, ನಾಟಕಗಳು ಬರೀ ಪಂಡಿತರಿಗೆ ಸಂಬಂಧಿಸಿದ್ದು ಎನ್ನುವ ಮಾತು ತಪ್ಪು ಎನ್ನುವಷ್ಟರ ಮಟ್ಟಿಗೆ ಎಲ್ಲರನ್ನು ತಲುಪಿದವು. ಸಾಧಾರಣ ಸ್ತ್ರೀಯರು, ತಳಸಮುದಾಯದವರು ಸರಳವಾಗಿ, ಕೇಳುಗರಿಗೆ ಅರ್ಥವಾಗುವಂತೆ, ವಚನ ಸಾಹಿತ್ಯ ರಚಿಸಿದರು. ಆಯ್ದಕ್ಕಿ ಲಕ್ಕಮ್ಮ – ಮಾರಯ್ಯ, ಚೆನ್ನಬಸವಣ್ಣ, ಸೂಳೆಸಂಕವ್ವ, ಮುಂತಾದವರು ಇದಕ್ಕೆ ಉದಾಹರಣೆ. ಶೂರರಾದ ಕರಿಯ, ಹುಲಿಯ, ಬೀರ, ಜಟ್ಟಿಗ ಮುಂತಾದವರು ಇಲ್ಲಿ ದೈವತ್ವಕ್ಕೇರಿದರು. ಇಂಥ ಸಮಾಜದ ಮೂಲಸ್ಥಿತಿಯನ್ನು ಕಾರ್ಲ್ ಮಾರ್ಕ್ಸ್ ಆದಿಮ ಸಮತಾವಾದಿ ಸಮಾಜ ಎಂದು ಕರೆದಿದ್ದಾರೆ.

ಅನೇಕ ಧರ್ಮ–ಪಂಥಗಳಲ್ಲಿ ಸಿಲುಕಿ ಅಸಹಾಯಕರಾಗಿ, ದೇವಸ್ಥಾನಗಳಲ್ಲಿ ಬಿಟ್ಟಿ ಕೂಲಿ ಆಳುಗಳಾಗಿ, ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ತಾವು ಬೆಳೆದ ಉತ್ಪಾದನೆಗಳನ್ನು ರಾಜರಿಗೆ, ಒಡೆಯರಿಗೆ ತೆರಿಗೆ ಮತ್ತು ಕಂದಾಯ ರೂಪದಲ್ಲಿ ನೀಡಬೇಕಾಗಿತ್ತು, ನಂತರ ದೇವಸ್ಥಾನಗಳಿಗೆ ಕಡ್ಡಾಯವಾಗಿ ದಾನ–ಧರ್ಮ ಮಾಡಬೇಕಿತ್ತು. ಇದರಿಂದ ಕಾಯಕ ಜೀವಿಗಳಾಗಿದ್ದ ತಳಸಮುದಾಯವು ದುಸ್ಥಿತಿಯ ಜೀವನವನ್ನು ನಡೆಸುವ ಪರಿಸ್ಥಿತಿ ಇತ್ತು. ಈ ವಿಷಯವಾಗಿ ಯಾರ ಬಳಿಯೂ ಚಕಾರವೆತ್ತುವಂತೆ ಇರಲಿಲ್ಲ. ಕೊನೆಗೆ ವಾಕ್ ಸ್ವಾತಂತ್ರ್ಯವೂ ಇರಲಿಲ್ಲವಾದ್ದರಿಂದ, ಶ್ರಮಜೀವಿಗಳಿಗೆ ಮಠ–ಮಂದಿರದ ಮೇಲೆ ಅಧಿಕಾರ ಇರಲಿಲ್ಲವಾದ್ದರಿಂದ ಶ್ರಮಿಕರಿಗೆ ಪ್ರಭುಗಳ ಮೇಲೆ ಬೇಸರ ಉಂಟಾಗಿತ್ತು. ಬಸವಣ್ಣನ ಉಪದೇಶವು ಎಲ್ಲರ ಮೇಲೆ ಪ್ರಭಾವ ಬೀರಿದ್ದರಿಂದ 'ಅನುಭವ ಮಂಟಪ'ದ ಮೂಲಕ ತಮ್ಮ ಟೀಕೆ–ಟಿಪ್ಪಣೆಗಳನ್ನು ಮಾಡುತ್ತಾ, ತಿರಸ್ಕಾರ ಮಾಡುತ್ತಾ, ಮನುಷ್ಯತ್ವವನ್ನು ಎತ್ತಿಹಿಡಿಯುತ್ತ, ದಾಸೋಹ ಕಾಯಕದಲ್ಲಿ ತೊಡಗಿಸಿಕೊಂಡರು.

ಈ ಸಂದರ್ಭದಲ್ಲಿ ಬಸವಣ್ಣನವರಿಗೆ ಕಾಯಕವು ಮಹಾನ್ ಅಸ್ತ್ರವಾಗಿ ಕಂಡುಬರುತ್ತದೆ. ಭೌತ ವಿಜ್ಞಾನಿ ಬಿ.ಜೆ. ಮೂಲಿಮನಿ ಅವರು ಹೇಳುವಂತೆ "ಶರಣರ ಕಾಯಕ ಎಂಬುದು ಮಾನವನ ದೈಹಿಕ, ಮಾನಸಿಕ ಮತ್ತು ಅನುಭಾವಿಕ ನೆಲೆಗಳಿಗೆ ಸಂಬಂಧಿಸಿದ ಎಲ್ಲಾ ಕಾರ್ಯಚಟುಚಟಿಕೆಗಳ ಅತ್ಯುನ್ನತ ಸಾಕ್ಷಾತ್ಕಾರದ ರೂಪ" ಎನ್ನುತ್ತಾರೆ. ಶರಣರ ಉಗಮವೇ ಹೊಸದನ್ನು ಹೇಳುವಂಥದ್ದು. ಬದಲಾವಣೆಯೇ ಬಾಳಿನ ಒಗ್ಗರಣೆ ಎಂಬುಂತೆ, ಹೊಸದು ಎಂಬುದು ಹಳೆಯದರ ನಡುವೆ ಸೇರಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಎಲ್ಲಿಯೋ ಇರುವುದನ್ನು ಹುಡುಕಿ ತಲೆ ಕೆಡಿಸಿಕೊಳ್ಳುವುದರ ಬದಲು ಮುಂದೆ ಇರುವುದನ್ನು ನೋಡಿ ಕಲಿತು ಸುಖಿಸಬೇಕು.

ಹಳೆಯ ದಾರಿಗಳನ್ನು ಅಳಿಸದೆ ಹೊಸ ದಾರಿಗಳನ್ನು ತುಳಿಯುವ ಅಗತ್ಯವನ್ನು ಸಿದ್ಧರಾಮನೇ ಒಂದು ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ.

ಅಂದಿನವರು ನಡೆದ ದಾರಿ ಇಂದಿನವರು ನಡೆದರು

ಇಂದಿನವರು ನಡೆದ ದಾರಿ ಅಂದಿನವರು ಕಾಣರು

ಈ ಮಾತು ವಚನ ಸಾಹಿತ್ಯ ರೂಪದ ಇತಿಹಾಸದ ದೃಷ್ಟಿಯಿಂದಲೂ ನಿಜ. ಹಳೆಯದಾದ ಕಾವ್ಯ ಮಾರ್ಗವನ್ನು ಬಿಟ್ಟು "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ". ಹೊಸ ಪಂಥದ ಶೋಧಕರದು ಹಳೆಯ ದಾರಿ ತುಳಿಯುವ ಜಡಪಂಥವಾಗಬಾರದು, ಮುಂದಿನ ಸಾಮಾಜಿಕ ಸಂದರ್ಭಗಳು ಇಂಥ ಕಾರಣಗಳಿಂದಾಗಿಯೇ ರೂಪುಗೊಂಡಿವೆಯೆಂದು ಹಿಂದಿನವರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಹೊಸದಾರಿ ಹಿಡಿಯಬೇಕೆಂಬ ಒಂದು ಆಶಯ ನಮ್ಮನ್ನು ಎಲ್ಲಾ ರೀತಿಯಲ್ಲೂ ಮುನ್ನಡೆಸುವುದರ ಮೂಲಕ ಹೊಸ ಪೀಳಿಗೆ ತುಡಿಯುವಂತೆ ಮಾಡುತ್ತದೆ. ಸಾಮಾಜಿಕ ಚಿಂತಕರಿಗಲ್ಲದೆ ಹಿಂದಿನವರೆಗೆ ಗೊತ್ತಿರುವುದಿಲ್ಲ ಎಂಬ ಸತ್ಯ ಅರಿವಾಗುತ್ತದೆ, ಇದು ಪ್ರಗತಿಯ ಸೂಚನೆ. ನಾವು ಹೊಸದೊಂದಕ್ಕೆ ತೆರೆದುಕೊಳ್ಳುವಂತೆ, ಮುಕ್ತವಾಗಿ ಚರ್ಚಿಸುವಂತೆ ಮಾಡುತ್ತದೆ. ನಿಯಮದಂತೆ ಅದನ್ನು ಸರಿಯಾದ ಮಾರ್ಗದಲ್ಲಿ ಅನುಸರಿಸುವಂತೆ ಮಾಡುತ್ತದೆ. ಬೌದ್ಧಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮಾರ್ಪಾಡಾಗಲು ಕಾರಣವಾಗುತ್ತದೆ.

ವಚನ ಸಾಹಿತ್ಯದ ಸಾಧನೆಯ ಹಾದಿಯಲ್ಲಿ ಭಾಷೆ ಮತ್ತು ಚಿಂತನೆಯ ಹೊಸತನದಿಂದಾಗಿ ಸಮಾಜದ ಕಡೆಗೆ ಜನರು ಮುಖ ಮಾಡುವಂತಾಯಿತು. ಯಾರೂ ಮೇಲಲ್ಲ ಯಾರೂ ಕೀಳಲ್ಲ ಎನ್ನುವಂತೆ ದೊಡ್ಡ ದೊಡ್ಡ ಶರಣರ ಮುಂದೆ ತೀರ ಸಾಮಾನ್ಯರಾದ ಸ್ತ್ರೀಯರೂ, ದೀನ-ದಲಿತರೂ ತಳಸಮುದಾಯದ ಎಲ್ಲಾ ವರ್ಗದವರೂ ವಚನಗಳ ರಚನೆಯಲ್ಲಿ ಕೈಯಾಡಿಸುವಂತೆ ಪ್ರೇರಣೆ ನೀಡಿ ಸಾಹಿತ್ಯದ ವಾತಾವರಣ

ಎಲ್ಲೆಡೆ ಬೆಳೆಯುವುದಕ್ಕೆ ಕಾರಣರಾದವರು ಶರಣರು. ಅವರು ಯಾವುದೇ ಕಾಲದ ಮಹಿಮೆಗೆ ಮತ್ತು ರಾಜನ ಬೆಂಬಲಕ್ಕೆ ನಿಲ್ಲದೆ ಮೌನವಾಗಿದ್ದು ವಚನಗಳ ಮೂಲಕ ತೀರುಗೇಟು ನೀಡುತ್ತಿದ್ದರು. ಅನುಭವ ಮಂಟಪ ಎಂಬ ಹೆಮ್ಮರದ ಕೆಳಗೆ ಸಣ್ಣ ಗಿಡಗಳು ಸೇರಿ ರಕ್ಷಣೆ ಪಡೆಯುವಂತೆ ಎಲ್ಲಾ ಸಾಮಾನ್ಯ ಶರಣರಿಂದ ವಚನೋದ್ಯಾನವು ಬೆಳವಣಿಗೆಯನ್ನು ಹೊಂದಲು ಸಾಧ್ಯವಾಯಿತು. ಹಳೆಯ ಸಾಮಾಜಿಕ ವ್ಯವಸ್ಥೆಗೆ ಉಗ್ರವಾದ ಪ್ರತಿಕ್ರಿಯೆಯನ್ನು ತೋರಿ ಹೊಸ ದಿಗಂತದ ಕಡೆ ದೃಷ್ಟಿಹರಿಸುವುದು ಈ ನವಪಂಥದ ಗುರಿಯಾಗಿತ್ತು. ಭಕ್ತಿಸುಧೆಯ ಮಹಾಪೂರವನ್ನು ಹರಿಸಿ ಎಲ್ಲಾ ಕಡೆ ಜ್ಞಾನಜ್ಯೋತಿ ಎಂಬ ದೀಪವು ಆವರಿಸಲು, ಕಂದಾಚಾರವು ಮರೆಯಾಗಿ ಸುತ್ತಣ ಸಮಾಜಕ್ಕೆ ಜ್ಞಾನದೀವಿಗೆಯನ್ನು ಒಬ್ಬರ ಕೈಯಿಂದ ಒಬ್ಬರಿಗೆ ಹರಡುವಂತೆ ಮಾಡಿದರು.

ವಚನಕಾರರು ತಾವು ಬರೆದದ್ದು ಸಾಹಿತ್ಯವೋ ಅಲ್ಲವೋ ಎಂಬುದರ ಬಗ್ಗೆ ತಟಸ್ಥರಾಗಿದ್ದರೂ ಅವುಗಳನ್ನು ಇಂದು ನಾವು ಸಾಹಿತ್ಯವೆಂದೇ ಪರಿಗಣಿಸಬೇಕಾಗುತ್ತದೆ. "ಆನು ಒಲಿದಂತೆ ಹಾಡುವೆ" ಎಂದ ಬಸವಣ್ಣನವರ ಮಾತನ್ನು ನಾವು ವಚನಕಾರರ ಕಾವ್ಯತತ್ವ ಎಂದೇ ಭಾವಿಸುತ್ತೇವೆ. ವಚನಕಾರರು ತಮ್ಮ ಹೋರಾಟ ಪ್ರಾರಂಭಿಸಿದ್ದು ಧಾರ್ಮಿಕ ಕ್ಷೇತ್ರದಿಂದ. ಅವರಿಗೆ ಪ್ರಮುಖವಾದದ್ದು ಧರ್ಮ. ಅವರು ಮೊದಲು ಶರಣರು, ನಂತರ ವಚನಕಾರರು. ಧರ್ಮ ಪ್ರಚಾರಕ್ಕಾಗಿ ಅವರು ಸಾಹಿತ್ಯವನ್ನು ಬಳಿಸಿಕೊಂಡರೇ ಹೊರತು ಸಾಹಿತ್ಯ ಪ್ರಚಾರಕ್ಕಾಗಿ ಧರ್ಮದ ಆಸರೆಯನ್ನು ಪಡೆಯಲಿಲ್ಲ. ಕ್ರಾಂತಿಯೆಂದರೆ ಶೋಷಣೆಗೆ ಮೂಲವಾದ ಎಲ್ಲ ದುಷ್ಟಶಕ್ತಿಗಳ ದಮನ. ವಚನಕಾರರು ಮೌಢ್ಯವನ್ನು ತೊಲಗಿಸಿ ಅಸಹಾಯಕರಾಗಿ ಬದುಕಿದ್ದ ಜನತೆಯಲ್ಲಿ ಜಾಗೃತಿಯನ್ನು ಬಿತ್ತಿದವರು. ಆದರೆ ಈ ಎಲ್ಲಾ ಸಾಮಾಜಿಕ ಸಮಸ್ಯೆಗಳನ್ನು ಇವರು 'ಧಾರ್ಮಿಕತೆಯ' ಮೂಲಕ ನೋಡಿದರು. ಅದಕ್ಕಾಗಿಯೇ–

ಉಳ್ಳವರು ಶಿವಾಲಯ ಮಾಡುವರು

ನಾನೇನು ಮಾಡಲಿ ಬಡವನಯ್ಯ!

ಎನ್ನ ಕಾಲೇ ಕಂಬ ದೇಹವೇ ದೇಗುಲ

ಶಿರ ಹೊನ್ನ ಕಳಶವಯ್ಯಾ!

ಕೂಡಲಸಂಗಮದೇವಾ ಕೇಳಯ್ಯ

ಸ್ಥಾವರಕ್ಕಳಿವುಂಟು ಜಂಗಮಕ್ಕಲ್ಲ

ಎಂಬ ಕೀಳರಿಮೆಯ ಭಾವತಾಳಿ ಉಳ್ಳವರ-ಬಡವರ ನಡುವೆ ಅಂತರವನ್ನು ಕಡಿಮೆಮಾಡುವತ್ತ ದೃಷ್ಟಿ ಹಾಯಿಸಿದನು. ಉಳ್ಳವರನ್ನು ಎದುರು ಹಾಕಿಕೊಳ್ಳದೇ ಇದ್ದ ಪರಿಸರದಲ್ಲೇ ಸುಧಾರಣೆ ತರಲು ಪ್ರಯತ್ನಿಸಿದರು. ಅಂತರಂಗದಲ್ಲಿ ಸುಧಾರಣೆ ಕಾಣದಿದ್ದಾಗ ತಮ್ಮ ದೇಹವನ್ನೇ ದೇಗುಲವನ್ನಾಗಿ ಮಾಡಿಕೊಂಡು ತೃಪ್ತಿಪಟ್ಟುಕೊಂಡರು. ಉಳ್ಳವರ ವಿರುದ್ಧ ಹೇಳಬೇಕಾದ ರೊಚ್ಚು ಧಾರ್ಮಿಕ ಚೌಕಟ್ಟಿನೊಳಗಡೆ ಸಿಕ್ಕಿ ಸುಣ್ಣಾಗಿ, ನಿಟ್ಟಿಸಿರುಬಿಟ್ಟು ನೋವಾಗಿ ಕಂಡುಂದಿತು, ಕೊನೆಗೆ ಕೂಡಲಸಂಗಮನೋ, ಗುಹೇಶ್ವರನೋ, ಚೆನ್ನಮಲ್ಲಿಕಾರ್ಜುನನೋ ಇನ್ನಾವುದೋ ತಮ್ಮ ಇಷ್ಟದೈವದ ಮೇಲೆ ಹಾಕಿ ಕೈಮುಗಿದು ಕುಳಿತರು. ಅವರೇ ಮಾಡಿಕೊಂಡ ಭವಿ-ಭಕ್ತ ಎಂಬ ಎರಡು ಗುಂಪುಗಳು ಮತ್ತು ಜಾತಿಗಳನ್ನು ನಿರಾಕರಿಸಿದರು. ಭವಿ ಎಂದ ಕೂಡಲೇ ವಚನಕಾರರಿಗೆ ಎಷ್ಟು ಸಿಟ್ಟು ಬರುತ್ತದೆಯೋ ಅದೇ ಉಳ್ಳವರು-ಶ್ರೀಮಂತರ ಮೇಲೆ ಖಂಡಿತಾ ಬರುವುದಿಲ್ಲ. ಭಕ್ತನಿಗೆ ಬೆಲೆಕೊಟ್ಟು ಆತನಿಗೆ ತಮ್ಮಲ್ಲಿ ಪ್ರಮುಖ ಸ್ಥಾನ ಕೊಟ್ಟರು.

ಜ್ಞಾನದ ಬೇರಿನಿಂದ ಪ್ರಶ್ನೆಗಳ ಸಂಘರ್ಷವಾಗಿ ಹುಟ್ಟಿ ಸಂದೇಹಗಳ ತಾಕಲಾಟದಲ್ಲಿ ಹೊಸ ವಿಚಾರಗಳು ಜನ್ಮತಾಳುತ್ತವೆ. ಇಂತಹ ವಿಚಾರಗಳ ವಿಶ್ಲೇಷಣೆಯೇ ವೈಚಾರಿಕತೆಯಾಗುತ್ತದೆ. ಅಂದಂದಿನ ಸಮಾಜ ವ್ಯವಸ್ಥೆಯಲ್ಲಿನ ಮೌಲ್ಯಗಳನ್ನು ಪ್ರಶ್ನಿಸುವುದರ ಮೂಲಕ ಸಂದೇಹ ಪಡುವುದರೊಂದಿಗೆ ಒಬ್ಬ ವಿಚಾರವಾದಿ ಹೊಸ ಮೌಲ್ಯಗಳ ಸೃಷ್ಟಿಗೆ ಕಾರಣನಾಗುತ್ತಾನೆ. ಮೌಲ್ಯಗಳ ನಡುವೆ ನಡೆಯುವ ಸಂಘರ್ಷವು ಹೊಸ ಬದುಕಿನ ಹುಟ್ಟಿಗೆ ಕಾರಣವಾಗುತ್ತದೆ. ವಾಸ್ತವತೆಯ ಹಿನ್ನೆಲೆಯಲ್ಲಿ ಜನಪರವಾಗಿ ಆಲೋಚಿಸುವುದೇ ನಿಜವಾದ ವೈಚಾರಿಕತೆ. ವಸ್ತುನಿಷ್ಠವಾದ ಆಧಾರಗಳ ನಡುವೆ ವೈಚಾರಿಕತೆ ಹುಟ್ಟುತ್ತದೆ. ಇಂತಹ ವೈಚಾರಿಕತೆಯಿಂದ ಅಂದಂದಿನ ಸಮಾಜದ ಜನಸಮುದಾಯದ ಆರೋಗ್ಯಕರ ಬೆಳವಣಿಗೆಗೆ ಸಹಾಯಕವಾಗುತ್ತದೆ. ಇದೇ ಮುಂದೆ ದೊಡ್ಡ ಕ್ರಾಂತಿಯಾಗಿ ಬೆಳೆಯಿತು.

ವಚನಕ್ರಾಂತಿಯು ಹೆಮ್ಮರವಾಗಿ ಬೆಳೆದು ಮನುಷ್ಯನ ವಿಚಾರಗಳನ್ನು ಬೆಳೆಸದೇ ಆತನ ಶೋಷಿತ ಬದುಕನ್ನು ಬದಲಿಸಲಿಕ್ಕಾಗುವುದಿಲ್ಲ. ಆದ್ದರಿಂದ ನಿಜವಾದ ಕ್ರಾಂತಿಯ ಪ್ರಾರಂಭವನ್ನು ವೈಚಾರಿಕತೆ ಮಾಡುತ್ತದೆ. ಒಡೆದ ಮನಸ್ಸುಗಳನ್ನು ಕಟ್ಟುವ ಕೆಲಸವನ್ನು ಕನ್ನಡದ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ಆಗಾಗ ಇಂತಹ ಕ್ರಾಂತಿಗಳು ಕನ್ನಡದ ನೆಲದಲ್ಲಿ ನಡೆದಿವೆ, ನಡೆಯುತ್ತಲೂ ಇವೆ. ಹೆಣ್ಣು, ಹೊನ್ನು, ಮಣ್ಣುಗಳಿಗಾಗಿ ಬಡಿದಾಡಿದವರೇ ಹೆಚ್ಚು ಜನ. ಹೊಸ ವಿಚಾರಗಳ ಸ್ಥಾಪನೆಗಾಗಿ ವಿಚಾರವಾದದ ಅಸ್ತಿತ್ವಕ್ಕಾಗಿ ಹೋರಾಡಿದವರು ಕಡಿಮೆ. ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಗೆ ತನ್ನದೇ ಆದ ಒಂದು ಪರಂಪರೆಯಿದೆ. ಆ ಪರಂಪರೆ ವಚನಕಾರರಿಂದ ಪ್ರಾರಂಭವಾಗುತ್ತದೆ. ವಚನಸಾಹಿತ್ಯ ಸಂದರ್ಭವನ್ನು "ಸಂಕ್ರಮಣ ಯುಗ"ವೆಂದು ಗುರುತಿಸಬಹುದಾಗಿದೆ.

ವಿಚಾರ ಸಂಘರ್ಷ ನಡೆಸಿ ಜನಪರ ಹೋರಾಟವನ್ನು ಹುಟ್ಟುಹಾಕಿದ ವಚನಕಾರರ ಮಹತ್ವ, ಪ್ರಾಮುಖ್ಯತೆ ಗೊತ್ತಾಗದೆ ಹೋಗಿದೆ. ರಾಷ್ಟ್ರಮಟ್ಟದಲ್ಲಿ ಪ್ರಮುಖ ಸ್ಥಾನ ಪಡೆದು ಎಲ್ಲಾ ಸಮುದಾಯದ ಗಮನ ಸೆಳೆಯಬೇಕಾಗಿದ್ದ ಈ ಚಳುವಳಿ ಕನ್ನಡ ನೆಲಕ್ಕೆ ಮಾತ್ರ ಸೀಮಿತಗೊಂಡು ವರ್ಣವ್ಯವಸ್ಥೆಯನ್ನು, ರಾಜಪರ ಸಂಸ್ಕೃತಿಯನ್ನು ಧಿಕ್ಕರಿಸಿತು. ವಚನ ಚಳುವಳಿ ಪ್ರಮುಖವಾಗಿ ಧರ್ಮಪರ ಸಂಸ್ಕೃತಿಯನ್ನು ಒಪ್ಪಿಕೊಂಡು ನಂತರ ಜನಪರವಾದ ಸಾಮಾಜಿಕ ಹೋರಾಟದತ್ತ ಕಣ್ಣು ಹಾಯಿಸಿತು. ಆರ್ಥಿಕ ಕ್ರಾಂತಿಯೇ ನಿಜವಾದ ಕ್ರಾಂತಿ ಎಂದು ತಿಳಿದ ವಿಶ್ವದ ವಿಚಾರವಾದಿಗಳ ದೃಷ್ಟಿಯಲ್ಲಿ ಧರ್ಮಸುಧಾರಣೆಯತ್ತ ಗಮನ ಕೊಡುವ ವಚನ ಚಳುವಳಿ ಕ್ರಾಂತಿಯ ಹಂತವನ್ನು ತಲುಪದೇ ಹೋಗಿದೆ. ಮಾನವೀಯ ಕಳಕಳಿಯೊಂದಿಗೆ ಶೋಷಿತರ ಪರವಾಗಿ ಕಿಡಿಗೊಂಡ ಈ ಚಳುವಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಮೊಟ್ಟಮೊದಲು ಕನ್ನಡ ನೆಲದಲ್ಲಿ ವೈಚಾರಿಕ ಸಂಘರ್ಷ ನಡೆಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ವಿಮರ್ಶೆ-ಸ್ವವಿಮರ್ಶೆ ಜೊತೆಜೊತೆಯಾಗಿಯೇ ನಡೆದಿದೆ. ಆದ್ದರಿಂದಲೇ ಅವರ ವಚನಗಳಲ್ಲಿ ಆತ್ಮಶೋಧನೆ ಹೆಚ್ಚಾಗಿ ಕಂಡುಬರುತ್ತದೆ.

ಎಲ್ಲ ಎಲ್ಲವನರಿದು ಫಲವೇನಯ್ಯ

ತನ್ನ ತಾನರಿಯ ಬೇಕಲ್ಲದೆ?

ತನ್ನಲ್ಲಿ ಅರಿವು ಸ್ವಯವಾಗಿರಲು

ಅನ್ಯರ ಕೇಳಲುಂಟೆ?

ಜಾತಿ-ಲಿಂಗ, ವಯಸ್ಸುಗಳಿಂದ ಹೊಡೆದಾಡುತ್ತಿದ್ದ ಶತಮಾನಗಳ ಯಜಮಾನ ಸಂಸ್ಕೃತಿಗೆ ಅಲ್ಲಮಪ್ರಭು ಸಿಡಿಲಿನಂತೆ ಎರಗಿದ್ದಾನೆ. ಅರಿವು-ಆಚಾರ, ಅನುಭವಸ್ಥರ ನುಡಿಮುತ್ತು, ಸಜ್ಜನರೊಂದಿಗೆ ಚರ್ಚೆ ಇತ್ಯಾದಿ ಅಂಶಗಳ ಬಗೆಗೆ ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ. 'ಅರಿವಿಂಗೆ ಹಿರಿದು ಕಿರಿದುಂಟೆ?' 'ಅರಿವೇ ಗುರು' ಎಂಬಂತೆ ಶರಣ ಸಜ್ಜನರ ಅನುಭವದ ನುಡಿಗಳಿಗೂ ಹೆಚ್ಚಿನ ಮಹತ್ವ ನೀಡಿದ್ದಾರೆ, ಶರಣರ ವಿಚಾರಗಳಿಂದ ಮತ್ತು ವಿಚಾರವಾದಿಗಳ ಸಹವಾಸದಿಂದ ಮೂರ್ಖ ಕೂಡ ಮನುಷ್ಯನಾಗಬಲ್ಲ.

ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ;

ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ:

ನಿಮ್ಮ ಶರಣರ ಸೂಳ್ನುಡಿಯನೊಂದರಗಳಿಗೆಯಿತ್ತಡೆ

ನಿಮ್ಮನಿತ್ತೆ ಕಾಣ ರಾಮನಾಥ

ವೈದಿಕ ಪರಂಪರೆಯಲ್ಲಿ ತಳ ಸಮುದಾಯದವರಿಗೆ ನಿರಂತರ ಶೋಷಣೆ ನಡೆಸಲು ರಾಜರ ಒಪ್ಪಿಗೆ, ಜನತೆಯ ಬೆಂಬಲ ಎರಡೂ ದೊರೆತಿದ್ದ ಸಂದರ್ಭದಲ್ಲಿ ಪುರೋಹಿತಶಾಹಿ ವರ್ಗದ ರಾಜಕೀಯದಿಂದ ದೂರ ಉಳಿದಿದ್ದ ವಚನಕಾರರು ಇಂತಹ ಸಂದಿಗ್ಧ ಸಂದರ್ಭದಲ್ಲಿ ಧರ್ಮದ ಮುಖಾಂತರ ಮಾತನಾಡುವುದು ಅನಿವಾರ್ಯವಾಗಿತ್ತು. ದೇವರು–ಧರ್ಮಗಳ ವ್ಯಾಖ್ಯೆಯನ್ನು ಬದಲಾಯಿಸಿದರು. ವಚನಕಾರರ ಕಾಲಕ್ಕೆ ಧರ್ಮ–ದಯೆಯಾಯಿತು, ಕರ್ಮ–ಕ್ರಿಯೆಯಾಯಿತು, ದಯೆಯೇ–ಧರ್ಮದ ಮೂಲವಾಯಿತು. "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" ಎಂಬಂತಹ ನುಡಿಮುತ್ತುಗಳೊಂದಿಗೆ ಜನಸಮೂಹದಲ್ಲಿ ಬೇರೂರಿದ್ದ ಮೌಢ್ಯವನ್ನು-ತೊಲಗಿಸಿದರು. ಬಿಜ್ಜಳನ ಕಲ್ಯಾಣದಲ್ಲಿ ಬಸವಣ್ಣನವರು ಮಹಾಮನೆಯಲ್ಲಿ ಮತ್ತು ಅನುಭಾವ ಗೋಷ್ಠಿಯಲ್ಲಿ ತೊಡಗಿದ್ದ ಶಿವಶರಣರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗತೊಡಗಿತು. ಈ ಗೋಷ್ಠಿಯಲ್ಲಿ ಶರಣರಂತೆ ಶರಣೆಯರು ಇದ್ದದ್ದು ಒಂದು ವಿಶೇಷ ಸಂಗತಿಯಾಗಿದೆ. ಶರಣರು ಸತ್ಯವನ್ನು ಮಾತಿನ ಮೂಲಕವಾಗಿ ಅಭಿವ್ಯಕ್ತಿಸುವಾಗ ಅಲ್ಲಿ ಹುಟ್ಟುವ ಸಮಸ್ಯೆಗಳ ಬಗ್ಗೆ ಶರಣರ ಅರಿವು ಪ್ರಖರವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಅವರ ಈ ಅರಿವು ಕನ್ನಡ ಭಾಷೆಯ ಮೇಲೆ ಉಂಟು ಮಾಡಿದ ಪರಿಣಾದ ಅನ್ಯಾದೃಶವಾಗಿರುವುದರಿಂದ ಸಾಹಿತ್ಯದ ದೃಷ್ಟಿಯಿಂದ ವಚನಗಳನ್ನು ಪರಿಶೀಲಿಸಬೇಕಾಗುತ್ತದೆ.

ಅಧ್ಯಾಯ-೨

ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ರಾಜಕಾರಣ ಮತ್ತು ಸಮಾಜ

ಜೇಡರ ದಾಸಮಯ್ಯನ ಕಾಲ ಸುಮಾರು ೧೧೪೦ ಎಂದಾದರೆ, ಅದನ್ನು ಅಥವಾ ಅದಕ್ಕಿಂತ ಹಿಂದಿನ ಕಾಲವನ್ನು ವಚನ ಸಾಹಿತ್ಯದ ಆರಂಭದ ಯುಗವೆಂದು ತೆಗೆದುಕೊಳ್ಳಬೇಕಾಗುತ್ತದೆ. ವಚನಸಾಹಿತ್ಯದ ಆರಂಭ ಯುಗವಾಗಲೀ, ಅದರ ಉತ್ಕರ್ಷ ಕಾಲವಾಗಲೀ, ಕಲ್ಯಾಣಚಾಲುಕ್ಯರ ಮತ್ತು ಅವರ ಕಾಲದ ಸಾಮಂತರಾಗಿದ್ದವರ ಸಮಯದಲ್ಲಿ ಕಂಡುಬರುತ್ತದೆ. ವಚನಸಾಹಿತ್ಯದ ಸ್ವರೂಪ, ವೈಶಿಷ್ಟ್ಯಗಳನ್ನು ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಕವಾಗಿ ಪರಿಸ್ಥಿತಿಗಳು ನಿರ್ಧರಿಸುತ್ತವೆ. ವಚನಸಾಹಿತ್ಯವನ್ನು ಸಾಹಿತ್ಯವಾಗಿ ಮತ್ತು ಒಂದು ಸಾಮಾಜಿಕ ಆಂದೋಲನವಾಗಿ ಅರ್ಥಮಾಡಿಕೊಳ್ಳುವವರು ಅದು ಮೂಡಿಬಂದ ಕಾಲದ ಬೆಳವಣಿಗೆಗಳನ್ನು ಅರ್ಥಮಾಡಿಕೊಳ್ಳುವುದು ಅಗತ್ಯ.

ಕರ್ನಾಟಕ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರದು ಒಂದು ಉಜ್ವಲ ಯುಗ, ಅವರಲ್ಲಿ ಅತ್ಯಂತ ಪ್ರಸಿದ್ಧನಾದವನು ೬ನೇ ವಿಕ್ರಮಾದಿತ್ಯ ಕ್ರಿ.ಶ. ೧೦೭೭ ರಿಂದ ೧೧೨೭ ತಾನು ಪಟ್ಟಕ್ಕೆ ಬಂದ ದಿನದಿಂದ ಚಾಲುಕ್ಯವಿಕ್ರಮ ಶಕೆಯನ್ನು ಆರಂಭಿಸಿದ ಮಹಾಪರಾಕ್ರಮಿ.

ರಾಜಕೀಯ ವಲಯಗಳಲ್ಲಿ ಹೆಚ್ಚಾಗಿ ಕೇಳಿಬರುತ್ತಿದ್ದ ಹೆಸರು ಬಿಜ್ಜಳ ರಾಜನದಾಗಿತ್ತು. ಮೊದಲು ಪ್ರಸಿದ್ಧರಾದವರು ಕಲ್ಯಾಣ ಚಾಲುಕ್ಯರು. ರಾಷ್ಟ್ರಕೂಟರನ್ನು ಸೋಲಿಸಿದ ಕಲ್ಯಾಣಚಾಲುಕ್ಯರು ತೈಲಪನಿಂದ ವಿಕ್ರಮಾದಿತ್ಯನವರಿಗೆ ಇದ್ದು ನಂತರ ಅವರ ಸಾಮ್ರಾಜ್ಯ ಅಂಧ:ಪತನವಾಗಲು ಪ್ರಾರಂಭವಾಯಿತು. ಮೂರನೇ ತೈಲಪ ಕಲ್ಯಾಣ ಚಾಲುಕ್ಯರಲ್ಲೆಲ್ಲ ಬಹಳ ದುರ್ಬಲನಾದ ರಾಜ. ಇವನ ಕಾಲದಲ್ಲಿ ಸಾಮಂತ ಬಿಜ್ಜಳ ಕ್ರಮೇಣ ಪ್ರಬಲನಾಗುತ್ತ ತಾನೇ ಚಕ್ರವರ್ತಿಯಾದನು.

ರಾಜನ ಜೊತೆ ಇದ್ದುಕೊಂಡು ರಾಜತ್ವವನ್ನು ವಿರೋಧಿಸುತ್ತ ಬಂದ ಬಸವಣ್ಣ ಕಲ್ಯಾಣನಗರದಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿದ್ದನು. ರಾಜನನ್ನೇ ಧಿಕ್ಕರಿಸಿದನು, ದೇವಾಲಯಗಳನ್ನು ವಿರೋಧಿಸಿದನು.

ಸಾಹಿತ್ಯಕ್ಕೆ ಹತ್ತಿರವಾದ ವಚನಗಳು ಬಹುತೇಕ ರಾಜಾಶ್ರಯದ ಹೊರಗಿನಿಂದ ಬಂದವು. ಪಂಡಿತ ಮಂಡಳಿಯ ಸಾಹಿತ್ಯ ಪರಂಪರೆಯನ್ನು ಪೋಷಿಸುವ ಯಾರೂ

ರಾಜನ ಆಸ್ಥಾನದಲ್ಲಿದ್ದವರಲ್ಲ. ಇದ್ದರೂ ರಾಜನ ವಿರೋಧವನ್ನು ಕಟ್ಟಿಕೊಂಡು ವಚನಗಳನ್ನು ರಚಿಸಿ ಸ್ವತಂತ್ರರಾಗಿ ಪರಂಪರೆಯನ್ನು ವಿರೋಧಿಸಿದರು. ವಚನಗಳ ರಚನೆಗೆ ಸಮಕಾಲೀನವಾದ ನಡುಗನ್ನಡವನ್ನು ಆರಿಸಿಕೊಂಡರು. ಆಡುನುಡಿಗೆ ತೀರ ಸಮೀಪವಾದ ಶೈಲಿಯಲ್ಲಿ ಬರೆದರು.

ಆಗ ಬಸವಣ್ಣ ಕರಣಿಕನ ಉದ್ಯೋಗ ಅರಸಿಕೊಂಡು ಕೂಡಲಸಂಗಮವನ್ನು ತೊರೆದು ಮಂಗಳವಾಡಕ್ಕೆ ಬಂದರು. ಕೋಶಾಗಾರದ ಮುಖ್ಯ ಅಧಿಕಾರಿಯಾಗಿದ್ದ ಸಿದ್ದದಂಡಾಧಿಪತಿ ಕಛೇರಿಗೆ ಬಂದು ಲೆಕ್ಕಪತ್ರಗಳನ್ನು ನೋಡಲೆಂದು ಬಂದ. ಕರಣಿಕರು ಲೆಕ್ಕದಲ್ಲಿ ಒಂದು ತಪ್ಪು ಮಾಡಿದ್ದರು. ಈ ತಪ್ಪಿನಿಂದಾಗಿ ಕೋಶಾಧ್ಯಕ್ಷರಿಗೆ ೫ ದಶಲಕ್ಷದಷ್ಟು ನಷ್ಟ ಆಗುವ ಸಂಭವವಿತ್ತು. ಏನೊಂದು ಉದ್ದೇಶವಿಲ್ಲದೆಯೇ ಸುಮ್ಮನೆ ಲೆಕ್ಕಪತ್ರಗಳನ್ನು ಗಮನಿಸುತ್ತ ನಿಂತಿದ್ದ ಬಸವಣ್ಣನವರ ಲಕ್ಷ್ಯ ಕೂಡಲೇ ಆ ತಪ್ಪಿನತ್ತ ಹೊರಳಿ ಅದನ್ನು ಸರಿಪಡಿಸಲು ಸೂಚಿಸಿದರು. ಸಿದ್ಧ ದಂಡನಾಥನಿಗೆ ತುಂಬಾ ಸಂತೋಷವಾಗಿ ಕೂಡಲೇ ಬಸವಣ್ಣನನ್ನು ತನ್ನ ಬಂಧುವೆಂದು ತಿಳಿದು ಜೊತೆಯಲ್ಲಿ ಇರಿಸಿಕೊಂಡ ಬಿಜ್ಜಳ ಭಂಡಾರಿ ಪದವಿ ನೀಡಿದ.

ಬಸವಣ್ಣನವರು ರಾಜಕೀಯ ತತ್ವಜ್ಞಾನಿಗಳಾಗಿದ್ದರು. ಹಳೆಯ ಪ್ರಭುತ್ವದ ವ್ಯವಸ್ಥೆಯಲ್ಲಿ ದುಡಿಯುವ ವರ್ಗಕ್ಕೆ ನ್ಯಾಯ ಸಿಗಬೇಕೆನ್ನುತ್ತಲೇ ಹೊಸತೆರನಾದ ಸಮತಾ ಸಿದ್ಧಾಂತದೊಂದಿಗೆ ಪ್ರಭುತ್ವ ನಿರಾಕರಣೆಯ ಚಳುವಳಿಯ ಮೂಲಕ ಹೊಸ ರಾಜನೀತಿಯನ್ನು ಎತ್ತಿಹಿಡಿದನು. ಯಾವುದೇ ರೀತಿಯಲ್ಲೂ ಪ್ರಭುತ್ವವನ್ನು ಎದುರು ಹಾಕಿಕೊಳ್ಳದೆ ಜನಶಕ್ತಿಯನ್ನು ಒಂದುಗೂಡಿಸುತ್ತ ಶ್ರಮಿಕವರ್ಗದ ನಾಯಕತ್ವದಲ್ಲಿ ಪರಿಪೂರ್ಣ ವ್ಯವಸ್ಥೆಯನ್ನು ರೂಪಿಸಲು ಬೇಕಾದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಕ, ವೈಚಾರಿಕತೆಯ ಮೂಲಕ ಸಮಷ್ಟಿಯ ಜ್ಞಾನದಿಂದ ಕೂಡಿದ ಹೊಸ ಜಗತ್ತನ್ನು ಸೃಷ್ಟಿಸಲು ಬಸವಣ್ಣ ಪ್ರಯತ್ನಿಸಿದರು.

ಕಾಯಕ ನಿಷ್ಠೆ, ಪ್ರಸಾದ ಪ್ರಜ್ಞೆ, ದಾಸೋಹ, ಎಂಬ ಅದ್ಭುತ ಶಕ್ತಿಯ ಮಹತ್ವವನ್ನು ಎತ್ತಿಹಿಡಿದರು. ಸಮೂಹ ನಾಯಕತ್ವ, ಶರಣರ ಗುಂಪು, ಬಾಹ್ಯ-ಆಂತರಿಕದ ಅರಿವು ಮೂಡಿಸುವ ಇಷ್ಟದೈವ ಮತ್ತು ಹೊರಗಿನ ಪ್ರಜ್ಞೆ ಮೂಡಿಸುವ ಜಂಗಮಲಿಂಗ ಇವೆಲ್ಲ ಸೇರಿ ಸಂಗಮ ತತ್ವವಾಯಿತು. ಬಸವಣ್ಣ ಬದುಕಿರುವವರೆಗೂ ಎಲ್ಲ ಕ್ಷೇತ್ರಗಳಲ್ಲಿ ಕ್ರಾಂತಿ ಎಬ್ಬಿಸುತ್ತ ಜಗತ್ತಿನ ಪ್ರಥಮ ಸಮಗ್ರ ಕ್ರಾಂತಿ ಪುರುಷರೆನಿಸಿಕೊಂಡರು. ಜಂಗಮ ಎನ್ನುವುದು ಸಮಾನತೆಯನ್ನು ಸಾರುವುದರ ಜೊತೆಗೆ ಅರ್ಧನಾರೀಶ್ವರ ತತ್ವವನ್ನು ಮೈಗೂಡಿಸಿಕೊಂಡು "ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂದವರು ಬಸವಣ್ಣ.

ಶರಣರು ಬಿಜ್ಜಳನ ಆಡಳಿತಕ್ಕೆ ಯಾವುದೇ ಚ್ಯುತಿ ಬರದಂತೆ ನಡೆದುಕೊಂಡರು. ಶರಣರ ತತ್ವವಾದ 'ಕಾಯಕವೇ ಕೈಲಾಸ' ದಂತೆ ಶ್ರಮಪಟ್ಟು ಬಿಜ್ಜಳನ ಬೊಕ್ಕಸ ತುಂಬಿತುಳುಕುವಂತೆ ಮಾಡಿದರು. ಬಸವಣ್ಣನವರ ಮುತ್ಸದ್ದಿತನದಿಂದಾಗಿ ಯುದ್ಧದ ಸಮಸ್ಯೆಗಳಿಂದ ಪಾರಾದ ಬಿಜ್ಜಳನ ಕಲ್ಯಾಣ ರಾಜ್ಯ ಸುಭಿಕ್ಷೆಯ ತಾಣವಾಯಿತು. ಬಸವಣ್ಣನ ಅನುಯಾಯಿಗಳಾದ ಕಾಯಕ ಜೀವಿಗಳೆಲ್ಲ ತಮ್ಮ ಕೈಲಾದನ್ನು ಕೊಡುವುದರಲ್ಲಿ ಸಂತೋಷಪಡುತ್ತಿದ್ದರು. 'ಕಲ್ಯಾಣದಲ್ಲಿ ಕೊಡುವವರುಂಟೆ ವಿನಹ ಬೇಡುವವರಿಲ್ಲ' ಎಂಬ ವಾತಾವರಣ ಸೃಷ್ಟಿಯಾಯಿತು. ಶರಣರಿಗೆ ರಾಜಪ್ರಭುತ್ವದ ಬಗ್ಗೆ ಅನಾಸಕ್ತಿ. ಶರಣರಿಗೆ ಸಮೂಹ ಪ್ರಜ್ಞೆಯ ಸ್ವತಂತ್ರ ಬದುಕು ಮುಖ್ಯವಾಗಿತ್ತು. ಕಲ್ಯಾಣ ರಾಜ್ಯದ ಜನಸಮುದಾಯ ಬಸವಣ್ಣನವರ ವ್ಯಕ್ತಿತ್ವದ ಬಗ್ಗೆ ಇಟ್ಟುಕೊಂಡಿದ್ದ ಅಭಿಮಾನದಿಂದಾಗಿ ಬಿಜ್ಜಳನ ಪ್ರಭುತ್ವದ ಬಗ್ಗೆ ಉದಾಸೀನಭಾವ ಮೂಡಿಸುವಂತಹ ವಾತಾವರಣ ಸೃಷ್ಟಿಯಾಯಿತು.

ಬಸವಣ್ಣನ ಸುಧಾರಣಾ ಮನೋಧರ್ಮವನ್ನು ಸಹಿಸಲಾಗದೆ ಅಸಹನೆಯಿಂದ ಕುದಿಯುತ್ತಿದ್ದ ಪುರೋಹಿತವರ್ಗ ಬಿಜ್ಜಳನ ದಿಕ್ಕು ತಪ್ಪಿಸುವಲ್ಲಿ ನಿರತರಾದರು. ಬಸವಣ್ಣನ ಸಾಧನೆಯ ಬಗೆಗೆ ಉದಾಸೀನ ತೋರಿ ಪ್ರಭುತ್ವದಲ್ಲಿ ಕೀಳಾಗಿ ಕಂಡರು. ಬಸವಣ್ಣನವರು ಜಾತಿಯ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಗುರುತಿಸಿದರು. ಜಾತಿಯೊಳಗಿನ ಕಾಯಕದ ಮಹತ್ವವನ್ನು ಅರಿತು ಜಾತಿವಿನಾಶ ಚಳುವಳಿ ಆರಂಭಿಸಿದರು. ಬಡವರು, ಕೆಳಜಾತಿಯವರು ಮತ್ತು ಹೆಣ್ಣುಮಕ್ಕಳು ಹೊಸ ಸಮಾಜವನ್ನು ನಿರ್ಮಿಸುತ್ತಾರೆ ಎಂಬ ನಂಬಿಕೆ ಬಸವಣ್ಣನವರಿಗೆ ಇತ್ತು. ಶರಣರ ಶಕ್ತಿ ಏನೆಂಬುದನ್ನು ಅರಿತಿದ್ದರು. ಎಲ್ಲರೂ ಸಮಾನರಾಗಿದ್ದರಿಂದ ಯಾವುದೇ ಬಗೆಯ ಜಾತಿ ತಾರತಮ್ಯವೂ ಇರಲಿಲ್ಲ. 'ಎನಗಿಂತ ಕಿರಿಯರಿಲ್ಲ' ಎಂದು ಶಿವಭಕ್ತರು ಭಾವಿಸುವುದಾದರೆ ಆಗ ಸಮಾಜದ ವ್ಯಕ್ತಿಗಳ ಮಧ್ಯೆ ಸಂಬಂಧವು ಸುಗಮವಾಗುತ್ತದೆ. ಯಾವುದೇ ಅಸಮಾನತೆಯ ಸಂಘರ್ಷ ಇಲ್ಲದಂತೆ ಆಯಾ ಕರ್ತವ್ಯಗಳನ್ನು ಎಸಗುತ್ತ ಒಟ್ಟು ಸಮಾಜದ ಯಂತ್ರ ಸಲೀಸಾಗಿ ನಡೆಯುತ್ತದೆಂದು ಜನರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಬಿತ್ತಿದರು. ವ್ಯಕ್ತಿ ಹೇಗೆ ಸ್ವಾರ್ಥಕವಾಗಿ ತಾನೂ ಬದುಕಿ ಸಮಾಜವನ್ನೂ ಬದುಕಿಸಬೇಕೆಂಬುದನ್ನು ಕಲಿಸಿದರು.

ಬಸವಣ್ಣನವರು ಜಾತಿಯ ಸಂಕೋಲೆಗಳನ್ನು ಕಳಚಿದ ರೀತಿ ವಿಶಿಷ್ಟವಾಗಿದೆ. ಅವರು ಜಾತಿಸೂಚಕ ಪದಗಳನ್ನು ಕಾಯಕಸೂಚಕ ಪದಗಳಾಗಿ ಮಾರ್ಪಡಿಸಿದರು. ಕಾಯಕಕ್ಕೆ ಅಂಟಿದ ಜಾತಿಯ ಕೊಳಕನ್ನು ದೂರಮಾಡಿದರು. ಮಂತ್ರಿಯ ಕಾಯಕ ದೊಡ್ಡದಲ್ಲ, ಸಮಗಾರನ ಕಾಯಕ ಸಣ್ಣದಲ್ಲ ಎಂಬುದನ್ನು ಆಡಿ ಮತ್ತು ಮಾಡಿ ತೋರಿಸಿದರು. ಶರಣ ಸಂಕುಲದಲ್ಲಿ ಭಕ್ತಿ ಸಂಬಂಧವನ್ನು ಒಂದುಗೂಡಿಸುವಲ್ಲಿ ಯಶಸ್ವಿಯಾದರು. ಜಾತಿವಿನಾಶ ಮತ್ತು ವರ್ಗವಿನಾಶ ಮಾಡುವ ಸಾಮಾಜಿಕ ಸಂಬಂಧಕ್ಕೆ ನಾಂದಿ ಹಾಡಿದರು. ಮೇಲುವರ್ಗದ ಬ್ರಾಹ್ಮಣರಾಗಿದ್ದ ಮಂತ್ರಿ

ಮಧುವರಸರು ಮತ್ತು ಕೆಳವರ್ಗದ ಸಮಗಾರ ಹರಳಯ್ಯನವರ ಇಷ್ಟಲಿಂಗವನ್ನು ಧರಿಸುವ ಮೂಲಕ ಶರಣ ಸಂಕುಲಕ್ಕೆ ಸೇರಿದರು. ಶರಣ ಧರ್ಮದ ಈ ಸಮಾನತೆಯ ಕಾರಣದಿಂದಲೇ ಮಧುವರಸರ ಮಗಳು 'ಲಾವಣ್ಯ' ಮತ್ತು ಹರಳಯ್ಯನವರ ಮಗ 'ಶೀಲವಂತ'ನ ವಿವಾಹ ಏರ್ಪಡಲು ಸಾಧ್ಯವಾಯಿತು. ಈ ಮದುವೆ ಪುರೋಹಿತ ಶಾಹಿಗಳಿಗೆ ನುಂಗಲಾರದ ಬಿಸಿ ತುಪ್ಪವಾಗಿತ್ತು. ನಟುವರ ಜನಾಂಗದ ಅಲ್ಲಮಪ್ರಭುಗಳನ್ನು ಬಸವಣ್ಣನವರು ಅನುಭವ ಮಂಟಪದ ಶೂನ್ಯ ಸಿಂಹಾಸನದ ಮೇಲೆ ಕೂರಿಸಿದ್ದಂತೂ, ಪುರೋಹಿತಶಾಹಿಗಳ ದೃಷ್ಟಿಯಲ್ಲಿ ದೊಡ್ಡ ಪ್ರಮಾದವಾಗಿತ್ತು. ಬಸವಣ್ಣನವರ ಈ ನಿರ್ಧಾರದಿಂದ ಪುರೋಹಿತಶಾಹಿಗಳ ಬುಡ ಅಲುಗಾಡಿಸತೊಡಗಿದರು. ಇದರಿಂದ ಪುರೋಹಿತ ವರ್ಗ ರಾಜಸಿಂಹಾಸನ ಕುಸಿಯುತ್ತಿದೆ ಎಂದು ಹೇಳತೊಡಗಿದರು. ಅರಮನೆಯಲ್ಲಿ ಬಿಜ್ಜಳನ ತಮ್ಮ ಕರಣದೇವ ಮತ್ತು ಬಿಜ್ಜಳನ ಮಗ ಸೋವಿದೇವನ ಮಧ್ಯೆ ಅಪನಂಬಿಕೆ ಹುಟ್ಟುವಂತೆ ಮಾಡಿದರು. ಹರಳಯ್ಯ-ಮಧುವರಸರ ಮಕ್ಕಳ ಮದುವೆಯ ಸಂದರ್ಭದಲ್ಲಿ ಈ ಅಪನಂಬಿಕೆ ಮುಗಿಲು ಮುಟ್ಟಿತು. ಮಂತ್ರಿಮಂಡಲದ ತುಂಬಾ ಇದ್ದ ಪುರೋಹಿತರು ಬಿಜ್ಜಳನ ಕಿವಿಗೆ ಇಲ್ಲಸಲ್ಲದ ವಿಷಯಗಳನ್ನು ಹೇಳತೊಡಗಿದರು. ಬಿಜ್ಜಳ ಅವರ ಒತ್ತಡಕ್ಕೆ ಮಣಿದುದರಿಂದ ಅವರ ಹಿಡಿತಕ್ಕೆ ರಾಜಶಾಹಿ ಒಳಗಾಯಿತು. ಇದರಿಂದ ಪುರೋಹಿತಶಾಹಿವರ್ಗ ತಮ್ಮ ಬೇಳೆ ಬೇಯಿಸಿಕೊಳ್ಳಲು ಶುರುಮಾಡಿತು.

ಮತ್ತೊಂದು ಕಡೆ ವಚನಕಾರರು ತಮ್ಮ ಸುತ್ತಮುತ್ತಲಿನ ಇರುವ ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯಲ್ಲಿ ಬದಲಾವಣೆಯನ್ನು ಕಾಣಬಹುದು. ಇವರ ಪ್ರತಿಭಟನೆಯ ಉದ್ದೇಶ ನವಸಮಾಜ ನಿರ್ಮಾಣವಾಗಿದ್ದರಿಂದ ಅದಕ್ಕೆ ಪೂರಕವಾಗಿ ವಚನಗಳನ್ನು ಬಳಸಿದರು. ದೇವಸ್ಥಾನವನ್ನು ಒಮ್ಮೆಗೇ ನಿರಾಕರಿಸಿದ್ದು, ಬ್ರಾಹ್ಮಣ-ಹೊಲೆಯ ಒಂದೇ ಎಂದುದು ಪ್ರಭುತ್ವವನ್ನು ಧಿಕ್ಕರಿಸುತ್ತ ಹಳೆಯ ಬೇರನ್ನು ಕಿತ್ತು ಕೊಡವಿದಂತಾಯಿತು. ಇಂಥ ಕೆಲವು ಪ್ರಸಂಗಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೧. ಬಟ್ಟೆ ಒಗೆಯುವ ಮಾಚಯ್ಯ ತಾನು ಶಿವಭಕ್ತರ ಬಟ್ಟೆಗಳನ್ನಲ್ಲದೆ ರಾಜನೂ ಸೇರಿದಂತೆ ಬೇರೆಯವರ ಬಟ್ಟೆಗಳನ್ನು ಒಗೆಯವುದಿಲ್ಲವೆಂದು ಕಲ್ಯಾಣನಗರದ ಬೀದಿ ಬೀದಿಗಳಲ್ಲಿ ಸಾರಿದ.

೨. ಅಸ್ಪೃಶ್ಯರು ಊರೊಳಗೆ ಬಂದರೆ ಕೋಲು ಕುಟ್ಟುತ್ತ, ಜೋರಾಗಿ ಶಬ್ದ ಮಾಡಿ ಕೂಗುತ್ತ, ಜನರಿಗೆ ಎಚ್ಚರಿಕೆ ಕೊಡಬೇಕಿತ್ತು. ಆದರೆ ಸಂಬೋಳಿಯಾಗಿದ್ದ ಶಿವನಾಗಮಯ್ಯ ಹಾಗೆ ಕೂಗುವುದನ್ನು ನಿಲ್ಲಿಸುತ್ತೇನೆ, ಇನ್ನು ಮುಂದೆ ಈ ಕೆಲಸ ನಿರ್ವಹಿಸುವುದಿಲ್ಲ ಎಂದನು.

೩. ದೇಹದ ತುಂಬ ಬಟ್ಟೆ ತೊಡಲಾಗದೆ ದೀನಾವಸ್ಥೆಯಲ್ಲಿ ಬದುಕುತ್ತಿದ್ದ ಜನ ಚೆನ್ನಾಗಿ ಬಟ್ಟೆಹಾಕಿಕೊಂಡು ತಲೆ ಎತ್ತಿ ಓಡಾಡುತ್ತಿದ್ದಾರೆ. ಅವರ ಮುಖದಲ್ಲಿ ಕಾಂತಿಯೂ ಹೆಚ್ಚಾಗುತ್ತಿದೆ. ಬಡತನವಿದ್ದರೂ ಆತ್ಮವಿಶ್ವಾಸದ ಇಂತಹ ದೀನದಲಿತರ ಮನೆಗೆ ಬಸವಣ್ಣ ದಂಡನಾಯಕನಾಗಿ ಹೋಗಿಬರುತ್ತಿದ್ದಾನೆ. ವ್ಯವಸ್ಥೆಯನ್ನು ಪ್ರಶ್ನಿಸುವುದರ ಮೂಲಕ ನೇರವಾಗಿ ಪ್ರತಿಭಟನೆ ವ್ಯಕ್ತಪಡಿಸಿದರು. ಇದರಿಂದ ಅನಿವಾರ್ಯವಾಗಿ ಬಿಜ್ಜಳನೊಡನೆ ವಿರೋಧ ಕಟ್ಟಿಕೊಳ್ಳಬೇಕಾಯಿತು.

೪. ರಾಜನಿಂದ ಲಾಭ ಪಡೆಯುತ್ತಿದ್ದ ಪುರೋಹಿತಶಾಹಿ ಜಗದೇವ ಮತ್ತು ಮಲ್ಲ ಬೊಮ್ಮನನ್ನು ಮುಂದೆ ಇಟ್ಟುಕೊಂಡು ಷಡ್ಯಂತ್ರ ರೂಪಿಸಿದರು. ಈ ಸಂಗತಿ ಬಿಜ್ಜಳನ ಮಗನಾದ ಸೋವಿದೇವನಿಗೆ ಗೊತ್ತಿದ್ದರೂ ಪುರೋಹಿತಶಾಹಿ ಸಿಂಹಾಸನದ ಆಸೆ ತೋರಿಸಿದ್ದರಿಂದ ಕಂಡೂ ಕಾಣದಂತೆ ಇದ್ದನು.

೫. ಬಿಜ್ಜಳನನ್ನು ಕೊಂದಮೇಲೆ ಈ ಕೊಲೆಯ ಆರೋಪವನ್ನು ಶರಣರ ಮೇಲೆ ಹೊರಿಸಿದರು. ಇದರ ಜೊತೆಗೆ ಪುರೋಹಿತವರ್ಗ ಮಾಡಿದ ತಪ್ಪುಗಳನ್ನೆಲ್ಲ ಶರಣರ ಮೇಲೆ ಹೊರಿಸುತ್ತ ಬಂದರು. ಇದು ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು.

೬. ತಂದೆಯ ಸಾವಿನ ನಂತರ ಸೋವಿದೇವನನ್ನು ಸಿಂಹಾಸನದ ಮೇಲೆ ಕೂರಿಸಿ, ಕೇವಲ ರಾಜನಾಗುವಂತೆ ಮಾಡಿ ಉಳಿದ ಅಧಿಕಾರವನ್ನು ಪುರೋಹಿತವರ್ಗ ಕೈಯಲ್ಲಿರಿಸಿಕೊಂಡನು. ತಮ್ಮ ಮಾತುಗಳನ್ನು ಕೇಳುವಂತೆ ಸೈನಿಕರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ರಾಜ, ರಾಜ್ಯ, ಸಂಪತ್ತು, ಸೈನ್ಯ, ಇಡೀ ವ್ಯವಸ್ಥೆಯೇ ತಮ್ಮ ಹಿಡಿತದಲ್ಲಿ ಇದೆಯೆಂದು ಬೀಗುತ್ತಿದ್ದರು.

೭. ಶರಣರ ಮೇಲೆ ಸುಲಿಗೆ ಆರೋಪಗಳನ್ನು ಹೊರಿಸುವುದು, ಶರಣರು ಬರೆದ ವಚನಗಳ ಕಟ್ಟುಗಳನ್ನು ಸುಡುವುದು ಇಂಥ ಕೃತ್ಯಗಳು ಮುಂದುವರೆದ್ದವು.

ಹಾವು ತಿಂದವರ ನುಡಿಸಬಹುದು;

ಗರ ಹೊಡೆದವರು ನುಡಿಸಬಹುದು

ಸಿರಿಗರ ಹೊಡೆದವರ ನುಡಿಸಲು ಬಾರದು;

ನೋಡಯ್ಯಾ;

ಬಡತನವೆಂಬ ಮಂತ್ರವಾದಿ ಹೊಗಲು

ಒಡನೆ ನುಡಿವರು, ಕೂಡಲ ಸಂಗಮದೇವಾ.

ಬಡತನವೆಂಬ ಹೆಸರಿನ ಮಾಂತ್ರಿಕ ಬಂದ ತತ್‌ಕ್ಷಣ ಶ್ರೀಮಂತರು ತಮ್ಮ ಮೌನವನ್ನು ಮುರಿದರು ಎಂಬ ಕಲ್ಪನೆ ಇಲ್ಲಿದೆ. ಶ್ರೀಮಂತರು ನ್ಯಾಯವಾದ ಮಾರ್ಗಗಳಿಂದ ತಮ್ಮ ಸಂಪತ್ತನ್ನು ಶೇಖರಿಸಬೇಕೆಂಬುದು ಬಸವಣ್ಣನವರ ಅಭಿಮತವಾಗಿತ್ತು.

೮. ಅಳಿದುಳಿದ ಶರಣರೆಲ್ಲ ಚೆಲ್ಲಾಪಿಲ್ಲಿಯಾಗಿ ದಿಕ್ಕು ಕಾಣದೆ ಕಲ್ಯಾಣ ನಗರವನ್ನು ತೊರೆಯುವಂತಾಯಿತು. ಅಕ್ಕನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಕಿನ್ನರಿಬೊಮ್ಮಯ್ಯ, ನುಲಿಯಚಂದಯ್ಯ, ಡೋಹರಕಕ್ಕಯ್ಯ, ಗಂಗಾಂಬಿಕೆ ಮುಂತಾದ ಶರಣರ ಮುಂದಾಳತ್ವದಲ್ಲಿ ಶರಣರ ಗುಂಪೊಂದು ಬೆಂಕಿಗೆ ಆಹುತಿಯಾಗದಂತೆ ಉಳಿದಿದ್ದ 'ವಚನಕಟ್ಟು'ಗಳ ರಕ್ಷಣೆಗಾಗಿ ಉಳವಿಯ ಕಡೆಗೆ ನಡೆದರು.

೯. ಅಸ್ಪೃಶ್ಯರೊಂದಿಗೆ ಬೆರೆತು ಅವರ ಜೊತೆ ಬಸವಣ್ಣ ಊಟ ಮಾಡುವನೆಂದು ಬಿಜ್ಜಳ ಬೇಸರ ಮತ್ತು ಅಸಹನೆಗಳಲ್ಲಿ ಕುದಿದ.

೧೦. ಹರಳಯ್ಯ – ಮಧುವರಸರ ಬಗ್ಗೆ ಅಸಮಾಧಾನವಿದ್ದ ಬಿಜ್ಜಳ ಅವರಿಬ್ಬರ ಕಣ್ಣುಗಳನ್ನು ಕೀಳುವಂತೆ ಆಜ್ಞೆ ಮಾಡಿದ. ಈ ಘಟನೆ ವೀರಶೈವರಲ್ಲಿ ಪ್ರತಿಭಟನೆಯ ಬಿರುಗಾಳಿಯನ್ನೇ ಎಬ್ಬಿಸಿತು. ಜಗದೇವ ತನ್ನ ಮನೆಗೆ ಊಟಕ್ಕೆ ಬಸವಣ್ಣ ಮತ್ತು ಸಂಗಡಿಗರನ್ನು ಆಹ್ವಾನಿಸಿ ಬಸವಣ್ಣ ಬರುವ ಮುಂಚೆ ಬ್ರಾಹ್ಮಣರಿಗೆ ಆತಿಥ್ಯ ನೀಡಿದ. ಜಂಗಮ ವೇಷಧಾರಿಯಾದ ಜಗದೇವನ ಬೂಟಾಟಿಕೆ ಎಳೆಯಲಾಯಿತು. ಬಿಜ್ಜಳನ ಕೊಲೆಯ ನಂತರ ಬಸವಣ್ಣನವರು, ಅವರ ಅನುಯಾಯಿಗಳು ಕಲ್ಯಾಣವನ್ನು ಬಿಟ್ಟು ಹೊರಟು ಹೋದರು. ಬಸವಣ್ಣನವರ ಮುಂದಾಳತ್ವದಲ್ಲಿ ಒಂದು ತಂಡ ಕೂಡಲಸಂಗಮಕ್ಕೂ, ಚೆನ್ನಬಸವಣ್ಣನ ನೇತೃತ್ವದಲ್ಲಿ ಇನ್ನೊಂದು ತಂಡ ಉಳವಿಗೂ ಹೊರಟಿತು. ಕಲ್ಯಾಣದಲ್ಲಿದ್ದ ಜಗದೇವನಿಗೆ ತನ್ನ ತಪ್ಪಿನ ಅರಿವಾಗಿ ಆತ್ಮಹತ್ಯೆ ಮಾಡಿಕೊಂಡು ಸತ್ತನು. ಉಳಿದ ಇಬ್ಬರೂ ಗಲಭೆಯಲ್ಲಿ ಹತರಾದರು.

ಕಲ್ಯಾಣದಿಂದ ಹೊರಟ ಎರಡು ಗುಂಪಿನ ಶರಣರನ್ನು ಹಿಂಬಾಲಿಸಿದ ಬಿಜ್ಜಳನ ಸೈನ್ಯದ ವಿರುದ್ಧ ಚೆನ್ನಬಸವನ ನೇತೃತ್ವದ ತಂಡ ಹೋರಾಡಿತು. ಶರಣರ ಬಳಗವನ್ನು ಬೇರೆ ಬೇರೆ ಸ್ಥಳಗಳಿಗೆ ತೆರಳುವಂತೆ, ಚೆನ್ನಬಸವ ಸೂಚಿಸಿದ. ಹೋರಾಡುತ್ತ ಸೈನಿಕರ ಕತ್ತಿಗೆ ಬಲಿಯಾದ. ಈ ನಡುವೆ ಬಸವಣ್ಣನವರು ಕೂಡಲಸಂಗಮಕ್ಕೆ ತಲುಪಿದರು. ಬಸವಣ್ಣನ ಮನಸ್ಸು ದು:ಖಕ್ಕೀಡಾಯಿತು ಕೆಲವು ಕಾಲ ಮನಶ್ಶಾಂತಿಯನ್ನು ಬಯಸಿದರು. ಹೋರಾಟವನ್ನು ಮುಂದುವರಿಸುವ ಕೆಲಸ ತಮ್ಮ ಅನುಯಾಯಿಗಳದು ಎಂದು ತಿಳಿಸಿ

ಕೂಡಲಸಂಗಮದಲ್ಲಿ ಐಕ್ಯರಾದರು. ನೀಲಲೋಚನೆ ಬಸವಣ್ಣನನ್ನು ನೆನೆದು ಕಲ್ಯಾಣದಲ್ಲೇ ಐಕ್ಯಳಾದಳು.

ಮಡಿವಾಳ ಮಾಚಯ್ಯ ಹೇಳಿದಂತೆ ಬಸವಣ್ಣ ಬೆಳಗನುಟ್ಟು ಬಯಲಾಗಿ ಹೋದರು. ಅವರ ಸಾವಿನ ಸುದ್ದಿ ಎಲ್ಲ ಕಡೆ ಹರಡಿತು. ಬಸವಣ್ಣನವರಿಂದಾಗಿ ಭಕ್ತಿ ಎಂಬ ಕಾಂತಿಯಿಂದ ತುಂಬಿದ ದೀಪಕ್ಕೆ ಕಲ್ಯಾಣನಗರವನ್ನು ಶರಣರು ಹೋಲಿಸಿದರು. ಆ ದೀಪ ಅನೇಕರಿಗೆ ಬೆಳಕು ನೀಡಿತು. ಆದರೆ ಈಗ ಹಣತೆ ಆರಿಹೋಗಿತ್ತು. ಎಣ್ಣೆ ಚೆಲ್ಲಿ ಹೋಗಿತ್ತು. ಆ ಬೆಳಕು ದೈವೀ ಪ್ರಕಾಶದೊಂದಿಗೆ ಒಂದಾಗಿತ್ತು. ಜನರ ಮನಸ್ಸಿನಲ್ಲಿ ಕ್ರಾಂತಿಯ ಬೀಜವನ್ನು ಬಿತ್ತಲಾಗಿತ್ತು. ಈ ಕ್ರಾಂತಿ ಬೇಗನೇ ಫಲ ಬಿಟ್ಟಿತೆಂಬುದೂ ಅಷ್ಟೇ ನಿಜ. ಉದಾಹರಣೆಗೆ ಹದಿಮೂರನೇ ಶತಮಾನದ ಕ್ರಾಂತಿಕಾರಿ ಕವಿಗಳಾದ ಹರಿಹರ ಮತ್ತು ರಾಘವಾಂಕರು ಬಸವಣ್ಣ ಮತ್ತಿತರ ಶರಣರಿಂದಲೇ ಸ್ಫೂರ್ತಿಗೊಂಡರು. ಈ ಕವಿಗಳಿಬ್ಬರೂ ಬಸವಣ್ಣನವರ ಕ್ರಾಂತಿಯ ಮಾರ್ಗವನ್ನು ಅನುಸರಿಸಿದ್ದಾರೆ.

ಮುಂದೆ ಬಹಳ ಕಾಲ ಕಲ್ಯಾಣ ಕಾರ್ಮಿಕ ಚಟುಚಟಿಕೆಗಳ ಕೇಂದ್ರವಾಗಿ ಉಳಿಯಲಿಲ್ಲ. ಇದು ವೀರಶೈವಧರ್ಮದ ಪ್ರಚಾರಕ್ಕೆ ಪರೋಕ್ಷವಾಗಿ ನೆರವು ನೀಡಿತೆಂದು ಕಲ್ಯಾಣದಲ್ಲಿಯೇ ಕೇಂದ್ರೀಕೃತವಾಗಿದ್ದ ವೀರಶೈವ ಮುಖಂಡರು ಹೊರಗೆ ಹೋದರು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದರು. ಅವರು ಹೋದ ಕಡೆಯಲ್ಲೆಲ್ಲ 'ಹೊಸ ವಿಚಾರಗಳು, ಆಲೋಚನೆಗಳು ಎಲ್ಲರಿಗೂ ತಲುಪುವಂತಾಯಿತು.

ವಚನಕಾರರಲ್ಲಿ ಸಾಮಾಜಿಕತೆ:

ಸಾಹಿತ್ಯ ಚರಿತ್ರೆಯಲ್ಲಿ ಮೇಲಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ವಿಸ್ತೃತ ಚರ್ಚೆ ಇಷ್ಟು ಅಗತ್ಯವೇ ಎಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವಿಲ್ಲ. ಆದರೆ ವಚನಕಾರರು ಎಂತಹ ಸಂದರ್ಭ, ಸನ್ನಿವೇಶಗಳಲ್ಲಿ ಬದುಕಿ ಎಂತೆಂತಹ ಸಮಸ್ಯೆಗಳನ್ನು ಎದುರಿಸಿದರು ಎಂಬುದು ಅರ್ಥವಾಗದಿದ್ದರೆ ಅವರ ವಚನಗಳ ಉದ್ದೇಶವಾಗಲೀ, ಸ್ವರೂಪವಾಗಲೀ ಅರ್ಥವಾಗುವುದಿಲ್ಲ. ವಚನಗಳನ್ನು ಬರಿಯ ಸಾಹಿತ್ಯವಾಗಿ ನೋಡುವುದರ ಬದಲು ಅವುಗಳನ್ನು ಆ ಕಾಲದ ಸಾಮಾಜಿಕ ಪರಿಸರದಲ್ಲಿಟ್ಟು ನೋಡಬೇಕು. ಸಾಮಾಜಿಕ ಬದಲಾವಣೆಯನ್ನು ಬಯಸಿದ ದಾಸಿಮಯ್ಯ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ನುಲಿಯ ಚೆಂದಯ್ಯ, ಮಾದಾರ ಚೆನ್ನಯ್ಯ ಮುಂತಾದವರು ಜನಮನದಲ್ಲಿ ಕ್ರಾಂತಿಕಾರಕ ಭಾವನೆಗಳನ್ನು ಮೂಡಿಸುವ ಪ್ರಯತ್ನ ಮಾಡುವುದರ ಮುಖಾಂತರ ಹೊಸ ವಿಚಾರಗಳನ್ನು ಜನರಿಗೆ ತಿಳಿಸಿಕೊಡಬೇಕೆಂದು ಬಯಸಿದರು. ಜನತೆಯ ಕಲ್ಯಾಣಕ್ಕೋಸ್ಕರ ಉದಾತ್ತವಾದ ಆದರ್ಶ ಮತ್ತು ಜೀವನದ ಅನುಭವಗಳ ಜೊತೆಗೆ ಕಾರ್ಯೋನ್ಮುಖರಾದರು.

ವೀರಶೈವ ಎಂಬ ಭಕ್ತಿ ಚಳುವಳಿ ಉದಯಿಸಲು ಕಾರಣಗಳು

೧. ಧಾರ್ಮಿಕತೆ ಅವನತಿಯತ್ತ ಹೋದಾಗ ಅದರ ಪರಿಷ್ಕರಣೆಗಾಗಿ ಭಕ್ತಿ ಚಳುವಳಿಗಳು ಹುಟ್ಟಿಕೊಳ್ಳುತ್ತವೆ.

೨. ಸರಳ ಮತ್ತು ನೇರವಾದ ಮಾರ್ಗದಿಂದ ಸಮಾನತೆಯನ್ನು ಸಾಧಿಸುವುದು.

೩. ಜೀವನ ಮೌಲ್ಯಗಳನ್ನು ಕಟ್ಟಿಕೊಳ್ಳಲು ಒಂದು ಪ್ರೇರಣಾಶಕ್ತಿ ಅಗತ್ಯವಾಗುತ್ತದೆ. ಅದು ಚಳುವಳಿಯಿಂದ ಮಾತ್ರ ಸಾಧ್ಯವಾಗುತ್ತದೆ.

೪. ಧಾರ್ಮಿಕ ಅಂಧಶ್ರದ್ದೆ, ಮೌಢ್ಯತೆ, ಕಂದಾಚಾರಗಳನ್ನು ಅಳಿಸಿ ಸಾಮಾಜಿಕ ಪರಿವರ್ತನೆಗೆ ಹೋರಾಡುವ ಪ್ರಯತ್ನದ ಫಲವಾಗಿ ಈ ಚಳುವಳಿಗಳು ಉಗಮವಾದವು.

೫. ಕಾಲದಿಂದ ಕಾಲಕ್ಕೆ ನಾಯಕತ್ವದ ಬದಲಾವಣೆಯ ಅಗತ್ಯತೆಯಿಂದಲೇ ಇಂತಹ ಚಳುವಳಿಗಳು ಉಗಮವಾದವು.

೬. ಸಾಮಾಜಿಕ ಬದಲಾವಣೆಗಾಗಿ ಹಲವು ನಾಯಕರು ಮತ್ತು ಅವರ ಅನುಯಾಯಿಗಳು ಸಂಘಟಿತರಾದುದರ ಪ್ರತಿಫಲವಾಗಿ ಚಳುವಳಿಗಳು ರೂಪಗೊಂಡವು.

೭. ಜನಸಮುದಾಯದಲ್ಲಿ ಜಾತಿ, ವರ್ಗ, ಲಿಂಗಗಳನ್ನು ಲೆಕ್ಕಿಸದೇ ವ್ಯಕ್ತಿಯ ಘನತೆಯನ್ನು ಆತನ ಬೌದ್ಧಿಕತೆಯನ್ನು ನೋಡಿ ಪರಿಗಣಿಸುವ ನೀತಿಮಾರ್ಗವಾಗಿ ಹುಟ್ಟುಕೊಂಡವುಗಳೇ ಭಕ್ತಿ ಚಳುವಳಿಗಳಾಗಿವೆ.

ವರ್ಗ ತಾರತಮ್ಯವನ್ನು ಹೋಗಲಾಡಿಸಲು "ಇವನಾರವ ಇವನಾರವ ಎಂದೆನಿಸದೆ, ಇವ ನಮ್ಮವ ಇವ ನಮ್ಮವ, ಎಂದೆನಿಸಯ್ಯ" ಎನ್ನುವ ಮಾತಿನಂತೆ, ಹುಟ್ಟು, ಕುಲ, ಕಸಬು, ಲಿಂಗ, ವರ್ಣ, ಸಿರಿ, ಪದವಿ, ವಿದ್ಯೆ ಇವೆಲ್ಲವುಗಳಿಂದ ಅಳೆಯಲ್ಪಡುತ್ತಿದ್ದ ಸಮಾಜದಲ್ಲಿ ಶರಣರು ಸರ್ವಸಮಾನತೆಯನ್ನು ಬಿತ್ತಿ ಬೆಳೆದರು. ಸಮಾಜದಲ್ಲಿ ಅಗ್ರಹಾರ, ದೇವಾಲಯದ ಸಂಸ್ಕೃತಿಯಿಂದ ಹೊರಗಿದ್ದ ಕೀಳುವರ್ಗದವರನ್ನು ಗೌರವಿಸಿ ತಮ್ಮವರೆಂದು ಭಾವಿಸಿ, ಬದುಕನ್ನು ರೂಪಿಸಿಕೊಡಲು ಪ್ರಯತ್ನಿಸಿದರು. ಶರಣರು ಎಲ್ಲದರ ಜೊತೆ ಕೀಳರಿಮೆಯನ್ನು ಬಿಟ್ಟು ಆತ್ಮಗೌರವವನ್ನು ಹೆಚ್ಚಿಸಿಕೊಂಡು ಸಾಮಾಜಿಕ ಪ್ರತಿಷ್ಠೆಯನ್ನು ಪಡೆದರು. ಸಮಾನತೆಯ ತತ್ವವನ್ನು ಬೋಧಿಸುತ್ತ ಪುರೋಹಿತಶಾಹಿಯನ್ನು ನಿರಾಕರಿಸಿದರು.

ತಮ್ಮ ನಡೆ-ನುಡಿಗಳು ಒಂದಾಗಬೇಕೆಂದು ಬಯಸಿದ ಅವರು "ಆಚಾರದಲ್ಲಿ ಅರಸನಾಗು, ನೀತಿಗೆ ಪ್ರಭುವಾಗು", ಎಂಬ ಧ್ಯೇಯವನ್ನು ಹೊಂದಿದ್ದರು. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲುವರು'. ಎಂಬುದು ಅವರ ಪ್ರಾಮಾಣಿಕ ನಂಬಿಕೆಯಾಗಿತ್ತು. ಭಾರತದ ಬಹುಪಾಲು

ಭಕ್ತಿ ಚಳುವಳಿಗಳು ಆಧ್ಯಾತ್ಮಿಕವಾಗಿ ಎಲ್ಲರೂ ಸಮಾನರೆಂದು ಒಪ್ಪಿಕೊಂಡರೂ, ಸಾಮಾಜಿಕ ಸಮಾನತೆಯ ಬಗೆಗೆ ಅಷ್ಟೊಂದು ಕಾಳಜಿವಹಿಸಲಿಲ್ಲ. ಆದರೆ ಶರಣರು ಚಳುವಳಿಯ ಮೂಲಕ ಹೋರಾಟ ನಡೆಸಿದ್ದು ಕರ್ನಾಟಕದ ಉದ್ದಗಲಕ್ಕೂ ಚಾರಿತ್ರಿಕ ದಾಖಲೆಯಾಗಿದೆ. ಪ್ರಗತಿಪರ ಚಿಂತನೆಗಳನ್ನು, ಪರರನ್ನು ಚಿಂತನೆಗೆ ಒಳಪಡಿಸುವ ಆಲೋಚನೆಗಳನ್ನು ಅಭಿವ್ಯಕ್ತಿಸಿದ ಕೀರ್ತಿಗೆ ಶರಣರು ಭಾಜನರಾಗುತ್ತಾರೆ.

"ನಿಮ್ಮ ಸೊಮ್ಮಿಗೆ ಸಲ್ಲಿಸುವೆನು" ಎಂದು ಬಸವಣ್ಣನವರು ಹೇಳುವ ಮೂಲಕ ಒಂದು ಸಾಮಾಜಿಕ ನಿಧಿಯನ್ನು ಸ್ಥಾಪಿಸಿದರು. ಶರಣ ಸಂಕುಲದ ಯಾರಿಗಾದರೂ ಕಷ್ಟನಷ್ಟಗಳು ಎದುರಾದಾಗ ಅವರು ಈ ನಿಧಿಯಿಂದ ಸಹಾಯ ಪಡೆಯುತ್ತಿದ್ದರು. ಇಂತಹ ಸಾಮಾಜಿಕ ಭದ್ರತೆಯನ್ನು ಹೊಂದಿದ್ದ ಶರಣರು ವ್ಯಕ್ತಿಗತ ಶ್ರೀಮಂತಿಕೆ ಮತ್ತು ದುಡಿಯದೇ ಬರುವ ವಸ್ತುಗಳು ಅಸಹ್ಯವೆನ್ನುವಷ್ಟು ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಬೆಳೆದಿದ್ದರು. ಕಸಗುಡಿಸುವ ಕಾಯಕದ ಸತ್ಯಕ್ಕ ಅಂಥವರಲ್ಲಿ ಒಬ್ಬಳು. ದಲಿತ ವರ್ಗದಿಂದ ಬಂದ ಸತ್ಯಕ್ಕ ವರ್ಗಭೇದ, ಜಾತಿಭೇದ ಮತ್ತು ಲಿಂಗಭೇದಗಳಿಲ್ಲದೆ ಭಾವೈಕ್ಯತೆಯಿಂದಿದ್ದು ಶರಣ ಸಂಕುಲದಲ್ಲಿ ಹೊಸ ವ್ಯಕ್ತಿತ್ವವನ್ನೇ ಪಡೆದಳು. ಯಾರ ಹಂಗಿಲ್ಲದೆ ಬದುಕಿನ ಶ್ರೇಷ್ಠತೆಯನ್ನು ಅರಿತಳು, ವಸ್ತುಗಳ ಮೋಹಕ್ಕೆ ಹೇಸಿದಳು. ದೇವರ ತಪ್ಪನ್ನು ಎತ್ತಿ ತೋರಿಸುವಷ್ಟು ಘನವಾದ ವ್ಯಕ್ತಿತ್ವವನ್ನು ಹೊಂದಿದ್ದಳು.

ಕಾಯಕದ ಮಹತ್ವವನ್ನು ಅರಿತವರ ಸ್ವಾವಲಂಬಿ ಬದುಕು ಆನಂದಮಯವಾಗಿರುತ್ತದೆ. ಶರಣರು ನಾಳೆಗಾಗಿ ಚಿಂತಿಸುವವರಲ್ಲ, ಪರಿಶುದ್ಧ ಬದುಕಿಗಾಗಿ ಚಿಂತನೆ ಮಾಡುವರು, ಅಸತ್ಯದಿಂದ ದೂರವಿರುವವರು. ಶರಣರು ಸರಳತೆ ಸಹಜತೆ, ಬದುಕಿನಲ್ಲಿ ನೆಮ್ಮದಿ ಕಾಣುವವರು. ಸಾಮಾಜಿಕವಾಗಿ ಭ್ರಷ್ಟಾಚಾರದ ಬದುಕು ಎಲ್ಲಾ ಕಾಲದಲ್ಲಿಯೂ ಇದೆ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಸಂತರ ಹೆಸರಿನಲ್ಲಿ, ಸಮಾಜದ ಹೆಸರಿನಲ್ಲಿ ಮತ್ತು ಅಧಿಕಾರದ ಹೆಸರಿನಲ್ಲಿ ಭ್ರಷ್ಟಾಚಾರ ತನ್ನ ಕರಾಳ ಸ್ವರೂಪವನ್ನು ತೋರಿಸುತ್ತಲೇ ಇರುತ್ತದೆ. ಜನರು ಎಲ್ಲವನ್ನೂ ಸಹಿಸಿಕೊಳ್ಳುತ್ತ ಬದುಕು ಸಾಗಿಸುತ್ತಾರೆ. ಸಮಯ ಬಂದಾಗ ಅನೇಕರು ಅದೇ ದಾರಿಯಲ್ಲಿ ಮುನ್ನಡೆಯುತ್ತಾರೆ. ಆದರೆ ಸತ್ಯಕ್ಕ ನಾನು ಅನ್ಯಾಯದ ಧನದಿಂದ ದೂರವಿದ್ದೇನೆ ಎಂದು ಎದೆ ತಟ್ಟಿ ಹೇಳುತ್ತಾಳೆ. ಹೀಗೆ ರಾಜಕೀಯವಾಗಿ, ಸಾಮಾಜಿಕವಾಗಿ ತಮ್ಮತನವನ್ನು ಮೈಗೂಡಿಸಿಕೊಂಡವರು ಶರಣರು.

ಅಧ್ಯಾಯ – ೩

ಆದ್ಯ ವಚನಕಾರರ ವಚನಗಳಲ್ಲಿ ತಾತ್ವಿಕ ಚಿಂತನೆ

ಅಲ್ಲಮಪ್ರಭು:

ಜಾಗೃತಿ ಮತ್ತು ವೈಚಾರಿಕತೆ ಮೂಡಿಸುತ್ತ, ಎಲ್ಲರ ಒಳಗೂ ಆತ್ಮವಿಶ್ವಾಸ ತುಂಬುತ್ತಾ ಸರ್ವವನ್ನೂ ಒಳಗೊಂಡ ವಚನಗಳಂತಹ ಸಾಹಿತ್ಯ ಜಗತ್ತಿನ ಬೇರೆ ಯಾವುದೇ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ.

ಶಿವಶರಣ–ಶರಣೆಯರು ಕೆಳಜಾತಿಗಳಿಂದ ಬಂದವರು ಮಾಡಿರುವ ಸಾಧನೆಯನ್ನು ಅವರ ಆಧ್ಯಾತ್ಮಿಕ ಉನ್ನತಿಯನ್ನು ಸಮಾಜಕ್ಕೆ ತಿಳಿಸಿಕೊಟ್ಟಿದ್ದಾರೆ. ಎಲ್ಲ ವರ್ಗದ ಜನರನ್ನು ಕತ್ತಲೆಯಿಂದ ಬೆಳಕಿನೆಡೆಗೆ ತಂದದ್ದು ಲೋಕಕಲ್ಯಾಣಕ್ಕೆ ಅವರು ನೀಡಿದ ಕಾಣಿಕೆ. ಶರಣರ ಬಗ್ಗೆ ಹೆಮ್ಮೆಯೆನಿಸಲು ಇದು ಮುಖ್ಯ ಕಾರಣ. ಅನಕ್ಷರಸ್ಥರಾದರೂ ತಮ್ಮ ವೃತ್ತಿಧರ್ಮಕ್ಕೆ ಮಾನ್ಯತೆ ಕೊಟ್ಟು ವೃತ್ತಿ ಅಥವಾ ಜಾತಿಯನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಂಡಿರುವುದು ಅವರ ಕಾಯಕ ಪ್ರೀತಿಯನ್ನು ಎತ್ತಿ ತೋರಿಸುವುದಾಗಿದೆ.

ಮಾನವೀಯ ಮೌಲ್ಯಗಳು ಕುಸಿಯುತ್ತಿದ್ದ ಕಾಲಘಟ್ಟದಲ್ಲಿ ಮೌಲ್ಯಯುತವಾದ ಸಾಹಿತ್ಯ ವಚನಗಳಿಂದ ಬಂತು. ಹೆಚ್ಚಿನ ಪ್ರಾಮುಖ್ಯವನ್ನು ಕಾಯಕಕ್ಕೆ ನೀಡಿ ಕುಶಲ ಕಲೆಗಾರರ ನೇಯ್ಗೆ, ಕುಂಬಾರಿಕೆ, ಚಮ್ಮಾರಿಕೆ ಮುಂತಾದ ಕಾಯಕ ಧರ್ಮಗಳನ್ನು ಎತ್ತಿಹಿಡಿದಿದ್ದಾರೆ. ದುಡಿಮೆ ಎಂಬುದು ಮೂಲಭೂತ ಬೇರಾಗಿ ಎಲ್ಲ ಕಡೆ ಹರಡುವಂತೆ ಮಾಡಿ ಶರಣರ ಆರ್ಥಿಕ ಚಿಂತನೆಗೆ ಬುನಾದಿ ಹಾಕಿದ್ದಾರೆ. ತಮ್ಮ ಕ್ರಿಯಾತ್ಮಕ ಶಕ್ತಿಯನ್ನು ಮೂಲಬಂಡವಾಳನ್ನಾಗಿ ಮಾಡಿಕೊಂಡು ಸತ್ಯಶೋಧನೆಯ ಜೊತೆಗೆ ಕಾಯಕದಿಂದ ಬಂದ ಕೂಲಿಯಲ್ಲಿ ಕಾಲುಭಾಗ ತಾವು ಬಳಸಿಕೊಂಡು ಉಳಿದಿದ್ದನ್ನು ಶಿವಶರಣರ ದಾಸೋಹಕ್ಕೆ ಬಳಸುತ್ತಿದ್ದರು. ಅಂದಿನ ಸಮಾಜದಲ್ಲಿ ಮೌಢ್ಯ ಅಂಧ ಆಚರಣೆ, ಗೊಡ್ಡುಸಂಪ್ರದಾಯ ಮೊದಲಾದವುಗಳ ವಿರುದ್ಧ ಭಕ್ತಿ, ಪ್ರೀತಿ, ವಿಶ್ವಾಸದ ಜ್ಯೋತಿಯನ್ನು ಒಬ್ಬರಿಂದ ಒಬ್ಬರ ಕೈಗೆ ಹಸ್ತಾಂತರಿಸಿ ಎಲ್ಲಾ ಕಡೆ ಜ್ಞಾನಜ್ಯೋತಿ ಬೆಳಗಿದ್ದಾರೆ.

ಭಾರತವು ತತ್ವಬೋಧಕರ ಮಹಾಮನೆ. ಇಲ್ಲಿ ನಿತ್ಯವೂ ವಿನೂತನ ಭಾರತೀಯ ಸಂಸ್ಕೃತಿಯೂ ಬೆಳಗಲು ಭದ್ರವಾದ ತಳಹದಿಯನ್ನು ಹಾಕಿದವರು ತತ್ವಜ್ಞಾನಿಗಳು. ಕಾಲಕಾಲಕ್ಕೆ ಜನ್ಮತಳೆದ ಮಹಾ ಪುರುಷರು, ಚಿಂತಕರು, ಜ್ಞಾನಿಗಳು, ಅನುಭವಿಗಳು, ಪ್ರಬಲ ಶಕ್ತಿಯಾಗಿ ಬೆಳಗಿದ್ದಾರೆ. ಶಿವಶರಣ ಸೌರವ್ಯೂಹದಲ್ಲಿ ಸೂರ್ಯನಂತೆ ಬೆಳಗಿದ ಅಲ್ಲಮಪ್ರಭು ಭಾರತೀಯ ಪರಂಪರೆಗೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ನಮ್ಮಲ್ಲಿ

ಹೆಚ್ಚಾಗಿ ಒತ್ತು ನೀಡುವುದು ಸಂಸ್ಕೃತಿ-ಧರ್ಮ-ತತ್ವ ಆಚರಣೆಗಳ ವಿಕಾಸಕ್ಕಾಗಿ. ತತ್ವಜ್ಞಾನಿಯಾದವನು ಸಮಾಜದಲ್ಲಿರುವ ಅಡೆ-ತಡೆಗಳನ್ನು ತಿದ್ದುತ್ತಾ, ಸಮಾಜದ ಮೌಲ್ಯಗಳನ್ನು ಪ್ರಶ್ನಿಸುತ್ತ, ಉತ್ತಮವಾಗಿರುವ ವಿಷಯವನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡು ಬದುಕುವ ರೀತಿನೀತಿಗಳನ್ನು ಅರಿತಿರುತ್ತಾರೆ. ಜನರಲ್ಲಿ ಸಂಘರ್ಷ ಕಂಡುಬಂದಾಗ ವೀರಶೈವರು ನೂತನ ಮಾದರಿಯ ಆಚಾರ ವಿಚಾರಗಳನ್ನು ಸರಳವಾಗಿ ನಡೆದು ನುಡಿದು ತೋರಿಸಿದರು. ಕಾಯಾ, ವಾಚಾ, ಮನಸಾ, ತಮ್ಮನ್ನು ಸಮಾಜಕ್ಕೆ ಅರ್ಪಿಸಿಕೊಂಡರು. ಭಾರತೀಯ ಧರ್ಮ-ತತ್ವ- ಶಾಸ್ತ್ರಗಳನ್ನು ಒರೆಗೆ ಹಚ್ಚಿ ಶುದ್ಧ ಚಿನ್ನದ ನಾಣ್ಯಗಳನ್ನು ಟಂಕಿಸಿ, ತಮ್ಮ ಅನುಭಾವ ಮುದ್ರೆಯನ್ನೊತ್ತಿ ಚಲಾವಣೆಗೆ ಬಿಟ್ಟರು. ಸಮಾಜದ ಒಳಗೊ, ದೇಶದ ಒಳಗೂ ಈ ಹೊಸ ಜೀವನಮೌಲ್ಯಗಳು ವಜ್ರ ಕವಚಗಳಿದ್ದಂತೆ. ವಚನಕಾರರು ನಿರ್ಮಿಸಲು ಬಯಸಿದ ಸಮಾಜದಲ್ಲಿ ಸ್ವಾತಂತ್ರ್ಯ, ಸರ್ವಸಮಾನತೆ, ಪರಸ್ಪರ ಭಾತೃತ್ವಭಾವ ಇವು ಮೂಲಸ್ತಂಭಗಳಾಗಿವೆ ಎಂದು ಎಮ್.ಆರ್. ಶ್ರೀನಿವಾಸ್‌ಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.

ಅಲ್ಲಮಪ್ರಭುವು ವೀರಶೈವ ಪರಂಪರೆಯಲ್ಲಿ ಆದ್ಯ ಗುರುವಾಗಿದ್ದವನು. ತನ್ನ ಕಾಲದ ಶಿವಶರಣರ - ಶಿವಶರಣೆಯರಿಗೆ ಅದರಲ್ಲೂ ಬಸವಣ್ಣನಿಗೆ ಗುರುಸ್ಥಾನದಲ್ಲಿದ್ದವನು. ೧೨ನೇ ಶತಮಾನದ ಎಲ್ಲರ ಮೇಲೂ ಒಂದು ಬಗೆಯ ಗಂಭೀರ ಪ್ರಭಾವವನ್ನು ಬೀರಿ ಹೊಸ ಆಂದೋಲನಕ್ಕೆ ಸಜ್ಜಾಗಲು ಶರಣರಿಗೆ ನೈತಿಕ ಸ್ಥೈರ್ಯವನ್ನು ತುಂಬಿದ ಈತ ನಿಜವಾಗಿಯೂ ಒಬ್ಬ ಮಹಾಪುರುಷ.

ಅಲ್ಲಮನ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ. ಈ ಊರು ಕಲ್ಯಾಣನಗರದ ಬಳಿಯಲ್ಲಿಯೇ ಇದ್ದು ಕಾಳಾಮುಖ ಶೈವರ ಪ್ರಸಿದ್ಧ ಮಠವೊಂದರ ಕೇಂದ್ರವೂ ಆಗಿತ್ತು. ಆ ಊರಿನಲ್ಲಿದ್ದ ದೇವದಾಸಿ ವರ್ಗದವರ ಮುಖ್ಯಸ್ಥನಾಗಿ ಶೂದ್ರಕುಲಕ್ಕೆ ಸೇರಿದ ಮನೆಯಲ್ಲಿ ಜನಿಸಿದ ಕಲಾವಿದ ವಂಶವಾದ್ದರಿಂದ ಅಲ್ಲಮ ಮೃದಂಗವಾದನದಲ್ಲಿ ಸಹಜವಾಗಿಯೇ ಅಭಿರುಚಿ ಹೊಂದಿದ್ದನು. ಒಂದು ದಿನ ಅವನು ತನ್ನ ಮನೆದೇವರಾದ ಗೊಗ್ಗೇಶ್ವರನ ಆಲಯದಲ್ಲಿ ಮೃದಂಗವನ್ನು ಬಾರಿಸುತ್ತಿರುವಾಗ ಅಲ್ಲಿಗೆ ಬಂದಿದ್ದ ಅದೇ ಊರಿನ ಧನದತ್ತನ ಮಗಳು ಕಾಮಲತೆಗೂ ಅವನಿಗೂ ಪ್ರೀತಿ ಹುಟ್ಟಿ ಇಬ್ಬರೂ ಕೆಲವು ಕಾಲ ಗೃಹಸ್ಥ ಜೀವನವನ್ನು ನಡೆಸಿದರು. ಕಾಮಲತೆ ಆ ಊರಿನ ವೈಶ್ಯನ ಮಗಳಾಗಿದ್ದುದರಿಂದ ವಿವಾಹಕ್ಕೆ ಸಮಾಜ ಒಪ್ಪಿಗೆ ನೀಡಲಾರದೆಂದು ಅರಿತು ತಾವೇ ವಿವಾಹ ಮಾಡಿಕೊಂಡರು. ಸ್ವಲ್ಪ ಕಾಲದನಂತರ ಕಾಮಲತೆ ಸಾವನ್ನಪ್ಪಿದಳು. ಇದರಿಂದ ಅಲ್ಲಮನು ದುಃಖಿತನಾಗಿ ಕಣಗಿಲೆಯ ತೋಟದಲ್ಲಿ ಒಬ್ಬಂಟಿಗನಾಗಿ ಕುಳಿತು ನೆಲವನ್ನು ಅನ್ಯಮನಸ್ಕನಾಗಿ ಕೆರೆಯುತ್ತಿರುವಾಗ ಎಂದೋ ಭೂಮಿಯೊಳಗೆ ಸೇರಿಹೋಗಿದ್ದ ದೇವಾಲಯದ ಶಿಖರವೊಂದು ಕಾಣಿಸಿತು. ಅದನ್ನು ಕುತೂಹಲ ತಡೆಯಲಾರದೆ ಕೆದಕಿದಾಗ ಅಲ್ಲಿ ಸುರಂಗಮಾರ್ಗವೊಂದಿತ್ತು.

ಅದನ್ನು ಪ್ರವೇಶಮಾಡಿದಾಗ ಅಲ್ಲಿ ಅನಿಮಿಷನೆಂಬ ಯೋಗಿಯ ಅಸ್ಥಿಪಂಜರದೊಳಗೆ ಇಷ್ಟಲಿಂಗ ಸಿಕ್ಕಿತು. ಕಾಮಲತೆಯ ಸಾವಿನಿಂದ ದಿಕ್ಕುಕಾಣದಾಗಿದ್ದ ಅಲ್ಲಮನಿಗೆ ಮುಂದಿನ ಗುರಿ ಗೋಚರಿಸಿತು. ತಾನೊಬ್ಬ ಸಾಧಕನಾಗಬೇಕು, ಭವ-ಬಂಧನಗಳಿಂದ ಮುಕ್ತನಾಗಬೇಕೆಂದು ಬಯಸಿದನು.

ಗಂಡು-ಹೆಣ್ಣಿನ ಸಂಬಂಧದ ಸಂಕೀರ್ಣತೆಯನ್ನು ಅರಿತು, ಇಷ್ಟಲಿಂಗವನ್ನು ಹಿಡಿದು ಎಲ್ಲೆಲ್ಲೋ ಹುಚ್ಚನಂತೆ ತಿರುಗಿದ. ಕಾಮಲತೆಯ ಮೇಲಿದ್ದ ಮೋಹವನ್ನೆಲ್ಲ ದೈವದ ಮೋಹವಾಗಿ ರೂಪಾಂತರಿಸಲು ಹೆಣಗಾಡಿದ. ಆತನ ಸಂಕೀರ್ಣ ಅನುಭವಗಳು ವಚನಗಳಲ್ಲಿ ಅಭಿವ್ಯಕ್ತಿಗೊಂಡಿವೆ.

ಎಸೆಯದಿರು ಎಸೆಯದಿರು ಕಾಮ

ಕಾಮಕ್ರೋಧ ಲೋಭ ಮೋಹ ಮದ ಮತ್ಸರ ಇದು ಸಾಲದೇ ನಿನಗೆ?

ನಿನ್ನ ಬಾಣ ಹುಸಿಯಲದೇಕೋ!

ಗೋಗೇಶ್ವರ ಲಿಂಗದ ವಿರಹದಲ್ಲಿ ಬೆಂದವರ

ಮರಳಿ ಸುಡಲುಂಟೆ ಕಾಮ

ಹೆಣ್ಣಿನ ಮೋಹದಿಂದ ಸಹಿಸಲಾಗದಷ್ಟು ವೇದನೆಯನ್ನನುಭವಿಸಿದ್ದೇನೆ. ಯಾವ ಆಸೆ, ಮೋಹವೂ ಈ ಉಳಿದಿಲ್ಲ. ಇನ್ನು ಲಿಂಗದ ವಿರಹದಲ್ಲಿ ಮುಳುಗುವೆನು ಎನ್ನುವ ಅಲ್ಲಮ ಈ ಸಮಯದಲ್ಲಿ ಹೆಚ್ಚಿನ ದೈಹಿಕ, ಮಾನಸಿಕ ಕ್ಲೇಶಕ್ಕೆ ಒಳಗಾಗಿದ್ದಾನೆ.

ಉಗುಳ ನುಂಗಿ ಕಳೆದು

ತೆವರ ಮಲಗಿ ನಿದ್ರೆಗೆಯ್ದೆನಲ್ಲಾ

ಅರಸಿ ಅರಸಿ ಹಾಹಾ ಎನುತ್ತಿದ್ದೆನು

ಬೆದಕಿ ಬೆದಕಿ ಬೆದಬೆದ ಬೇವುತ್ತಿದ್ದೆನು

ಗೋಗೇಶ್ವರ, ಕಣ್ಣ ಮೊದಲಲ್ಲಿದ್ದವನ ಕಾಣೆನು

ಹಸಿವಾದಾಗ ತಾನು ಉಗುಳು ನುಂಗಿದ್ದು, ನಿದ್ದೆ ಬಂದಾಗ ಎತ್ತರದ ಜಾಗಕ್ಕೆ ತಲೆಕೊಟ್ಟಿದ್ದು, ದೇವರಿಗಾಗಿ ಹುಡುಕಿ ಹುಡುಕಿ ನಿರಾಸೆಯಿಂದ ಕೂಗುತ್ತ ಅಲೆದಾಡಿದ್ದು ಎದೆಯ ನೋವಿನ ಬೆಂಕಿಯ ಅನುಭವವಾಗುತ್ತಿದೆ. ಈಗ ಆಧ್ಯಾತ್ಮಿಕ ಸಾಧನೆಯ

ಸಮಯ. ತನಗೆ ನೋವಿನ ತುದಿ ಅರಿವಾಗಿದೆ ಎನ್ನುವ ಅಲ್ಲಮ ಚಿಂತನೆಯ ಆಳಕ್ಕೆ ಇಳಿದು ಜ್ಞಾನಿಯೂ, ಸಿದ್ಧಪುರುಷನೂ ಆಗಿ ಎಲ್ಲ ಶರಣರಿಗೆ ಗುರುವಾದನು.

ನಂತರ ಘಟ್ಟದಲ್ಲಿ ಜೀವನದಿಂದ ಬಹುದೂರ ವಿರಕ್ತನಾಗಿ ಬದುಕಿದಂತೆ ಕಾಣಿಸುತ್ತದೆ. ಬೆಟ್ಟ, ಗುಡ್ಡ, ಕಾಡು–ಮೇಡು, ಪ್ರಾಣಿಗಳು, ಯೋಗಿಗಳು ಇಷ್ಟೇ ಅವನ ಪ್ರಪಂಚವಾಗಿತ್ತು. ಯಾರು ದುಃಖದಲ್ಲಿ ಮುಳುಗಿರುತ್ತಾರೋ ಅಂಥವರನ್ನು ಸಂತೈಸುವ, ಮೂಢರನ್ನು ತಿದ್ದುವ ಸಾಧಕರಿಗೆ ಸರಿಯಾದ ಜ್ಞಾನಮಾರ್ಗವನ್ನು ತೋರಿಸುತ್ತ ಸಕಾಲಿಕ ಉಪದೇಶಗಳನ್ನು ನೀಡುತ್ತ ಮನುಷ್ಯರ ಸಣ್ಣತನಗಳನ್ನು ಕಟುವಾಗಿ ಟೀಕಿಸಿದನು. ಸದ್ಭಕ್ತಿಯುಳ್ಳವರನ್ನು ಮೆಚ್ಚಿ ಗೌರವಿಸಿದನು. ಅಂಥವರಲ್ಲಿ ಮುಕ್ತಾಯಕ್ಕ, ಗೊಗ್ಗಯ್ಯ , ಗೋರಕ್ಷ, ಸಿದ್ದರಾಮ ಮುಂತಾದವರಿದ್ದಾರೆ.

ಅಲ್ಲಮ ಕಲ್ಯಾಣಕ್ಕೆ ಬಂದು ಬಸವಣ್ಣ ರೂಪಿಸಿಕೊಂಡಿದ್ದ ಆಂದೋಲನಕ್ಕೆ ಪೂರ್ಣವಾದ ಬೆಂಬಲವನ್ನು ನೀಡಿದ. ಅಲ್ಲಿಗೆ ಬಂದ ಅಕ್ಕಮಹಾದೇವಿಯನ್ನು ಪ್ರಶ್ನಿಸಿ ಅವಳಲ್ಲಿದ್ದ ಶಿವಭಕ್ತಿಯನ್ನು ಲೋಕದತ್ತ ತಿರುಗಿಸಿದ. ಮಾನವೀಯತೆಯನ್ನು ಮೆರೆದು ಹೊರಗೆ ಕಠಿಣ ಎನಿಸಿದರೂ ಒಳಗೆ ಹೃದಯ ವೈಶಾಲ್ಯತೆಯನ್ನು ತೋರಿದ.

ಅಲ್ಲಮನ ವಚನಗಳ ಮಹತ್ವವನ್ನು ಅರಿಯುವುದು ಎಷ್ಟು ಸುಲಭವೋ ಕೆಲವು ಕಡೆ ಅಷ್ಟೇ ಕಠಿಣ. ಆಧುನಿಕ ಕಾಲದ ನವ್ಯ ಪರಂಪರೆಯ ರಚನೆಯಂತೆ ಅವನ ಕೆಲವು ವಚನಗಳು ನಿಗೂಢವಾಗಿರುತ್ತದೆ. ಅಲ್ಲಮನು ತನ್ನ ಮಾನಸಿಕ ಅಸ್ವಸ್ಥತೆಯನ್ನು ಕಳೆದುಕೊಂಡು ಎಲ್ಲ ಬಂಧನಗಳಿಂದ ಮುಕ್ತನಾದ ಮೇಲೆ ಬರೆದಿರುವ ವಚನಗಳು ಕಟ್ಟಿಕೊಡುವ ಅನುಭವ ಭಿನ್ನ ರೀತಿಯಲ್ಲಿದೆ.

ಎತ್ತಣ ಮಾಮರ! ಎತ್ತಣ ಕೋಗಿಲೆ!

ಎತ್ತಣಿಂದೆತ್ತ ಸಂಬಂಧವಯ್ಯಾ

ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು

ಎತ್ತಣಿಂದೆತ್ತ ಸಂಬಂಧವಯ್ಯ!

ಗೋಗೇಶ್ವರ ಲಿಂಗಕ್ಕೆಯು ಎನಗೆಯೂ

ಎತ್ತಣಿಂದೆತ್ತ ಸಂಬಂಧವಯ್ಯ!

ಭಗವಂತನ ಸೃಷ್ಟಿಯಿಂದಲೇ ದೊರೆಯುವ ಎಲ್ಲವೂ ನಮ್ಮ ಕಣ್ಣು ಮುಂದೆಯೇ ಇದ್ದರೂ ನಮಗೆ ಅವುಗಳನ್ನು ಅರಿಯಲಾಗುತ್ತಿಲ್ಲ. ಚಿಗುರಿದ ಮಾವಿನ ಮರವನ್ನು ಹುಡುಕಿಕೊಂಡು ಕೋಗಿಲೆ ಬರುತ್ತದೆ. ಮರವೇ ಬೇರೆ, ಕೋಗಿಲೆಯೇ ಬೇರೆ, ಇವರೆಡಕ್ಕೂ ಸಂಬಂಧವಿಲ್ಲ. ಆದರೆ ಇವರಿಬ್ಬರ ನಡುವೆ ಸಂಬಂಧ ಏರ್ಪಟ್ಟು ಮಾವಿನಮರವು ಗೌರವವನ್ನು ಪಡೆದುಕೊಳ್ಳುತ್ತದೆ. ಎಲ್ಲೋ ಬೆಟ್ಟದ ಮೇಲೆ ಬೆಳೆದಿರುವ ನೆಲ್ಲಿಕಾಯಿ, ದೂರದ ಸಮುದ್ರದ ಉಪ್ಪು ಎರಡೂ ಸೇರಿಸಿದಾಗ ಹದವಾದ ರುಚಿ ಕೊಡುತ್ತದೆ. ಹುಳಿ-ಉಪ್ಪು ಬೆರೆತಿರುವುದು ಎರಡೂ ಒಂದಕ್ಕೊಂದು ಹುಟ್ಟಿರುವಂತೆ ಕಾಣಿಸುತ್ತದೆ. ಹೀಗಿರುವಾಗ ಅಲ್ಲಮನಿಗೂ ಗೋಗೇಶ್ವರ ಲಿಂಗಕ್ಕೂ ಸಂಬಂಧ ಏರ್ಪಟ್ಟಿರುವುದು ಅಂಥ ಕಾರಣದಿಂದಾಗಿಯೇ, ಇದು ಒಂದು ರೀತಿ ವಿಸ್ಮಯದ ಬದುಕು.

ಕೊಟ್ಟ ಕುದುರೆಯನೇರಲರಿಯದೆ

ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ ಧೀರರೂ ಅಲ್ಲ,

ಇದು ಕಾರಣ ನೆರೆ ಮೂರು ಲೋಕವೆಲ್ಲವು

ಹಲ್ಲಣವ ಹೊತ್ತುಕೊಂಡು ಬಳಲುತ್ತೈದ್ದಾರೆ

ಗೋಗೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ!

ಯಾವುದೇ ಸಾಹಸಕ್ಕೆ ಕೈ ಹಚ್ಚಿದವರಿಗೆ ತಮ್ಮ ಮೇಲೆ ತಮಗೇ ಅನುಮಾನವಿರಕೂಡದು. ಭಯವಂತು ಬರಲೇ ಬರಬಾರದು. ಕೆಲವರು ತೋರಿಕೆಯ ವೀರರು, ಏನೇನೋ ಕಾರಣ ನೀಡಿ, ಕುದುರೆಯನ್ನೇ ಹತ್ತುವುದಿಲ್ಲ, ಸವಾರಿಯನ್ನೂ ಮಾಡದೇ ನಾನಾ ನೆಪಗಳನ್ನು ಹೇಳಿ "ಕುಣಿಯೋದಕ್ಕೆ ಬಾರದಿರುವವಳು ನೆಲ ಡೊಂಕು" ಎನ್ನುವಂತೆ ಅಂಥವರು ಬೇರೆ ಬೇರೆ ಕುದುರೆಗಳನ್ನು ಹುಡುಕಿಕೊಂಡು ಅಲೆಯುತ್ತಾರೆ. ಇದರಿಂದ ಸಮಯವೂ ವ್ಯರ್ಥ. ಆ ಕುದುರೆಗೆ ಹಾಕಬೇಕಾದ ಜೀನನ್ನು ತಾವೇ ಹೊತ್ತುಕೊಂಡು ಅಲೆದಾಡುತ್ತಿದ್ದಾರೆ! ಇಂಥವರು ಏನು ಸಾಧಿಸಿ ತೋರಿಸುತ್ತಾರೆ? ವಾಚ್ಯಾರ್ಥವನ್ನು ದಾಟಿ ವ್ಯಂಗ್ಯಾರ್ಥವು ಈ ವಚನದಲ್ಲಿ ಕಾಣುತ್ತದೆ. ಲೋಕದ ಮಾನವರೆಲ್ಲರೂ ಇಂಥ ವೀರರೇ ಎಂಬ ವಿಚಾರವನ್ನು ಅಲ್ಲಮ ಪ್ರಶ್ನಿಸಿದ್ದಾನೆ.

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ

ಸಕಲ ವೇದ ಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ

ಜೋಗುಳವಾಡುತ್ತಾ ಇದ್ದಾಳೆ ಭ್ರಾಂತಿ ಎಂಬ ತಾಯಿ

ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ,

ಗುಹೇಶ್ವರನೆಂಬ ಲಿಂಗವ ಕಾಣಬಾರದು.

ಅಜ್ಞಾನವೆಂಬ ತೊಟ್ಟಿಲಲ್ಲಿ ಜ್ಞಾನವನ್ನು ಮಲಗಿಸಿ ನಿಷ್ಕ್ರಿಯಗೊಳಿಸಿ ಇಡಲಾಗಿದೆ. ಸಕಲವೇದ ಶಾಸ್ತ್ರಗಳು ಈ ಅಜ್ಞಾನದ ತೊಟ್ಟಿಲನ್ನು ಗಟ್ಟಿಯಾಗಿ ಹಿಡಿದುಕೊಂಡಿವೆ. ಭ್ರಾಂತಿ ಎಂಬ ತಾಯಿ ವಾಸ್ತವವನ್ನು ಮರೆಸುವ ಜೋಗುಳವಾಡುತ್ತ ಆ ಶಿಶುರೂಪಿ ಜ್ಞಾನವನ್ನು ಮಲಗಿಸುತ್ತಲೇ ಇದ್ದಾಳೆ. ವೇದ ಶಾಸ್ತ್ರಗಳನ್ನು ನಿಷ್ಕ್ರಿಯ ಮಾಡುವುದರ ಮೂಲಕ ಅಜ್ಞಾನವನ್ನು ಹೋಗಲಾಡಿಸಿ ಭ್ರಾಂತಿಯಿಂದ ಹೊರಗೆ ಬಂದ ನಂತರವೇ ಸರ್ವಸಮತ್ವದ ನಿಜಾದ್ವೈತದಿಂದ ಕೂಡಿದ ಜ್ಞಾನವೆಂಬ ಗುಹೇಶ್ವರನನ್ನು ಕಾಣಲು ಸಾಧ್ಯ ಎಂಬುದನ್ನು ಅಲ್ಲಮಪ್ರಭು ಸ್ಪಷ್ಟಪಡಿಸಿದ್ದಾನೆ.

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ

ಆ ಕಲ್ಲು ಕಲ್ಲ ಮೇಲೆ ಕೆಡೆದಡೆ, ದೇವರೆತ್ತ ಹೋದರೋ?

ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರಾ

ಅವರು ಇಷ್ಟಲಿಂಗವನ್ನು ಜ್ಞಾನದ ರೂಪದಲ್ಲಿ ನೋಡಿದ್ದಾರೆ. ಮಾನವನ ಮಧ್ಯೆ ಇರುವ ಅನಿಷ್ಟ ಭೇದಗಳನ್ನೆಲ್ಲ ಅಳಿಸಿಹಾಕುತ್ತ ಎಲ್ಲ ಜೀವಸಂಕುಲಗಳಿಗೆ ಒಳ್ಳೆಯದಾಗುವಂತೆ ಇಷ್ಟಾರ್ಥವನ್ನು ಈಡೇರಿಸುವ ಇಷ್ಟಲಿಂಗವು ಪರಶಿವನ ಸಂಕೇತವೂ, ಚೈತನ್ಯರೂಪಿ ದೇವರನ್ನೊಳಗೊಂಡ ವಿಶ್ವಜ್ಞಾನದ ಕುರುಹೂ ಆಗಿದೆ. ಗುರುವಿನ ಕಾರುಣ್ಯದ ಮೂಲಕ ಇಷ್ಟದೈವದ ಸಂಕೇತವನ್ನು ದೇಹದ ಮೇಲೆ ಧರಿಸುತ್ತ ಸದಾಚಾರಿಯಾಗಿರಬೇಕು ಎಂಬುದು ಶರಣರ ಆಶಯ. ಶರಣನಾದವನು ಇಷ್ಟಲಿಂಗದ ಮೂಲಕ ಜೀವಾತ್ಮ ಮತ್ತು ಪರಮಾತ್ಮನಲ್ಲಿ ಅದ್ವೈತವನ್ನು ಸಾಧಿಸಿ ತನ್ನೊಳಗಿನ ದೇವರ ಜೊತೆ ಒಂದಾಗುವ ಕ್ರಮ ಇದು. ಇದರಿಂದ ಸಮಷ್ಟಿ ಪ್ರಜ್ಞೆಯೊಂದಿಗೆ ಮಾನವ ವಿಶ್ವಮಾನವನಾಗುತ್ತಾನೆ. ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ ಯಾಕೆಂದರೆ ಕಲ್ಲ ಮನೆಯಲ್ಲಿ ಕಲ್ಲ ಮೇಲೆ ಇನ್ನೊಂದು ಕಲ್ಲನ್ನು ಪೇರಿಸಿದ ರಚನೆಯಿರುತ್ತದೆ. ಒಳಗಿರುವ ದೇವರೂ ಕಲ್ಲಿನದೇ, ಪ್ರಾಕೃತಿಕ ವೈಪರೀತ್ಯಗಳಿಂದ ಕಲ್ಲಿನ ರಚನೆ ಕಳಚಿಕೊಂಡು ಬಿದ್ದಾಗ, ಅದನ್ನು ತಡೆಯುವುದು ಕಲ್ಲುದೇವರಿಂದ ಸಾಧ್ಯವಿಲ್ಲ. ಸೃಷ್ಟಿಯಲ್ಲಿ ಹುಟ್ಟಿದ ಕಲ್ಲು, ಕಲ್ಲಿನಲ್ಲಿ ಕೆತ್ತಿದ್ದರಿಂದ ಮೂರ್ತಿಯಾಗಿ ಮಂತ್ರಕ್ಕೆ ಲಿಂಗವಾಗುತ್ತದೆ. ಇವರಿಗೆ ಹುಟ್ಟಿದ ಕೂಸನ್ನು ಲಿಂಗವೆಂದು ಕೈವಿಡಿವವರು ವ್ರತಗೇಡಿಗಳೇ ಸರಿ.

ಕುಲದಲಧಿಕನು ಹೊಲಗೇರಿಯಲ್ಲಿ ಮನೆಯ ಕಟ್ಟಿದಡೆ

ಕುಲ ಕೆಡದಿಪ್ಪ ಪರಿಯ ನೋಡಾ!

ಅವನ ಕುಲದವರೆಲ್ಲರೂ ಮುಖ ನೋಡಲೊಲ್ಲದಡೆ

ಕುಲವುಳ್ಳವರೆಲ್ಲರೂ ಕೈವಿಡಿದರು

ಕುಲಗೆಟ್ಟವನೆಂದು ತಿಳಿದು ವಿಚಾರಿಸಲು

ಹೊಲೆಗೆಟ್ಟು ಹೋಗಿತ್ತು ಕಾಣಾ ಗುಹೇಶ್ವರಾ

ಜಾತಿ, ಧರ್ಮದಲ್ಲಿ ತಾನೇ ಶ್ರೇಷ್ಠನೆಂದುಕೊಂಡಿದ್ದವನು ಜ್ಞಾನದ ಬಲದಿಂದಾಗಿ ಭ್ರಮಾಲೋಕದಿಂದ ಹೊರಬಂದು ಹರಿಜನರ ಜೊತೆ ಸೇರಿ, ಜಾತ್ಯಾತೀತನಾಗಿ ನಿಜವಾದ ಮನುಷ್ಯನಾಗುವನು. ಸರ್ವಸಮಾನನಾಗಿ ಎಲ್ಲರೊಂದಿಗೆ ಬೆರೆತು ಕುಲಜನಾಗುವನು, ತಾನು ಶ್ರೀಮಂತ ಎಂಬ ಭ್ರಮೆಯಲ್ಲಿರುವ ಕುಲಬಂಧುಗಳಿಂದ ವಿಮುಖನಾಗುವನು, ಶರಣರ ಪ್ರಕಾರ ಇಂಥವನೇ ಕುಲದಲ್ಲಿ ಶ್ರೇಷ್ಠ. ಅಸ್ಪೃಶ್ಯರು ಮತ್ತು ಇತರ ಕಾಯಕಜೀವಿಗಳು ಆತನನ್ನು ಪ್ರೋತ್ಸಾಹಿಸಿದ ಕಾರಣ ಭ್ರಮೆ ಹರಿದು ಮೇಲುಕುಲವೆಂಬುದು ,ಕೆಳಜಾತಿಯೊಂದಿಗೆ ಮಿಶ್ರಣವಾಗಿ ಒಂದಾಯಿತು ಎನ್ನುವುಧು ಅಲ್ಲಮಪ್ರಭುಗಳ ಅಭಿಪ್ರಾಯ.

"ನಾನು ಘನ ತಾನು ಘನವೆಂಬ ಹಿರಿಯರುಂಟೆ ಜಗದೊಳಗೆ

ಹಿರಿಯರ ಹಿರಿತನ ಹಿಂದೇನಾಯಿತು?

ಹಿರಿದು ಕಿರಿದೆಂಬ ಶಬ್ದವಡಗಿದಡೆ

ಆತನೆ ಶರಣ ಗುಹೇಶ್ವರ"

ಇಲ್ಲಿ ಅಲ್ಲಮಪ್ರಭು ಯಾವುದು ದೊಡ್ಡದು, ಯಾವುದು ಚಿಕ್ಕದು ಎಂಬುದನ್ನು ಬಯಲುಗೊಳಿಸಿದ್ದಾರೆ. ನಿರ್ನಾಮಗೊಳಿಸುವ ಆಂದೋಲನಕ್ಕೆ ನಾಂದಿ ಹಾಡಿದ್ದಾರೆ. ಜಾತಿ ಮತ್ತು ಅಸ್ಪೃಶ್ಯತೆ ಇಲ್ಲದ, ಸರ್ವಸಮತ್ವದಿಂದ ಕೂಡಿದ ಸಮಾಜವೇ ಶರಣರ ಸಮಾಜ ಎಂದು ಅಲ್ಲಮಪ್ರಭು ಸೂಚಿಸಿದ್ದಾರೆ. ಆ ಕಾಲದ ಶ್ರೇಷ್ಠ ಕುಲ, ಶ್ರೇಷ್ಠ ವರ್ಗ, ಉನ್ನತ ವಿದ್ಯೆ, ಶ್ರೇಷ್ಠ ಹುದ್ದೆ ಎನ್ನುವ ಕಲ್ಪನೆಗಳಿಂದ ಹೊರಬಂದು ಹೊಸ ಪೀಳಿಗೆಯ ಉತ್ಸಾಹವೇ ಆಗಿದ್ದ ಅಲ್ಲಮ ಕೆಳಜಾತಿಕರಣಕ್ಕೆ ಮತ್ತು ಕೆಳವರ್ಗೀಕರಣಕ್ಕೆ ಒಳಗಾಗಿ ಹೋರಾಡಿದವರ ಪರ ನಿಲ್ಲುತ್ತಾನೆ.

ತಲೆದೋರುವ ಮುನ್ನ, ಅಲ್ಲಿಂದತ್ತ ಬಯಲೆ ಸ್ವರೂಪವಾಯಿತು

ಆ ಸ್ವರೂಪಿನ ಘನತೆಯ ಉಪಮಿಸಬಾರದು

ನೋಡಬಾರದ ಬೆಳಕು, ಕೊಡಬಾರದ ಮೂರ್ತಿ

ಅಖಂಡ ಅಪ್ರತಿಮ ನಮ್ಮ ಗುಹೇಶ್ವರಲಿಂಗದ ಬೆಳಕಿನ ಮೂಲವ

ಲಿಂಗಸಂಗಿಗಳಲ್ಲದೆ ಮಿಕ್ಕಿನ ಅಂಗವಿಕಾರಿಗಳೇನಬಲ್ಲರೋ?

ಬಯಲೇ ಚೈತನ್ಯವಾಗಿ ಆ ಚೈತನ್ಯದಿಂದಲೇ ವಿಶ್ವವು ರೂಪುಗೊಂಡಿದೆ. ವಿನಾಶಕ್ಕೊಳಗಾಗುವ ವಿಶ್ವದಲ್ಲಿ ಚೈತನ್ಯವು ತನ್ನ ಮೂಲರೂಪಿನೊಂದಿಗೆ ಉಳಿದುಕೊಂಡಿದೆ. ಕಾಲಮಿತಿಯನ್ನು ಹೊಂದಿರುವ ವಸ್ತು ಎಂಬುದು ಚೈತನ್ಯದ ತೋರಿಕೆಯ ರೂಪವಾದರೆ ಕಾಲಾತೀತವಾದ ಚೈತನ್ಯವು ವಸ್ತುವಿನ ನಿರಾಕಾರ ಸ್ಥಿತಿಯಾಗಿದೆ. ವಿಶ್ವವೆಂಬ ಗುಹೆಯು ಗುಹೇಶ್ವರನ ಅಂಶದಿಂದಲೇ ರೂಪುಗೊಂಡಿದೆ. 'ರೂಪಿಂಗೆ ಕೇಡುಂಟು' ಎಂದು ಅಲ್ಲಮನು ಇನ್ನೊಂದು ವಚನದಲ್ಲಿ ತಿಳಿಸಿದ್ದಾನೆ. ವಾಸ್ತವ ಎಂಬುದು ಸಮಯದ ಮಿತಿಯೊಳಗೆ ಇರುವಂತದ್ದು, ಚೈತನ್ಯವೆಂಬುದು ಶಾಶ್ವತ ಮತ್ತು ಚಲನಶೀಲವಾದುದು. ಕಾಲಾತೀತವಾದುದಕ್ಕೆ ಸಾವಿಲ್ಲ, ವಿಶ್ವವೆಂಬ ಅಶಾಶ್ವತ ಗುಹೆಯಲ್ಲಿ ಚೈತನ್ಯವೆಂಬ ಶಾಶ್ವತವಾದ ಈಶ್ವರನಿದ್ದಾನೆ. ಈತನೇ ವಿಶ್ವಕ್ಕೆ ಮೂಲ ಆಧಾರ.

ಕೆರೆ, ಹಳ್ಳ, ಬಾವಿಗಳು, ಮೈದೆಗೆದರೆ ಗುಳ್ಳೆ, ಗೊರಚೆ ಚಿಪ್ಪು ಕಾಣಬಹುದು

ವಾರಿಧಿ ಮೈದೆಗೆದರೆ ರತ್ನಂಗಳ ಕಾಣಬಹುದು

ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು

ಗುರುವಿನ ಸ್ಥಾನ ಹೊಂದಿದ ಜಂಗಮನ ಪಾದಪೂಜೆಯಿಂದ ಪಡೆದಿದ್ದು, ಉದಕ ಎಂದರೆ 'ಜ್ಞಾನ'. ಇದು ಗುರುವಿನಿಂದ ಪಡೆಯುವುದಾಗಿದೆ. ಈ ಉದಕವನ್ನು ಪಾದೋದಕ, ಲಿಂಗಪಾದೋದಕ ಹಾಗೂ ಜಂಗಮಪಾದೋದಕವಾಗಿಸಿ ವಿಶ್ಲೇಷಿಸಲಾಗಿದೆ.

೧೨ನೇ ಶತಮಾನದ ಧಾರ್ಮಿಕ ಮಹತ್ವದ ಇತಿಹಾಸದಲ್ಲಿ ಅಲ್ಲಮನು ಬಹಳ ಪ್ರಮುಖವಾದ ವ್ಯಕ್ತಿ. ವಚನಕಾರರ ಜೀವನ ಸಿದ್ಧಾಂತದ ಸಾರವನ್ನೇ ತಲೆಯೊಳಗೆ ತುಂಬಿಕೊಂಡು ಶರಣ ಮಾರ್ಗಕ್ಕೆ ಗುರುವಾದವನು ಅನುಭವಮಂಟಪಕ್ಕೆ ಅಧ್ಯಕ್ಷನಾದವನು, ಶೂನ್ಯಸಿಂಹಾಸನಕ್ಕೆ ದೊರೆಯಾದವನು ಅಲ್ಲಮ. ಡಾಂಭಿಕತೆ,

ಅಂಧಶ್ರದ್ಧೆ, ಆಡಂಬರ, ಅಜ್ಞಾನ, ಅಸತ್ಯ, ವಿಕಾರತೆಗಳಿಗೆ ನಿಷ್ಠುರಿಯಾದವನು ಅಲ್ಲಮಪ್ರಭು. ತನ್ನೆಲ್ಲಾ ಜ್ಞಾನವನ್ನು ಬಸವಣ್ಣನ ವಿಚಾರಕ್ರಾಂತಿಗೆ ಪೂರಕವಾಗಿ ಮುನ್ನಡೆಸಿದವನೀತ. ಈತನ ವಚನಗಳಲ್ಲಿ ಒಗಟು, ಗಾದೆಮಾತುಗಳು ಉಜ್ವಲವಾಗಿ ಮತ್ತು ಮನಸ್ಸಿಗೆ ನಾಟುವಂತೆ ಪ್ರಭಾವಶಾಲಿಯಾಗಿ ಬರುತ್ತವೆ. ಸಮಾಜ ಸುಧಾರಣೆಯಲ್ಲಿ ಪಾಲ್ಗೊಂಡು ಸಂಕೀರ್ಣ ವ್ಯಕ್ತಿತ್ವದಿಂದ ಅದನ್ನು ಯಶಸ್ವಿಯಾಗಿ ಮುನ್ನಡೆಸಿದ ಮಹಾಯೋಗಿ ಅಲ್ಲಮ.

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ

ಹೊನ್ನುಮಾಯೆಯೆಂಬರು

ಹೆಣ್ಣುಮಾಯೆಯೆಂಬರು

ಮಣ್ಣುಮಾಯೆಯೆಂಬರು

ಹೊನ್ನು, ಮಣ್ಣು, ಮಾಯೆಯಲ್ಲ

ಮನದ ಮುಂದಣ ಆಶೆಯೇ ಮಾಯೆಕಾಣ ಗುಹೇಶ್ವರಾ

ಮುಂತಾದ ವಚನಗಳು ಅನುಭವದ ತೀವ್ರತೆಯನ್ನು ತೋರಿಸುತ್ತವೆ. ಮನುಷ್ಯನಿಗೆ ಆಸೆಗಳೇ ಮಾಯೆಯಾಗಿ ಕೊನೆಯವರೆಗೂ ಕಾಡುತ್ತವೆ. ಹೊನ್ನು, ಮಣ್ಣು, ಹೆಣ್ಣು ಒಲಿಯುವುದು ಸುಲಭದ ಮಾತಲ್ಲ, ಅದು ತಾನಾಗಿಯೇ ಒಲಿದು ಬರಬೇಕು. ಒಲಿಸಿಕೊಳ್ಳುವ ಪ್ರಯತ್ನದಲ್ಲಿ ಆಸೆಗೆ ಮಿತಿಯಿರಬೇಕು, ಒಳಗನ್ನು ಆವರಿಸಿಕೊಂಡಿರುವ ಭ್ರಮೆಯಿಂದ ಹೊರಬರಬೇಕು.

ಜೇಡರ ದಾಸಿಮಯ್ಯ:

೧೧ನೇ ಶತಮಾನದ ಉತ್ತರಾರ್ಧ ಹಾಗೂ ೧೨ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಹಿರಿಯ ಶಿವಶರಣ ಹಾಗೂ ವಚನಕಾರ. ಜೇಡರ ದಾಸಿಮಯ್ಯ ಗುಲ್ಬರ್ಗಾ ಜಿಲ್ಲೆಯ ಮುದನೂರಿನವನು. ಹೆಸರೇ ಸೂಚಿಸುವಂತೆ ಬಟ್ಟೆ ನೇಯುವ ವೃತ್ತಿಯವನಾಗಿದ್ದ. ಮುದನೂರಿನ ದೈವವಾದ ರಾಮನಾಥನ ಭಕ್ತನಾಗಿದ್ದರಿಂದ ಅದೇ ಹೆಸರನ್ನು ತನ್ನ ವಚನಗಳ ಅಂಕಿತವಾಗಿ ಬಳಸಿಕೊಂಡಿದ್ದಾನೆ. ಈತನ ವಚನಗಳು ತೀರಾ ಚಿಕ್ಕದಾಗಿದ್ದು ಭಾಷೆಯೂ ಸರಳವಾಗಿದೆ. ದಾಸಿಮಯ್ಯ ಇಲ್ಲಿಯವರೆಗಿನ ಅಧ್ಯಯನ, ಚರ್ಚೆಗಳಂತೆ ಆದ್ಯ ವಚನಕಾರನಾಗಿದ್ದು ಅವನ ವಚನಗಳಲ್ಲಿ ಕೆಲವು ತ್ರಿಪದಿಗಳೂ ಕಂಡುಬರುತ್ತವೆ.

ಆಳವಾದ ಅರ್ಥವಂತಿಕೆ, ಭಾವ, ಧ್ವನಿ, ಮಾರ್ಮಿಕವಾಗಿರುವ ಸಂಕ್ಷಿಪ್ತ ಶೈಲಿ, ಭಕ್ತಿಯ ಪರಾಕಾಷ್ಠೆ ಮುಂತಾದ ಗುಣಗಳು ದಾಸಿಮಯ್ಯನಲ್ಲಿ ಕಂಡುಬರುತ್ತವೆ. ದಾಸಿಮಯ್ಯ ಅನುಭವಕ್ಕೆ ನಿಲುಕದ ಸಂಗತಿಯನ್ನು ವ್ಯಕ್ತಪಡಿಸಲು ಹೋಗಿಲ್ಲ. ಈತನ ವಚನಗಳಿಗೆ ಮರುಳಾಗದವರಿಲ್ಲ ಮತ್ತು ಎಲ್ಲ ಶರಣರು ಪ್ರಭಾವಿತರಾಗಿದ್ದರು.

ಶಿವಭಕ್ತನಾದ ಈತನು ಲೋಕದಿಂದ ದೂರವಿದ್ದು, ಸನ್ಯಾಸಿಯಾಗಲು ಇಷ್ಟಪಡಲಿಲ್ಲ. ಅದರ ಬದಲು ಮದುವೆಯಾಗಿ ಸಂಸಾರಿಯ ಜೀವನವನ್ನು ನಡೆಸಲು ಬಯಸಿದ, ತನ್ನ ಮನಸ್ಸಿನ ಭಾವಕ್ಕೆ ಹೊಂದುವ ಹೆಣ್ಣನ್ನು ಹುಡುಕಿಕೊಂಡು ಹೋಗಿ ಮದುವೆಯಾದನೆಂದು ಕಥೆ ಇದೆ. ಹಾಗೆ ಮದುವೆಯಾದವಳು ದುಗ್ಗಳೆ. ಇಬ್ಬರ ಜೀವನ ಸಾಗುತ್ತಿರಲು ಯಾರೋ ಬಂದು "ಸನ್ಯಾಸ ಹೆಚ್ಚೋ ಸಂಸಾರ ಹೆಚ್ಚೋ" ಎನ್ನಲು ಆತನು ದುಗ್ಗಳೆಯನ್ನು ತೋರಿಸಿ "ಇಂತಹ ಹೆಣ್ಣು ಸಿಕ್ಕರೆ ಸಂಸಾರವೇ ಲೇಸು" ಎಂದನಂತೆ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ದಾಸಿಮಯ್ಯನ ಮಾತುಗಳು ಆತನ ಸಾಂಸಾರಿಕ ತೃಪ್ತಿಯನ್ನು ವ್ಯಕ್ತಪಡಿಸುತ್ತವೆ.

ನೇಯ್ಗೆ ವೃತ್ತಿಯನ್ನು ಅವಲಂಬಿಸಿ, ಬಡತನವಿದ್ದರೂ ಎಷ್ಟು ಇದೆಯೋ ಅಷ್ಟರಲ್ಲೆ ತೃಪ್ತಿಪಡುತ್ತಿದ್ದ ದಾಸಿಮಯ್ಯ. ಒಮ್ಮೆ ಅಪೂರ್ವವಾದ ಬಟ್ಟೆಯನ್ನು ನೇಯ್ದು ಅದನ್ನು ಮಾರಾಟ ಮಾಡಲು ಹೋಗುತ್ತಾನೆ. ಸಂತೆಗೆ ಬಂದವರೆಲ್ಲ ಎಷ್ಟು ಚೆನ್ನಾಗಿದೆಯೆಂದು ಬರಿ ಹೊಗಳುವವರೇ, ಆದರೆ ಯಾರೊಬ್ಬರೂ ಅದನ್ನು ಕೊಂಡುಕೊಳ್ಳಲಿಲ್ಲ. ಇವತ್ತು ಹೊಟ್ಟೆತುಂಬಿಸಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿದು, ಸಂಜೆಯಾಗುತ್ತಿದ್ದಂತೆ ವಾಪಸ್ಸು ಮನೆಗೆ ತೆರಳುವಾಗ ಮಾರ್ಗಮಧ್ಯದಲ್ಲಿ ಚಳಿಯಿಂದ ನಡುಗುತ್ತಿದ್ದ ಶರಣನೊಬ್ಬನನ್ನು ನೋಡಿ, ಕರುಣೆ ಮೂಡಿ ಹಿಂದೆಮುಂದೆ ನೋಡದೆ ಆ ಬಟ್ಟೆಯನ್ನು ಆತನಿಗೆ ಹೊದಿಸಿದ. ಆ ವಸ್ತ್ರವನ್ನು ಶರಣ ಹರಿದು ಚಿಂದಿ ಮಾಡಿ ತಲೆಗೆ ಸುತ್ತಿಕೊಂಡ. ವಿಚಲಿತರಾಗದ ದಾಸಿಮಯ್ಯನನ್ನು ನೋಡಿ ಶರಣ ವೇಷಾಧಾರಿಯಾದ ಶಿವ ಹರಸಿದನೆಂದು ಪ್ರತೀತಿ ಇದೆ.

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತೊಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥ

ಶರಣನು ಆಸೆರಹಿತನಾಗಿರಬೇಕೆಂಬುದು ಜೇಡರ ದಾಸಿಮಯ್ಯನ ನಿಲುವು. ಸಂಸಾರದ ವ್ಯಾಮೋಹವನ್ನು ತೊರೆದವನು ಮಾತ್ರ ನಿಜವಾದ ಶರಣನಾಗಬಲ್ಲ. ಸಂಸಾರದ ಮೇಲೆ ವ್ಯಾಮೋಹವಿಲ್ಲದ ಶರಣರ ಒಳ್ಳೆಯ ಮಾತುಗಳು ಒಂದು ಘಳಿಗೆ ಸಿಕ್ಕರೂ ಸಾಕು ಆ ಭಕ್ತನಿಗೆ ದೇವರೇ ಸಾಕ್ಷಾತ್ಕಾರವಾದಂತೆ ಎಂಬುದು ದಾಸಿಮಯ್ಯನ

ಅಭಿಪ್ರಾಯ. ಶರಣರ ಸಂಗವನ್ನು ಬಯಸುವನು ಸಂಸಾರದ ಆಮಿಷಕ್ಕೆ ಬಲಿಯಾಗಬಾರದು. ಅಂತೆಯೇ ಆನೆ, ರಾಜ್ಯ, ಸಂಪತ್ತು, ಐಶ್ವರ್ಯ ಇವೆಲ್ಲವನ್ನು ದೇವರೇ ಬಂದು ಕೊಟ್ಟರೂ ಅವೆಲ್ಲವನ್ನೂ ನಿರಾಕರಿಸಿ, ಶರಣರ ಸಂಗಕ್ಕೆ ಹಾತೊರೆಯಬೇಕು. ಪ್ರಾಪಂಚಿಕ ಸುಖಕ್ಕಿಂತ ಆಧ್ಯಾತ್ಮದ ಸುಖವೇ ಮುಖ್ಯ.

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರ
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ ರಾಮನಾಥ

ಶರಣರ ಪರಂಪರೆ ಬಸವಣ್ಣನ ಪರವಾಗಿ ಧ್ವನಿಎತ್ತಿದ್ದು. ಬಸವಣ್ಣನ ತಪ್ಪುಗಳನ್ನು ಕೂಡ ಕ್ಷಮಿಸುವಂಥ ಉದಾರ ಮನೋಭಾವ ಅವರದು. ಬಡವರ ಪರವಾಗಿ ನಿಂತು ದೇವರಿಗೂ ಸವಾಲು ಹಾಕುವಂಥ ಕೆಚ್ಚೆದೆಯುಳ್ಳವರು. ಜೇಡರ ದಾಸಿಮಯ್ಯ ಕೇವಲ ಸುಳ್ಳು ಹೇಳುವ ಬಂಡಾಯಗಾರನಾಗದೆ, ಸಮಸ್ಯೆಯ ಆಳಕ್ಕೆ ಕರೆದೊಯ್ದು ಬಡತನ ಮತ್ತು ಹಸಿವಿನ ದುರಂತ ಲೋಕವನ್ನೇ ತೋರಿಸುತ್ತಾನೆ. ಹಸಿವಿಂದ ಒದ್ದಾಡುವವನಿಗೆ ಹುಸಿ ಯಾವುದು? ದಿಟ ಯಾವುದು? ಮನುಷ್ಯನ ಮೊದಲ ಅಗತ್ಯವಾದ ಹಸಿವನ್ನು ಹೋಗಲಾಡಿಸದ ದೇವನಿಗೆ ಸತ್ಯ, ಸುಳ್ಳುಗಳ ಸಿದ್ಧಾಂತ ಹೇಳುವ ನೈತಿಕ ಹಕ್ಕಿಲ್ಲ, "ನೀನೂ ನನ್ನಂತೆ ಒಮ್ಮೆಯಾದರೂ ಒಡಲುಗೊಂಡು ನೋಡಾ" ಎನ್ನುವಲ್ಲಿ ಹಸಿವಿನ ತೀವ್ರತೆ ಸ್ಪಷ್ಟವಾಗಿ ಕಾಣುತ್ತದೆ.

ದೇವರ ಮೇಲೆ ನಂಬಿಕೆಯಿಟ್ಟು ಯಾವುದಕ್ಕೂ ಹಿಂಜರಿಯದ ವ್ಯಕ್ತಿಗಳು ಮಾತ್ರ ದುಃಖದಿಂದ ನರಳುವವರ ಪರವಾಗಿ ಇದ್ದು ದೇವರ ಜೊತೆ ವಾಗ್ವಾದಕ್ಕಿಳಿಯುವ ಅದಮ್ಯ ಆತ್ಮಶಕ್ತಿಯನ್ನು ಹೊಂದಿವರಾಗಿರುತ್ತಾರೆ. ಮನುಷ್ಯನ ಬೇಡಿಕೆಗಳಲ್ಲಿ ಮೂಲಭೂತ ಸೌಕರ್ಯಗಳತ್ತ ಗಮನಹರಿಸುವ, ದೇವರಿಗೇ ಸವಾಲು ಹಾಕುವ ದಾಸಿಮಯ್ಯ ಇನ್ನು ಉಳ್ಳವರನ್ನು ಬಿಟ್ಟಾರೆಯೆ? ದೇವರು-ಧರ್ಮದ ಹೆಸರಿನಲ್ಲಿ ಬಡವರ ಸುಲಿಗೆ ಮಾಡುವ ಮೇಲ್ಜಾತಿ, ಮೇಲ್ವರ್ಗದವರನ್ನು ಪರೋಕ್ಷವಾಗಿ ಪ್ರಶ್ನಿಸುತ್ತಾನೆ. ದೀನದಲಿತರ ಮತ್ತು ಮಹಿಳೆಯರ ಪರವಾಗಿ ನಿಂತು ಸಾಮಾಜಿಕ ಒಳಿತಿಗಾಗಿ ಕುಟುಂಬ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ದಾಸಿಮಯ್ಯ ಅವರ ಆಲೋಚನೆ ಎಲ್ಲರಿಗೂ ಮಾರ್ಗದರ್ಶಿಯಾಗಿದೆ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯ ಮಾಣ್ಬುದೆ

ಕಡಗೀಲು ಬಂಡಿಗಾಧಾರ

ಕಡುದರ್ಪವೇರಿದ ಒಡಲೆಂಬ ಬಂಡಿಗೆ

ಮೃಡಭಕ್ತರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ

ಶಿವಭಕ್ತರ ನುಡಿಗಡಣವೇ ಕಡೆಗೀಲು ಎಂಬುದನ್ನು ಸಮರ್ಥಿಸಲು ದಾಸಿಮಯ್ಯ ಕಟ್ಟಿಕೊಡುವ ಬಂಡಿಯ ಪ್ರತೀಕ ತುಂಬಾ ಅದ್ಭುತವಾಗಿದೆ. ಕಡೆಗೀಲಿನ ಪ್ರಾಮುಖ್ಯತೆಯನ್ನು ಅಂದರೆ ಅನಿವಾರ್ಯತೆಯನ್ನು ಹೇಳುತ್ತಲೇ ಶಿವಭಕ್ತರ ನುಡಿಗಡಣದ ಮಹತ್ವವನ್ನೂ ಸ್ಪಷ್ಟಪಡಿಸಲಾಗಿದೆ.

ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು' ಎಂಬ ಮಾತಿಗೆ ಸಾಕ್ಷಿ ಎಂಬಂತೆ ದಾಸಿಮಯ್ಯನ ವಚನಗಳು ಚಿಕ್ಕ ಚಿಕ್ಕ ನುಡಿಗಡಣದಿಂದ ಕೂಡಿದ್ದು ಕೇಳುವುದಕ್ಕೆ ಸ್ಪಷ್ಟವಾದ ಅರ್ಥವನ್ನು ಹೊರಹೊಮ್ಮಿಸುತ್ತವೆ. ಸರ್ವಶಕ್ತನಾದ ಶಿವನು ಸೃಷ್ಟಿಯಂತೆ ಅದರ ಸ್ಥಿತಿಗೂ ಕಾರಣ.

ಇಳೆ, ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು

ಸೂಸುವ ಗಾಳಿ ನಿಮ್ಮ ದಾನ

ಎತ್ತು ನಿಮ್ಮ ದಾನ

ಬಿತ್ತು ನಿಮ್ಮ ದಾನ

ಸುತ್ತಿ ಸುರಿವ ಸಾಗರ ನಿಮ್ಮ ದಾನ

ಶಿವನ ಅಸ್ತಿತ್ವವನ್ನು ಕುರಿತು ದಾಸಿಮಯ್ಯ 'ಮಣಿಗಣ ಸೂತ್ರದಂತೆ ತ್ರಿಣಯನ ನೀನಿಪ್ಪೆಯಯ್ಯಾ' ಎಂದು ಅರ್ಥಪೂರ್ಣವಾಗಿ ಹೇಳಿದ್ದಾನೆ. ಒಂದೊಂದು ಮುತ್ತು ಭಿನ್ನವಾಗಿರುವಂತೆ ಆತ್ಮಗಳೂ ಭಿನ್ನ. ಆದರೆ ಎಲ್ಲಾ ಮುತ್ತುಗಳನ್ನು ಒಂದೆಡೆಗೆ ಸೇರಿಸುವಂತೆ ಎಲ್ಲ ಆತ್ಮಗಳಲ್ಲಿರುವ ಶಿವನು ಒಬ್ಬನೇ. 'ಈಶ ನಿಮ್ಮ ಪೂಜಿಸಿದ ಬಳಿಕ ಅನ್ಯದೈವಂಗಳಿಗೆ ಹೇಸಲೇಬೇಕು' ಎಂದು ತನ್ನ ಶಿವನಿಷ್ಠೆಯನ್ನು, ಏಕದೇವೋಪಾಸನೆಯನ್ನು ಮೆರೆದಿದ್ದಾನೆ. ಈತನ ವಚನಗಳಲ್ಲಿ ಹೆಣ್ಣು ಬೇರೆಯಲ್ಲ' ಗಂಡು ಬೇರೆಯಲ್ಲ. ಹೆಣ್ಣು–ಗಂಡು ಬಾಹ್ಯ ಶಾರೀರಿಕ ದೃಷ್ಟಿಯಿಂದ ಭಿನ್ನರಾಗಿದ್ದರೂ ಅವರಿಬ್ಬರಲ್ಲಿರುವ ಆತ್ಮ ಒಂದೇ ಎಂಬುದು ಸಾರ್ವಕಾಲಿಕ ಸತ್ಯ. 'ಅರ್ಧನಾರೀಶ್ವರಂತೆ' ಗಂಡಸನುಳ್ಳಮ್ಮನ ಗೌರಿ ಎಂದು ಕಾಣಬೇಕು. ಭಕ್ತಿ ಮಾರ್ಗದಲ್ಲೇ ಆಗಲಿ, ಸಾಮಾಜಿಕ

ಬದುಕಿನಲ್ಲೇ ಆಗಲಿ ಸ್ತ್ರೀಯರು ಪುರುಷರಿಗೆ ಸಮಾನರು ಎಂದು ದಾಸಿಮಯ್ಯನ ಅಭಿಮತ.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ

ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ

ಕಳವೆಯಲ್ಲ ಹೋಗಿ ಬರಿಗೋಣಿ ಉಳಿಯಿತ್ತು

ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ

ಚಂಚಲ ಮನಸ್ಸಿರುವವನ ಭಕ್ತಿ ವ್ಯರ್ಥವಾದುದೆಂಬುದನ್ನು ಆಳಿಮನವೆಂಬ ಹರಿದ ಚೀಲದಲ್ಲಿ ಭಕ್ತಿ ಎಂಬ ಧಾನ್ಯವನ್ನು ತುಂಬಿಕೊಂಡು ನಾನು ಭಕ್ತ ಎಂದು ಬಹಿರಂಗಪಡಿಸುತ್ತ ನಡೆದರೆ ಅಲ್ಪಕಾಲದಲ್ಲಿಯೇ ಧಾನ್ಯವೆಲ್ಲ ಹೇಗೆ ಸೋರಿ ಹೋಗುತ್ತದೋ ಹಾಗೇ ಚಿತ್ತ ಚಾಂಚಲ್ಯವೆಂಬ ರಂಧ್ರದ ಮೂಲಕ ಸೋರಿಹೋಗುತ್ತದೆ ಎಂದು ಹೇಳಿರುವ ರೀತಿ ಮಾರ್ಮಿಕವಾಗಿದೆ. ಇನ್ನೊಂದು ಕಡೆ ದಾಸಿಮಯ್ಯ ಕಪಟ ಸನ್ಯಾಸಿಗಳನ್ನು ಬೆಕ್ಕಿಗೆ ಹೋಲಿಸಿದ್ದಾನೆ. ಬರುಸಟೆಗನ ಭಕ್ತಿ ದಿಟವೆಂದು ನಚ್ಚಲುಬೇಡ. "ಮಠದೊಳಗಣ, ಬೆಕ್ಕು ಇಲಿಯ ಕಂಡು ಪುಟ ನೆಗೆದಂತಾಯ್ತು" ಮಠದಲ್ಲಿರುವ ಬೆಕ್ಕು ಅಭಾವ ವೈರಾಗ್ಯ ನಟಿಸುತ್ತ ತಪಸ್ಸಿಗೆ ಕುಳಿತುಕೊಂಡಿತೆನೋ ಎನ್ನುವಂತೆ ಕಣ್ಮುಚ್ಚುತ್ತದೆ. ಆದರೆ ಕಣ್ಮುಂದೆ ಬಂದು ಹೋಗುವ ಇಲಿಯನ್ನು ನೋಡಿ ಇನ್ನೊಮ್ಮೆ ಧ್ಯಾನ ಮಾಡಿದರಾಯಿತೆಂದು ತಿಳಿದು ಇಲಿಯ ಮೇಲೆ ಹಾರುತ್ತದೆ. ಈ ಬೆಕ್ಕಿನಂತೆ ಸನ್ಯಾಸಿಯ ಭಕ್ತಿ ಕಪಟ ನಾಟಕವಷ್ಟೇ ಅಲ್ಲ ಕೇವಲ ಹೊಟ್ಟೆಪಾಡಿನದು, ಇಂತಹ ಭಕ್ತಿಗೆ ಆ ಶಿವನು ಒಲಿಯುವುದಿಲ್ಲ, ಇಲ್ಲಿ ದಾಸಿಮಯ್ಯ ಸಾಮಾನ್ಯ ಜನರ ನಿತ್ಯದ ಮಾತುಗಳನ್ನೇ ಬಳಸಿಕೊಂಡು ಡಂಭಾಚಾರಿಗಳನ್ನು ವಿಡಂಬಿಸಿದ್ದಾನೆ.

ದಾಸಿಮಯ್ಯ ಒಳ್ಳೆಯ ತತ್ವಗಳ ಬೋಧನೆಯ ಜೊತೆಗೆ ನೀತಿಬೋಧಕನೂ ಆಗಿದ್ದುದು ಆತನ ವಚನಗಳಿಂದ ವಿದಿತವಾಗುವುದು. "ಸಜ್ಜನರ ಸಂಗ ಹೆಜ್ಜೇನು ಸವಿದಂತೆ" ಎನ್ನುವಂತೆ ಒಳ್ಳೆಯವರ ಸ್ನೇಹ ಮಾಡಬೇಕು, ಕಳ್ಳರು–ಮೋಸಗಾರರ ಸ್ನೇಹ ಸರಿಯಲ್ಲ. ಇವತ್ತಿಗೆ ನಾಳೆಗೆಂದು ಯೋಚಿಸುತ್ತಾ ಧನ–ಧಾನ್ಯ ಸಂಗ್ರಹಿಸುತ್ತ ಸೊರಗಬಾರದು. ಎಲ್ಲಾ ಕೊಡುವ ಭಗವಂತನಾದ ಶಿವನಿಗೆ ಎಂದೂ ಬಡತನವಿಲ್ಲ, ಮದ್ಯಪಾನ, ಮಾಂಸಭಕ್ಷಣೆ, ವೇಶ್ಯಾಸಂಗ, ಪರಸ್ತ್ರೀ ವ್ಯಾಮೋಹ ಇವುಗಳು ಮನುಷ್ಯನಿಗೆ ಶಾಶ್ವತವಾದ ಸಂತೋಷವನ್ನು ನೀಡಲಾರವು.

ಕುಲಜ ನಾನೆಂದು ತಲೆವಾಗದಿರ್ದಡೆ ತಲೆ ಶೂಲದ ತಲೆಯಾಗುತ್ತದೆ. ಒಳ್ಳೆಯ ಕಾರ್ಯವನ್ನು ಮಾಡಲು ಅಣಿಯಾದಾಗ ತಿಥಿ, ವಾರ, ನಕ್ಷತ್ರಗಳನ್ನು ನೋಡುವುದರಿಂದ ಭವಿಷ್ಯದ ಜೀವನದಲ್ಲಿ ಒಳಿತಾಗುತ್ತದೆ ಎನ್ನುವುದು ಕೇವಲ ಭ್ರಮೆಯಷ್ಟೇ, ಮಾಡುವ ಕೆಲಸದಲ್ಲಿ ಶ್ರದ್ಧೆ, ಆಸಕ್ತಿ, ಪ್ರೀತಿ ಇದ್ದರೆ ಜಯ ಖಂಡಿತ ಸಿಗುತ್ತದೆ. ಸಕಲ ಜೀವಿಗಳಲ್ಲಿ ದಯೆಯನ್ನು ತೋರಿಸಿ ಪ್ರಾಣಿ ಹತ್ಯೆಯನ್ನು ನಿಷೇಧಿಸಬೇಕು. ಹಾಗೆ ಬಲಿಕೊಡುವವರು ಕ್ರೂರಕರ್ಮಿಗಳೇ ಹೊರತು ಭಕ್ತರಲ್ಲ, ದೇವರು ಎಂದಿಗೂ ಪ್ರಾಣಿಗಳನ್ನು ಬಲಿಯಾಗಿ ಕೇಳುವುದಿಲ್ಲ.

ಮಾನವನ ದೇಹ ನಶ್ವರವಾಗಿದ್ದು ಹೆಣ್ಣು-ಹೊನ್ನು-ಮಣ್ಣುಗಳಿಗಾಗಿ ಬಡಿದಾಡುವುದು ಸರಿಯಲ್ಲ. ಮಾನವ ದೈವಭಕ್ತನಾಗಬೇಕು. ಸಂಕಟ ಬಂದಾಗ ಶಿವನನ್ನು ನೆನೆದು ಅದು ಪರಿಹಾರವಾದೊಡನೆ ದೇವರನ್ನು ಮರೆಯುವುದು ಸರಿಯಲ್ಲವೆಂದು ನುಡಿದಿರುವ ದಾಸಿಮಯ್ಯನ ನುಡಿಗಳಲ್ಲಿ ಸಮಾಜದ ಬಾಳು ಹಸನಾಗಬೇಕೆಂಬ ಕಳಕಳಿ ಇದೆ. ತಪ್ಪು ಮಾಡುವುದು ಮನುಷ್ಯನ ಸಹಜ ಗುಣ. ಮನುಷ್ಯರು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಪ್ರಯತ್ನಿಸುವಾಗ ಆಗೊಮ್ಮೆ ಈಗೊಮ್ಮೆ ತಪ್ಪಾಗುತ್ತದೆ. ಇದನ್ನು ಅರಿತು ಮಾನವರ ತಪ್ಪನ್ನು ಮನ್ನಿಸಿ ಒಳ್ಳೆಯ ಮಾರ್ಗದಲ್ಲಿ ಮುಂದುವರಿಯುವ ಸದ್ಬುದ್ಧಿ ಕೊಡಬೇಕೆಂದು ಶಿವನಲ್ಲಿ ದಾಸಿಮಯ್ಯನ ಬಿನ್ನಹ, ಆದ್ದರಿಂದಲೇ ನೀನೂ ನನ್ನಂತೆ ಒಮ್ಮೆ ದೇಹ ಧರಿಸಿ ಭೂಲೋಕಕ್ಕೆ ಬಾ, ಮಾನವನ ಬದುಕಿನ ಎಷ್ಟೊಂದು ಘೋರವಾದದ್ದು ಎಂಬುದು ನಿನಗೆ ತಿಳಿಯುವುದು ಎಂದು ದೇವರಿಗೆ ಸವಾಲು ಹಾಕುವನು.

ದಾಸಿಮಯ್ಯ ವ್ಯಕ್ತಿತ್ವ ಘನವಾದುದಾಗಿತ್ತೆಂಬುದು ಬಸವಣ್ಣ ಹಾಗೂ ಇನ್ನಿತರ ಶರಣರ ವಚನಗಳಿಂದ ತಿಳಿಯುತ್ತದೆ. "ಭಕ್ತಿ ಎಂತಹುದಯ್ಯಾ? ದಾಸಯ್ಯ ಮಾಡಿದಂತಹುದಯ್ಯಾ" "ದಾಸಿಮಯ್ಯ ಶಿವದಾನವನೆರೆದ ನೋಡಯ್ಯಾ" "ಭಕ್ತಿ ಇಲ್ಲದ ಬಡವ ನಾನಯ್ಯ ದಾಸಯ್ಯನ ಮನೆಯಲಿ ಬೇಡಿದೆ, ಎನ್ನ ಪಾತ್ರೆ ತುಂಬಿತ್ತು" "ತನು-ಮನ-ಧನಗಳಲ್ಲಿ ವಂಚನೆಯನರಿಯರಯ್ಯಾ ದಾಸಯ್ಯ ಸಿರಿಯಾಳನವರು" ಎಂದು ಬಸವಣ್ಣನವರು ಹೇಳುವಲ್ಲಿ ಆತನ ವ್ಯಕ್ತಿತ್ವದ ಉನ್ನತಿಕೆ, ಘನತೆಯ ಪರಿಚಯವಾಗುವುದು.

ಸಿದ್ಧರಾಮನು 'ಜೇಡರೆಲ್ಲರೂ ದಾಸಿಮಯ್ಯನಾಗಬಲ್ಲರೇ'? ಎಂದು ಹೇಳುವುದರ ಮೂಲಕ ಆತನನ್ನು ಕೊಂಡಾಡಿದ್ದಾನೆ.

ಅಂಬಿಗರ ಚೌಡಯ್ಯ "ಬೇಡಂಗೆ, ಜೇಡಂಗೆ, ಡೋಹಾರಂಗೆ, ಹೊಲೆಯಂಗೆ ರೂಢಿಗೀಶ್ವರನೊಲಿದ ಪರಿಯ ನೋಡಾ ಅಯ್ಯಾ" ಎಂದು ದಾಸಿಮಯ್ಯನಿಗೆ ಶಿವನು ಒಲಿದಿರುವನೆಂದು ಉಲ್ಲೇಖಿಸಿದ್ದಾನೆ.

ಹಸಿವಿಲ್ಲದ ಬೊಂಬೆಗೆ ತೃಷೆ ಇಲ್ಲದ ನೀರೆರೆದು

ಮಸಕವಿಲ್ಲದ ಮಾತ ಮನದಲ್ಲಿ ಹೇಳಿ ಹೆಸರಿಲ್ಲದೆ ಕರೆದೊಡೆ

ಓ ಎಂಬುವ ನಾನೋ ನೀನೋ ರಾಮನಾಥಾ!

ಅಲ್ಲಮನಂತೆ ಬೆಡಗಿನ ವಚನಗಳನ್ನು ಹೋಲುವ ಈ ಭಾಷೆ ನಿಜವಾಗಿ ಬೆಡಗಿನದಲ್ಲ. ಇಲ್ಲಿ ದೇವರು ಮತ್ತು ಮನುಷ್ಯನ ಸಂಬಂಧದ ಕುರಿತು ಪ್ರಶ್ನೆಯೊಂದನ್ನು ಹಾಕಿಕೊಂಡು ಸಾಧ್ಯವಿದ್ದಷ್ಟು ದೇವರು ಮನುಷ್ಯನ ಸಂಬಂಧದ ಸೂಕ್ಷ್ಮತೆಯನ್ನು ನಾಜೂಕಾಗಿ ಬಿಡಿಸಿದ್ದಾನೆ. ಹಸಿವೆ ಇಲ್ಲದ ಬೊಂಬೆಯೆಂದರೆ ದೇವರು. ಮನುಷ್ಯ ಪೂರ್ಣವಾಗಿ ಮಣ್ಣಿನ ಬೊಂಬೆಯೇ ಆಗಿದ್ದರೆ ಸಮಸ್ಯೆ ಇರುತ್ತಿರಲಿಲ್ಲ, ಅಥವಾ ಆ ಬೊಂಬೆ ದೇವರಿಚ್ಛೆಯಂತೆ ನಡೆಯುವುದಾಗಿದ್ದರೆ ಸಮಸ್ಯೆ ಇರುತ್ತಿರಲಿಲ್ಲ, ಆದರೆ ಇವೆರಡೂ ಅಲ್ಲ, ಹೆಸರಿಲ್ಲದೆ ಕರೆದಾಗ ಓ ಎನ್ನುವುದು ಮನುಷ್ಯನೋ-ದೇವರೋ ತಿಳಿಯದಾಗಿದೆ. ಮನುಷ್ಯನ ದೇಹದ ಪರಾವಲಂಬಿತ್ವ ಮತ್ತು ಸ್ವಾತಂತ್ರ್ಯ ಇವು ಕೊನೆಯವರೆಗೂ ಬಿಡಿಸಲಾಗದ ತೊಡಕನ್ನುಂಟು ಮಾಡುತ್ತವೆ.

ದಾಸಿಮಯ್ಯನ ವಚನಗಳ ಭಾಷೆಯ ವಿಶಿಷ್ಟ ಲಕ್ಷಣವೆಂದರೆ ಅದು ತನಗೆ ತಾನೇ ಮಾತನಾಡಿಕೊಳ್ಳುವ ಮನಸ್ಸಿನ ಭಾಷೆಯಾಗಿರುವುದು. ಅನುಭವ ಮಂಟಪದ ಶರಣರು ಎಷ್ಟು ಅಂತರ್ಮುಖಿಗಳೋ ಅಷ್ಟೇ ಬಹಿರ್ಮುಖಿರಾದವರು. ದೇವರಲ್ಲಿ ಮೊರೆ ಇಡುವುದೇ ಆಗಲೀ, ಸದಾಚಾರವನ್ನು ಬೋಧಿಸುವುದೇ ಆಗಲೀ, ಮನುಷ್ಯ-ಶಿವನ ಸಂಬಂಧವನ್ನು ಕುರಿತು ಮಾತನಾಡುವುದೇ ಆಗಲೀ ಅಲ್ಲಿ ಶರಣರ ಧ್ವನಿ ಗಟ್ಟಿಯಾಗಿ ಕೇಳಿಸುತ್ತದೆ. ಆದರೆ ದಾಸಿಮಯ್ಯ ಹೇಳುವಾಗ ಮೌನವೇ ಮಾತನಾಡಿದಂತಿರುತ್ತದೆ.

ಒಂದಾಗಿಹವೈದು ಭೂತ, ಚಂದ್ರಸೂರ್ಯ ನಂದಿವಾಹನ ನಿಮ್ಮ ತನುವಲ್ಲವೇ?

ನಿಂದು ನೋಡಲು ಜಗಭರಿತನಾಗಿಪ್ಪೆ ಇನ್ನು ನೋಯಿಸುವೆನಾರನಯ್ಯ ರಾಮನಾಥಾ?

ಪಂಚಭೂತಗಳು ಒಂದಾಗಿ ದೇವರದೇವ ಪ್ರತ್ಯಕ್ಷವಾಗುವ ಈ ಅನುಭವ ದಾಸಿಮಯ್ಯನಿಗೆ ಶೈವಾಗಮಗಳ ಮೂಲಕ ಬಂದಿರಬೇಕು ಅಥವಾ ಅನುಭವದಿಂದ ಬಂದ ತಿಳುವಳಿಕೆಯಾಗಿರುವುದೂ ಸಾಧ್ಯ. ಚಂದ್ರ, ಸೂರ್ಯ, ಗಾಳಿ, ನೀರು, ಭೂಮಿ, ಆಕಾಶ, ಮೊದಲಾದವುಗಳನ್ನು ಶಿವನ ಪ್ರತ್ಯಕ್ಷವಾದ ಅಷ್ಟತನಗಳೆಂದು ಹೇಳುತ್ತಾನೆ. 'ನಂದಿವಾಹನವನ್ನು' ಶಿವನ ತನುವೆಂದು ಗುರುತಿಸಿದ್ದಾರೆ. ಶಿವ ಜಗತ್ತನ್ನೆಲ್ಲಾ ವ್ಯಾಪಿಸಿಕೊಂಡಿದ್ದಾನೆ. ಕವಿಯ ಪ್ರತಿಭೆ ಜಗತ್ತನ್ನು ಹೊಸದಾಗಿ ನೋಡುವ ಕಣ್ಣುಗಳನ್ನು ದಯಪಾಲಿಸಿದೆ.

ಪ್ರತಿಯೊಬ್ಬ ಮನುಷ್ಯನು ತನ್ನ ವೃತ್ತಿಗೆ ನ್ಯಾಯ ಸಲ್ಲಿಸಲೇಬೇಕು. ಯಾವುದೇ ರೀತಿಯ ಹೆಚ್ಚಿನ ಪ್ರತಿಫಲ ಅಪೇಕ್ಷಿಸದೆ ಕೊಟ್ಟದ್ದನ್ನು ಸ್ವೀಕರಿಸಬೇಕು. "ಕಾಯಕವೇ ಕೈಲಾಸ" ವೆಂದು ನಿಷ್ಠೆಯಿಂದ ಕೆಲಸ ಮಾಡಬೇಕು.

ಒರತೆಗಳ ಕಂಡಿಂತು ಕಲರೀ ಬಾವಿಯ ತೋಸೆಂಬರು!

ಅರವಟಿಗೆ ಛತ್ರವು ತಮ್ಮದೆಂಬರು!

ಎಲೆ ಪಯಿರೈದದಿರೆ, ಸುರಿವ ಮಳೆ ಸುರಿಸದಿದ್ದಡೆ

ಅವರೇತರಲ್ಲಿ ನೀಡುವರಯ್ಯಾ! ರಾಮನಾಥಾ"

ಜೇಡರ ದಾಸಿಮಯ್ಯನ ಊರು ಮುದನೂರಿಗೂ ಅನ್ವಯವಾಗುತ್ತಿತ್ತು. ಆ ಹಳ್ಳಿಯ ಸುತ್ತಮುತ್ತ ಸಾಕಷ್ಟು ನೀರಿನ ನದಿಗಳಿದ್ದವು. ಅಲ್ಲಿಂದ ವರ್ಷವಿಡೀ ಉಕ್ಕಿ ಹರಿಯುತ್ತಿದ್ದ ನೀರಿನಿಂದ ಜನರು ಸಮೃದ್ಧ ಬೆಳೆಯನ್ನು ಬೆಳೆಯುತ್ತಿದ್ದರು. ಅಲ್ಲಿಂದ ಒರತೆಗಳು ಅರವಟ್ಟಿಗೆ ಛತ್ರಗಳ ಬಗ್ಗೆ ಹೆಮ್ಮೆಯಿತ್ತು ಅಲ್ಲಿಗೆ ಅನೇಕ ಯಾತ್ರಿಕರಿಗೆ ಸಹಾಯಕವಾಗಿತ್ತು.

ದಾಸಿಮಯ್ಯ ತನ್ನ ಮಧುರವಾದ, ತೀಕ್ಷ್ಣವಾದ ಮಾತುಗಳಿಂದ ಮುಂದೆಬಂದ ಅನೇಕ ವಚನಕಾರರಿಗೆ ಮಾರ್ಗದರ್ಶಕನಾಗಿದ್ದಾನೆ. ಸ್ತ್ರೀ ಸ್ವಾತಂತ್ರ್ಯ, ಅಸ್ಪೃಶ್ಯೋದ್ಧಾರದಂತ ಪ್ರಗತಿಪರ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದಾನೆ. ಕಪಟ, ವಂಚನೆ, ಅಹಂಕಾರ, ಒಣಪ್ರತಿಷ್ಠೆ, ವಿಷಯ ಲಂಪಟತೆಯ ಮುಂತಾದ ಗುಣಗಳನ್ನು ಖಂಡಿಸಿದ್ದಾನೆ. ಮಾನವನ ವಿನಯವಂತಿಕೆ, ಸದಾಚಾರ, ಆಸ್ತಿಕತೆ, ನಿಷ್ಠೆ, ನಂಬಿಕೆ ಮೊದಲಾದ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದ್ದಾನೆ.

ಒಟ್ಟಾರೆಯಾಗಿ ಜೇಡರ ದಾಸಿಮಯ್ಯನಿಗೆ ವಚನ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ದೊರೆತಿದ್ದು ಎಲ್ಲಾ ವರ್ಗದ ಜನರಿಂದ, ಕಾಯಕ ಯೋಗಿಗಳಿಗೆ ಮತ್ತು ಶರಣರಿಗೆಲ್ಲ ಮನ್ನಣೆ ದೊರೆತಿದೆ. ವಚನ ಸಾಹಿತ್ಯ ಜೇಡರ ದಾಸಿಮಯ್ಯ ಮತ್ತು ಅಲ್ಲಮಪ್ರಭುಗಳಿಬ್ಬರ ವಚನಕಾರರಿಂದ ವಚನ ಸಾಹಿತ್ಯವೇ ಕಳಶ ಪ್ರಾಯವಾದವರು. ಮುಂದಿನ ಶರಣರ ಪರಂಪರೆಗೆ ಸುಶಿಕ್ಷಿತ ಮಾರ್ಗವನ್ನು ಹಾಕಿಕೊಟ್ಟು ಆದ್ಯ ವಚನಕಾರರೆಂಬ ಗೌರವ ಸಲ್ಲುತ್ತದೆ.

ಅಧ್ಯಾಯ – ೪

ಮಹಿಳಾ ಸಂವೇದನೆ ಮತ್ತು ವ್ಯಕ್ತಿತ್ವ ವಿಕಸನ

'ಎಲ್ಲಿ ಸ್ತ್ರಿಯರು ಪೂಜಿಸಲ್ಪಡುತ್ತಾರೋ, ಅಲ್ಲಿ ದೇವತೆಗಳು ರಮಿಸುತ್ತಾರೆ' ಎಂದು ಹೇಳಿರುವ ವಾಕ್ಯ ಪ್ರಾಚೀನ ಹಿಂದೂ ಸಂಸ್ಕೃತಿಯ ಗರ್ಭದಲ್ಲೆ ಹೆಣ್ಣಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದ ಆ ಸಂಸ್ಕೃತಿ ಅವಳಿಗೆ ಮನೆಯೆಂಬ ಸಂಕೋಲೆಯನ್ನು ಬಿಗಿದು ಧ್ವನಿ ಎತ್ತದಂತೆ ಮಾಡಿದೆ. ಅದರಲ್ಲೂ ತಮ್ಮ ಸುತ್ತ ಬಿಗಿದಿರುವ ಸಂಕೋಲೆಯೆಂಬ ಉಕ್ಕಿನ ಹಿಡಿತದಿಂದ ಪಾರಾಗಲು ಅಲ್ಲೊಂದು ಇಲ್ಲೊಂದರಂತೆ ಕೇಳಿಬರುತ್ತಿರುವ ಗಟ್ಟಿ ಧ್ವನಿಗಳ ಬಾಯಿ ಮುಚ್ಚಿಸಲು ಹಿಂದೂ ಸಂಸ್ಕೃತಿಯು ತನ್ನ ಕೀರ್ತಿಪತಾಕೆಯನ್ನು ನಾನಾ ಬಣ್ಣಗಳಲ್ಲಿ ಹರಡುವಂತೆ ಪ್ರೇರೇಪಿಸಿದ್ದು ಅನೇಕರು.

೬ನೇ ಶತಮಾನದಿಂದ ೧೬ನೇ ಶತಮಾನದ ಹತ್ತು ಶತಮಾನಗಳ ಸುದೀರ್ಘ ಕಾಲಾವಧಿಯ ಭಕ್ತಿಪಂಥವೆಂದು ಕರೆಯಲಾಗುವ ಭಿನ್ನಮತೀಯ ಚಳುವಳಿಗಳು ವ್ಯಕ್ತಿತ್ವ ವಿಕಾಸ ಮತ್ತು ಹೆಣ್ಣು ಗಂಡಿನ ಸಂಬಂಧದ ವಿಸ್ತಾರಕ್ಕೆ ಕಲ್ಪಿಸಿದ ಅವಕಾಶಗಳು ಕ್ರಾಂತಿಕಾರಕವಾಗಿ ಕಂಡಿವೆ. ಅದರಲ್ಲಿ ಸಾಮಾಜಿಕವಾಗಿ ಶತಮಾನಗಳವರೆಗೆ ದುರ್ಬಲಗೊಳಿಸಲ್ಪಟ್ಟ ಸಮುದಾಯಗಳು ಮತ್ತು ಮಹಿಳಾ ಸೃಜನಶೀಲತೆಯನ್ನು ಪಡೆದುಕೊಳ್ಳಲು ಸಾಧ್ಯವಾದದ್ದು ಭಕ್ತಿಪಂಥದ ಚಳುವಳಿಗಳ ಮೂಲಕವೇ. ಪುರುಷನೆಂಬ ಅಹಂಕಾರವು ಅಳಿಯದವನಿಗೆ ಭಕ್ತಿಪಂಥದಲ್ಲಿ ಸ್ಥಾನವಿಲ್ಲ. ವೈದಿಕ ಸಮಾಜದ ಅತಿ ಎತ್ತರದ ಸ್ಥಳವನ್ನು ಪುರುಷಪ್ರಧಾನ ವ್ಯವಸ್ಥೆಯ ಪಿತೃಸ್ಥಾನವನ್ನು ಅಲಂಕರಿಸಿದ್ದವರು ಬ್ರಾಹ್ಮಣರು. ಇವರ ಭಾಷೆ ಸಂಸ್ಕೃತ–ದೇವಭಾಷೆಯಾಗಿತ್ತು. ಭಕ್ತಿ ಚಳುವಳಿಯು ಧಾರ್ಮಿಕ ಕ್ಷೇತ್ರದಲ್ಲಿ ಪಿತೃಭಾಷೆ, ದೇವಭಾಷೆಯಾಗಿದ್ದ ಸಂಸ್ಕೃತವು ಏಕಸ್ವಾಮ್ಯತೆಯನ್ನು ಮುರಿದು ಮಾತೃಭಾಷೆಯಲ್ಲಿ ಭಕ್ತನ ಆರಾಧ್ಯ ದೈವದೊಂದಿಗೆ ಮಾತನಾಡಲು ಸಾಧ್ಯವಾಗಿದ್ದು ಹಾಗೂ ಪುರೋಹಿತರಂತಹ ಮಧ್ಯವರ್ತಿಗಳನ್ನು ದೂರವಿರಿಸಿ ಧಾರ್ಮಿಕತೆಯ ನೆರಳು ಬೀಳದಂತೆ ಯಾವುದರ ನೆರವಿಲ್ಲದೇ ನೇರವಾಗಿ ದೇವರೊಂದಿಗೆ ಸಂವಾದ ನಡೆಸಲು ಸಾಧ್ಯವಾದದ್ದು ಭಕ್ತಿ ಚಳುವಳಿಯಲ್ಲಿಯೇ ಎಂಬುದನ್ನು – ಎ.ಕೆ. ರಾಮಾನುಜನ್ ಗುರುತಿಸುತ್ತಾರೆ.

ಭಕ್ತಿಪಂಥದ ಈ ಆಂದೋಲನದಲ್ಲಿ ಕಂಡುಬರುವ ಮೂಲನೆಲೆಗಳಲ್ಲಿ ಸ್ತ್ರೀ ಪ್ರಧಾನ ಅಂಶಗಳಿಂದ ಪ್ರೇರಿತವಾದಂಥವುಗಳಾಗಿವೆ. ದಕ್ಷಿಣ ಭಾಗದಲ್ಲಿ ಮೊದಲು ಪ್ರಾರಂಭವಾಗಿ ನಿಧಾನವಾಗಿ ಎಲ್ಲ ಕಡೆ ವ್ಯಾಪಿಸಿಕೊಳ್ಳುತ್ತ ಉತ್ತರ ಭಾರತವನ್ನು ಆವರಿಸಿತ್ತು. ಮುಖ್ಯವಾಗಿ ಅಖಿಲ ಭಾರತದ ವ್ಯಾಪ್ತಿಯುದ್ಧಕ್ಕೂ, ಈ ಚಳುವಳಿಯಲ್ಲಿ ಮಹಿಳಾ ಸಂತರು ನಿರ್ವಹಿಸಿದ ಪಾತ್ರವನ್ನು ಗಮನಿಸಿದರೆ ಈ ಧಾರ್ಮಿಕ ಚಳುವಳಿಯ

ಮಹಿಳೆಯರಿಗೆ ವಿಮೋಚನೆ ನೀಡಿದಂತಾಯಿತು. ಉದಾಹರಣೆಗೆ: ಅಕ್ಕಮಹಾದೇವಿ, ಮೀರಾಬಾಯಿ, ಅವ್ವೆಯಾರ್, ಆಂಡಾಳ, ಲಾಲ್‌ದೇಡ್ ನಂತಹವರು ಸಾಂಪ್ರದಾಯಿಕ ಅರ್ಥದ ಗಂಡು–ಹೆಣ್ಣಿನ ಸಂಬಂಧವನ್ನು ಬದಲಾಯಿಸುವ ಜೊತೆಗೆ ಧಿಕ್ಕರಿಸುವ ನಿಲುವುಗಳು ಪರಂಪರಾಗತವಾಗಿ ಬಂದಂತಹ ಮೌಲ್ಯಗಳನ್ನು ಬುಡಮೇಲು ಮಾಡಿದೆ.

ಋಗ್ವೇದದಲ್ಲಿ ಇಂದ್ರಾಣಿ, ಲೋಪಾಮುದ್ರೆ, ಶಚಿ ಮೊದಲಾದ ಮಹಿಳೆಯರು ಮಂತ್ರಗಳನ್ನು ರಚಿಸಿದ್ದಾರೆಂದು ತಿಳಿದುಬಂದಿದೆ, ಹೆಣ್ಣಿಗೆ ವೈದಿಕ ಧರ್ಮದಲ್ಲಿ ಉಪನಯನದ ಹಕ್ಕು ಇಲ್ಲದೇ ಇರುವುದರಿಂದ ಜ್ಞಾನವನ್ನು ಪಡೆಯುವ ಹಕ್ಕಿನಿಂದಲೂ ವಂಚಿತಳನ್ನಾಗಿಸಿದ್ದಾರೆ. ಭಕ್ತಿಚಳುವಳಿಯಲ್ಲಿ ಕೆಲವು ಕಡೆ ಗೃಹಸ್ಥ ಜೀವನವನ್ನು ಸ್ವೀಕರಿಸಿ ಭಕ್ತನಾಗಿ ಬೀದಿಗಿಳಿಯುವುದು, ಭೋಧಕನಾಗಿ ಊರೂರು ಸುತ್ತುವುದು, ಸಮಸ್ಯೆಯನ್ನು ಸೃಷ್ಟಿಸುತ್ತಿರಲಿಲ್ಲ, ಆದರೆ ಮಹಿಳೆಯ ಇಂತಹ ಸ್ವಾತಂತ್ರ ಅಪೇಕ್ಷೆಯನ್ನು ಮಾನ್ಯ ಮಾಡುವುದು ಸಾಂಪ್ರದಾಯಕ ವ್ಯವಸ್ಥೆಯಲ್ಲಿ ಸಾಧ್ಯವಿರಲಿಲ್ಲ.

ಮಹಿಳಾ ಸಂತರು ವಿವಾಹ ಮತ್ತು ಕೌಟುಂಬಿಕ ಜೀವನವನ್ನು ತಮ್ಮ ಧಾರ್ಮಿಕ ಆಕಾಂಕ್ಷೆಗಳಿಗೆ ಮಾರಕವೆಂದು ಬಗೆಯುತ್ತಾರೆ. ಈ ಮೂಲಕ ಸಂಬಂಧಗಳನ್ನು ಧಿಕ್ಕರಿಸುತ್ತಾರೆ. ಹಿಂದೂ ಮತ್ತು ಭೌದ್ಧ ಸಂಪ್ರದಾಯಗಳು ಮಹಿಳೆಗೆ ಸಾಧನೆಯ ಸ್ವಾತಂತ್ರ ವ್ಯಕ್ತಿತ್ವವನ್ನು ಕೌಟುಂಬಿಕ ಸಮಸ್ಯೆಗಳಲ್ಲಿ' ಪುರುಷನಿಗಿದ್ದ ಗೌರವ ಸಮಾನವಾದ ಸ್ಥಾನವನ್ನು ನೀಡುವಂತಹ ಬೌದ್ಧಿಕ ಮತ್ತು ಸಾಮಾಜಿಕ ರಚನೆಯಾಗಿರಲಿಲ್ಲ.

ಬುದ್ಧನ ಕಾಲದಲ್ಲಿ ಮಹಿಳೆಯರನ್ನು ಕುರಿತು ಆಲೋಚನೆ ಕ್ರಿಯೆಯಲ್ಲಿತ್ತೆಂಬುದಕ್ಕೆ ಬುದ್ಧನ ಸಂಘದಲ್ಲಿ ದೊರೆತಿರುವ ನಿದರ್ಶನಗಳಿವೆ. ಸ್ತ್ರೀ ಮಾನವನ ಉನ್ನತಿಯ ಬಗ್ಗೆ ಮಾಡಿರುವ ಕ್ರಿಯಾ ಚಟುವಟಿಕೆಗಳು ಅಂದರೆ ಪ್ರಜಾಪ್ರಭುತ್ವದ ಚಿಂತನೆ 'ಬುದ್ದ ಸಂಘ'ದಲ್ಲಿಯೇ ಕಂಡುಬಂದಿರುವುದು ಗಮನಾರ್ಹವಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಪಂಪ ಭಾರತ' ದಲ್ಲಿ ಚಿತ್ರಿಸಿರುವ ದ್ರೌಪದಿಯ ಪಾತ್ರ ಮಹಿಳಾ ಬಂಡಾಯದ ಬುನಾದಿಯಾಗಿದೆ. ಕೆಟ್ಟ ವೈದಿಕ ಧರ್ಮದ ಮೌಲ್ಯಗಳ ವಿರುದ್ಧ ಮೂಡಿಬಂದಿರುವ ಪ್ರತಿಭಟನೆಯಾಗಿ ಕಾಣುತ್ತದೆ.

ಅಪೂರ್ವ ಸಾಂಸ್ಕೃತಿಕ ಆಸ್ತಿ ಹಾಗೂ ನಮ್ಮ ಪರಂಪರೆಯ ಕನ್ನಡ ನಾಡಿನ ಸಾಹಿತ್ಯ 'ವಚನ ವಾಙ್ಮಯಿ' ಸಮಾಜ ಕಲ್ಯಾಣ ಮತ್ತು ಆತ್ಮ ಕಲ್ಯಾಣಕ್ಕೆ ವಚನ ಒಂದು ಚಳುವಳಿಯಾಗಿ ರೂಪುಗೊಂಡಿತು. ನುಡಿದಂತೆ ನಡೆದವರೆಂದರೆ ಶರಣರು ವಚನ ಸಾಹಿತ್ಯದಲ್ಲಿ ಪುರೋಹಿತಶಾಹಿ, ಪುರುಷರ ದಬ್ಬಾಳಿಕೆ, ರಾಜಶಾಹಿ ಮುಂತಾದ ಪ್ರತಿಗಾಮಿಗಳ ವಿರುದ್ಧ ಹೋರಾಟ ನಡೆಸಿದ ಜೀವಪರವಾದ ದನಿಗಳಿವೆ. ಶ್ರಮದ

ಮೂಲಕ ತಮ್ಮನ್ನು ತಾವು ಗುರುತಿಸಿಕೊಂಡಿದ್ದು, ಒಂದು ಕಡೆಯಾದರೆ ಶರಣರು ನೀಡಿದ ವಚನಗಳು ಸಾಹಿತ್ಯಕ್ಕೆ ಬೆನ್ನೆಲುಬಿನಂತೆ ಕಂಡುಬರುತ್ತದೆ. ವ್ಯಕ್ತಿ ಮತ್ತು ಸಮಾಜವು ಸೇರಿ ಉನ್ನತ ಗುರಿಯನ್ನು ಹೊಂದಲು ಸಾಧ್ಯವಾಯಿತು.

ಶರಣ ಚಳುವಳಿಗೂ ಮೊದಲು ಪಂಪ ಇನ್ನೂರು ವರ್ಷಗಳ ಹಿಂದೆ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಹೇಳಿದ್ದಾರೆ. ಆದರೆ ಮನುಷ್ಯ ಜಾತಿ ಒಂದೇ ಅಲ್ಲವೇ? ಎನ್ನುವ ಪ್ರಶ್ನೆಗೆ ಇವತ್ತಿಗೂ ಸರಿಯಾದ ಉತ್ತರ ದೊರೆತಿಲ್ಲ. ಯಾಕೆಂದರೆ ಇನ್ನು ನಾವು ಜಾತಿವಾದಿಗಳಾಗಿಯೇ ಉಳಿದಿದ್ದೇವೆ. ಅಸ್ಪೃಶ್ಯತೆಯನ್ನು ಆಚರಿಸುತ್ತೇವೆ. ಅಂತರಜಾತಿ ವಿವಾಹಗಳಿಗೆ ಎಷ್ಟು ತೊಡಕು ಉಂಟಾಗುತ್ತಿದೆ ಎಂಬುದು ಸರಿಯಾಗಿ ತಿಳಿದಿಲ್ಲವಾಗಿದೆ.

೧೨ನೇ ಶತಮಾನದಲ್ಲಿ ನಡೆದ ಕ್ರಾಂತಿಯ ಮುಖ್ಯ ನಾಯಕನಾದ ಬಸವಣ್ಣ ತನ್ನ ಜನಿವಾರವನ್ನು ಕಿತ್ತೆಸೆಯುವುದರ ಮೂಲಕ ಬಂಡಾಯದ ಹರಿಕಾರನಾಗಿದ್ದಾನೆ. ಹೊಸ ಸಮಾಜ ನಿರ್ಮಾಣವಾಗಿ ಎಲ್ಲಾರು ಮುಕ್ತವಾಗಿ ಚರ್ಚಿಸುವಂತೆ ಅನುಭವ ಮಂಟಪವನ್ನು ಬುನಾದಿಯನ್ನಾಗಿಸಿ ಕೊಂಡರು. ಬಸವಣ್ಣನ ವ್ಯಕ್ತಿತ್ವದ ಪಾರದರ್ಶಕತೆಗೆ ಸಂಕೇತವಾಗಿದೆ. ಅನುಭವ ಮಂಟಪದಲ್ಲಿ ಪುರುಷರೊಂದಿಗೆ ಮಹಿಳೆಯರು ಪರಸ್ಪರವಾಗಿ ತಮ್ಮ ಸಮಾಜದ ಚಿಂತನೆಯನ್ನು ಮಾಡುತ್ತಿದ್ದರೆಂಬ ಅಂಶವೇ ಗಮನಾರ್ಹವಾಗಿದೆ. ಆದ್ದರಿಂದ ೧೨ನೇ ಶತಮಾನದಲ್ಲಿ ಶರಣರ ಅಭಿವ್ಯಕ್ತಿ ಸ್ವತಂತ್ರ ಪಡೆದವರಾಗಿದ್ದರು. ನಂತರ ವಚನಕಾರ್ತಿಯರು ಮೊಟ್ಟಮೊದಲಿಗೆ ಯಜಮಾನ ಸಂಸ್ಕೃತಿ ವಿರುದ್ದ ಪ್ರತಿಭಟನೆ ವ್ಯಕ್ತಪಡಿಸಿದರು. ಶರಣರ ಸಾಂಸ್ಕೃತಿಕ ಚಳುವಳಿಗೆ ದಲಿತ ವರ್ಗದ ಶರಣೆಯರ ಬದುಕು ಮತ್ತು ಇವರ ವಚನಗಳಲ್ಲಿ ತಾತ್ವಿಕ ಅಂಶಗಳಿಗೆ ಚಾಲನೆಯನ್ನು ಕೊಟ್ಟವರೆಂದರೆ ತಪ್ಪಾಗಲಾರದು. ಈ ಧಾರ್ಮಿಕ ಚಳುವಳಿಯಲ್ಲಿ 'ಮಹಿಳಾ ವಿಮೋಚನೆ'ಗೆ ಚಾಲನೆಯನ್ನು ಒದಗಿಸಿದ್ದು ನೂರರಷ್ಟು ಸತ್ಯ.

ಈ ಹಿನ್ನಲೆಯಲ್ಲಿ ನೋಡಿದಾಗ ವಚನಕಾರರ ಆಲೋಚನೆಯ ದೃಷ್ಟಿಕೋನವನ್ನು ಅರಿತಾಗ ಮುಂದಿನ ಜನಾಂಗದ ಒಳಿತಿಗಾಗಿ ಸ್ತ್ರೀ ಮತ್ತು ಶೂದ್ರ ವರ್ಗದವರೆಲ್ಲ ಸರಿಸಮಾನರು. ಗಂಡು-ಹೆಣ್ಣಿನ ಭೇದ ಭೌತಿಕ ಚಿಹ್ನೆಗಳಲ್ಲಿ ಮಾತ್ರ. ಆದರೆ ಇಬ್ಬರೂ ಸರಿಸಮಾನರು. ಸಮಾಜ ಅಭಿವೃದ್ಧಿಯಾಗಬೇಕಾದರೆ ಸಮಾಜದ ಅರ್ಧಭಾಗವಾದ ಸ್ತ್ರೀ ಸಮೂಹವನ್ನು ಮೇಲೆತ್ತುವ ಮತ್ತು ಗೌರವ ಆರಾಧನೆಗಳನ್ನು ನೀಡುವುದರ ಮೂಲಕ ಸಾಧ್ಯ.

ಶಿವಶರಣ–ಶರಣೆಯರು ಬಾಳಿನ ಹೊಸಧರ್ಮ ಸ್ಥಾಪನೆಗೆ ನಾಂದಿ ಹಾಡಿದವರು. 'ಕಾಯಕ ತತ್ವದ ಬದುಕಿನ ಸಾಕ್ಷಾತ್ಕಾರ'ವನ್ನು ಮತ್ತು 'ದಾಸೋಹ' ಪರಿಕಲ್ಪನೆಯನ್ನು ಪ್ರಚಾರಪಡಿಸಿದರು. ಜಂಗಮನನ್ನು ಸತ್ಕರಿಸುತ್ತಾ ಸ್ಥಾವರವನ್ನು ತಿರಸ್ಕರಿಸುವುದರ ಮೂಲಕ ದೇಹವನ್ನು ದೇವಾಲಯವನ್ನಾಗಿಸಿದರು.

ಅಕ್ಕಮಹಾದೇವಿ:

ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ದೂರಮಾಡಿ ಪುರುಷ ಸಮಾಜದ ವಿರುದ್ಧ ಪ್ರತಿಭಟಿಸಿದ ಪ್ರಥಮ ದಿಟ್ಟ ವಚನಕಾರ್ತಿ ಅಕ್ಕಮಹಾದೇವಿ. ಜಗತ್ತಿನ ಯಾವುದೇ ಸಾಹಿತ್ಯದಲ್ಲಿ ಯಜಮಾನ ಸಂಸ್ಕೃತಿಯ ವಿರುದ್ದ ಬಂಡೆದ್ದ ಮಹಿಳೆ ಎಂದರೆ ಅಕ್ಕಮಹಾದೇವಿ. ತನ್ನ ಆತ್ಮಸಾಕ್ಷಾತ್ಕಾರಕ್ಕೆ ತೊಡಕಾದ ಹೆಣ್ಣಿನ ದೇಹವನ್ನು ಎದುರಿಸುವುದರೊಂದಿಗೆ ವಿವಾಹ ಮತ್ತು ದಾಂಪತ್ಯವನ್ನು ಧಿಕ್ಕರಿಸುತ್ತಾಳೆ. ಆಕೆಯ ಸಂಘರ್ಷವು ದೇಹ ಮತ್ತು ದೇಹಾತೀತ ಅನುಭವದ ತೀವ್ರತೆಯಲ್ಲಿ ವ್ಯಕ್ತಗೊಂಡಿದೆ. ಭಕ್ತಿಪಂಥದ ಶರಣೆಯರು ಎದುರಿಸಿದ ಎರಡು ವಿಶಿಷ್ಟ ಸಮಸ್ಯೆಗಳೆಂದರೆ, 'ಹೆಣ್ಣು ಎಂಬ ದೇಹ' ಮತ್ತು 'ಮದುವೆ' ಎಂಬ ವಿಚಾರಗಳನ್ನು ಪ್ರಶ್ನಿಸುತ್ತಾಳೆ. ಗುಪ್ತಭಕ್ತಿಯು ಸಂಪೂರ್ಣವಾಗಿ ತನು–ಮನದ ಸಮೇತ ಶರಣಾಗತಿಯಾಗಿದ್ದಾಳೆ.

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು

ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು

ಶಯನಕ್ಕೆ ಹಾಳು ದೇಗುಲಗಳುಂಟು

ಅಂಗಶೀತಕ್ಕೆ ಬಿಸುಟ ಅರಿವೆಗಳುಂಟು

ಚೆನ್ನಮಲ್ಲಿಕಾರ್ಜುನಯ್ಯಾ

ಆತ್ಮಸಂಗಾತಕ್ಕೆ ನೀನೆನಗುಂಟು

ಈ ವಚನದಲ್ಲಿ ಅಕ್ಕ ತನ್ನ ಪರದೈವವೆಂದು ನಂಬಿದ್ದ ಚನ್ನಮಲ್ಲಿಕಾರ್ಜುನನ್ನು ಆತ್ಮಸಂಗಾತಿ ಎಂದು ಕರೆದಿದ್ದಾಳೆ. ಭೋಗ, ಸುಖ–ಸಂಪತ್ತಿನ ಕಾಟಗಳಿಂದ ಬಿಡುಗಡೆ ಪಡೆಯಬೇಕು. ಭಕ್ತ – ಭಗವಂತನ ಸಂಬಂಧದ ನಿಲುವು ಇದಾಗಿದೆ. ಕಲ್ಯಾಣಕ್ಕೆ ಒಬ್ಬಳೇ ಹೊರಟಾಗ ಆಕೆಯ ಸ್ನೇಹಿತೆಯರು ಮನಸ್ಸನ್ನು ಪರಿವರ್ತಿಸಲು ಹೋದಾಗ ಅಕ್ಕ ನೀಡುವ ಉತ್ತರವು ಇದಾಗಿದೆ. ಬಾಯಾರಿಕೆ, ಹಸಿವು, ವಸತಿ ಇವುಗಳ ಮೊದಲಾದ ಮೂಲಭೂತ ಸಮಸ್ಯೆಗಳ ಬಗ್ಗೆ ಅಕ್ಕನ ಸರಳ ಉತ್ತರವಾಗಿತ್ತು. ಪ್ರಕೃತಿಯೊಂದಿಗೆ

ಮನುಷ್ಯರು ಹೇಗೆ ಬೆರೆಯಬಹುದು ಎಂದು ತಿಳಿಸಿದ್ದಾಳೆ. ಇದರಿಂದ ಮನಸ್ಸಿನ ದೃಢತೆ ವ್ಯಕ್ತವಾಗುತ್ತದೆ.

ನೆಲದ ಮರೆಯ ನಿಧಾನದಂತೆ

ಫಲದ ಮರೆಯ ರುಚಿಯಂತೆ

ಶಿಲೆಯ ಮರೆಯ ಹೇಮದಂತೆ

ತಿಲದ ಮರೆಯ ತೈಲದಂತೆ

ಮರದ ಮರೆಯ ತೇಜದಂತೆ

ಭಾವದ ಮರೆಯ ಬ್ರಹ್ಮವಾಗಿಪ್ಪ

ಚೆನ್ನಮಲ್ಲಿಕಾರ್ಜುನನ ನಿಲುವನಾರೂ ಅರಿಯಬಾರದು

ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ಇಲ್ಲಿ ಅಮೂರ್ತವಾಗಿಯೂ, ನಿಗೂಢ ಶಕ್ತಿಯಾಗಿಯೂ ಅನುಭವಕ್ಕೆ ಬರುವಂತವನೆಂದು ಇಲ್ಲಿ ಸೂಚಿಸಿದ್ದಾಳೆ. ಮಲ್ಲಿಕಾರ್ಜುನನು ನೆಲದೊಳಗಿನ ಅಮೂಲ್ಯ ನಿಧಿಯಂತೆ ಹಣ್ಣಿನೊಳಗಿನ ಸವಿಯಂತೆ, ಶಿಲೆಯೊಳಗಿನ ಬಂಗಾರದಂತೆ ಎಳ್ಳಿನೊಳಗಿನ ಎಣ್ಣೆಯಂತೆ, ಮರದ ಮರೆಯ ಬೆಳಕಿನಂತೆ ಭಾವದೊಳಗೆ ಅಡಗಿರುವ ಬ್ರಹ್ಮನಾಗಿದ್ದಾನೆ. ಆತನ ನೆಲೆಯನ್ನಾಗಲೀ, ನಿಲುವನ್ನಾಗಲೀ ಅರಿಯುವುದು ಅಸಾಧ್ಯ.

ತೀವ್ರವಾದ ಪುರುಷ ಪ್ರಧಾನ ಸಮಾಜದ ಪ್ರತಿಭಟನೆ ಕಂಡು ಬರುತ್ತದೆ. ಮಹಾದೇವಿ ಮತ್ತು ಚೆನ್ನಮಲ್ಲಿಕಾರ್ಜುನನ ನಡುವಿನ "ಶರಣಸತಿ ಲಿಂಗಪತಿ" ಎಂಬ ಪರಿಕಲ್ಪನೆಯಲ್ಲಿ ಆಧ್ಯಾತ್ಮಿಕ ನಿಲುವಿನೊಂದಿಗೆ ವ್ಯಕ್ತವಾಗುತ್ತದೆ.

'ಬಂಡಾಯ' ಎಂದರೆ ಒಬ್ಬರು ಇನ್ನೊಬ್ಬರನ್ನು ತೆಗಳುವುದಲ್ಲ. ಕ್ರಾಂತಿಯ ಮೂಲಕ ರಕ್ತದ ಕೋಡಿಯನ್ನು ಹರಿಸುವುದಲ್ಲ. ಒಬ್ಬರ ಮೇಲೆ ಒಬ್ಬರು ಮಾಡುವ ಕತ್ತಿವರಸೆಯಲ್ಲ. 'ಬಂಡಾಯವೆಂಬುದು ಒಂದು ಮನೋಧರ್ಮ' ಎಂದು ಒಬ್ಬ ವ್ಯಕ್ತಿಯನ್ನು ಸಾಧಾರಣ ನೆಲೆಗಳಿಂದ ಗೌರವಿಸುತ್ತ ಕೆಟ್ಟ ವಿಚಾರಗಳನ್ನು ತಿದ್ದಿತೀಡುತ್ತಾ ಕೆಟ್ಟದ್ದನ್ನು ತ್ಯಜಿಸುತ್ತಾ ಒಳ್ಳೆಯ ವಿಚಾರಗಳನ್ನು ಗೌರವಿಸುವುದಾಗಿದೆ. ಹೋರಾಟದ ಮೂಲಕ ಸಾಮಾಜಿಕ ನ್ಯಾಯವನ್ನು ಪಡೆಯುವುದು ಇದರ ಮೂಲ ಗುರಿ. ಜಾತಿ, ಕುಲ, ಗೋತ್ರಗಳನ್ನು ಮೀರಿ ನಿಂತನೆಲೆಯೇ ಬಂಡಾಯವಾಗಿದೆ. ಶ್ರಮ ಸಂಸ್ಕೃತಿಯನ್ನು ಸ್ಥಾಪಿಸಲು ಮಾನವನ ಸಂಕಲ್ಪ ಶಕ್ತಿಯನ್ನು ದೃಡವಾಗಿಸಿಕೊಂಡು ಉನ್ನತಿಯ ಕಡೆಗೆ

ಚಲಿಸುವುದನ್ನೇ ದೇವರೆಂದು ನಂಬಿ, ಅದನ್ನು ಗೌರವಿಸುವುದೇ ಬಂಡಾಯದ ಅರ್ಥವಾಗಿದೆ.

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ !

ಗಂಡುಗಂಡಾದೊಡೆ ಹೆಣ್ಣಿನ ಸೂತಕ

ಮನದ ಸೂತಕ ಹಿಂಗಿದೊಡೆ

ತನುವಿನ ಸೂತಕಕ್ಕೆ ತೆಹುಂಟೇ ಅಯ್ಯ?

ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲಾ!

ಎನ್ನದೇವ ಚನ್ನಮಲ್ಲಿಕಾರ್ಜುನಯ್ಯನೆಂಬ

ಗುರುವಂಗೆ ಜಗವೆಲ್ಲಾ ಹೆಣ್ಣು ನೋಡಾ!

ಹೆಣ್ಣು ಋತುಮತಿಯಾದರೆ, ಗಂಡನ್ನು ಗಂಡು ಪ್ರಾಯಕ್ಕೆ ಬರುತ್ತಲೆ ಹೆಣ್ಣನ್ನು ಮೈಲಿಗೆ ಎಂಬಂತೆ ಕಾಣುವ ಪರಿಸ್ಥಿತಿಯನ್ನು ಸಮಾಜ ಸೃಷ್ಟಿಸಿದೆ. ಮನಸ್ಸಿನಲ್ಲಿ ಕಲ್ಮಶ ಕಳೆದ ಬಳಿಕ ಈ ತನುವನ್ನು ಮಡಿವಂತಿಕೆ ಕಾಡದು. ಇದು ಜಗತ್ತಿನ ಜನರಿಗೆ ಅರ್ಥವಾಗದು, ಚೆನ್ನಮಲ್ಲಿಕಾರ್ಜುನನಿಗೆ ಜಗವೆಲ್ಲಾ ಹೆಣ್ಣು ನೋಡಾ ಎಂಬಲ್ಲಿ ಮಹಾದೇವಿ 'ಶರಣಸತಿ ಲಿಂಗಪತಿ' ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾಳೆ.

ಕಳನೇರಿ ಇಳಿವುದು ವೀರಂಗೆ ಮತವಲ್ಲ

ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ

ಮನದೊಡೆಯ ಮನವನಿಂಬುಗೊಂಬನಯ್ಯ

ಏರಲಾಗದು ಶ್ರೀಪರ್ವತವ, ಏರಿ ಇಳಿದೆಡೆ ವ್ರತಕ್ಕೆ ಭಂಗ

ಕಳನೇರಿ ಕೈ ಮರೆದಡೆ ಮಾರಂಕ

ಚೆನ್ನ ಮಲ್ಲಿಕಾರ್ಜುನ ನಿಮ್ಮೈಗಾಣಲಿರಿವನು!

ಯುದ್ಧದ ಮಧ್ಯದಲ್ಲಿ ಹೊರಟುಹೋಗುವುದು ಸೈನಿಕನಿಗೆ ನಾಚಿಕೆಯಾಗಬೇಕು, ಹಾಗೆಯೆ ಶಿವಶರಣರಿಗೆ ಕೈಲಾಸ ಗಿರಿಯನ್ನೇರಿ ಇಷ್ಟ ದೈವವನ್ನು ತಲುಪುವ ಮಾರ್ಗದಲ್ಲಿ ಎಷ್ಟೇ ಕಷ್ಟಗಳುಂಟಾದರೂ ಹಿಮ್ಮೆಟ್ಟಬಾರದು. ರಣರಂಗದಿಂದ ಹಿಂದೆ ಸರಿದ ಯೋಧನನ್ನು ಭಕ್ತಿಯ ಶಿಖರದಲ್ಲಿ ಅರ್ಧಕ್ಕೆ ಹಿಮ್ಮಟ್ಟಿದ ಶರಣನನ್ನು ದೇವರು ಯಾವತ್ತಿಗೂ ಕ್ಷಮಿಸುವುದಿಲ್ಲ.

ಹೆಣ್ಣನ್ನು ಕುರಿತಾಗಿ ಬಸವಣ್ಣ ತಾಳುವ ನಿಲುವುಗಳು ಸಂಪ್ರದಾಯಿಕವಾದ ನಿಟ್ಟಿನಲ್ಲಿದೆ. ವ್ಯವಸ್ಥೆಯ ಸಮಾಜದ ಬಲವಾದ ಕೈಗಳಿಂದ ಬಿಡಿಸಿಕೊಳ್ಳಲಾಗದ ಹೆಣ್ಣು ತನ್ನ ತಾಯ್ತತನಕ್ಕಾಗಿ ಹೋರಾಡಲು ಬಿಡದಿರುವ ವ್ಯವಸ್ಥೆಯನ್ನು ಕುರಿತು ಹೀಗೆ ಹೇಳಿದ್ದಾನೆ.

ಕೂಸುಳ್ಳ ಸೂಳೆ ಧನದಾಸೆಗೊತ್ತೆಯಕೊಂಡಡೆ

ಕೂಸಿಂಗಲ್ಲ, ಬೊಜಗಂಗಿಲ್ಲ

ಕೂಸನೊಮ್ಮೆ ಸಂತೈಸುವಳು

ಭೂಜಗನನೊಮ್ಮೆ ನೆನೆವಳು

ಧನದಾಸೆ ಬಿಡದು ಕೂಡಲ ಸಂಗಮ ದೇವ

ಈ ವಚನದಲ್ಲಿ ವೇಶ್ಯಾವೃತ್ತಿಯನ್ನು ನಂಬಿ ಬದುಕಬೇಕಾದ ಪರಿಸ್ಥಿತಿ ಹೆಣ್ಣಿಗೆ ಮತ್ತೊಂದೆಡೆ ತನ್ನ ಒಡಲ ಕುಡಿ ಸಾಕುವ ಅನಿವಾರ್ಯತೆಯೂ ಒಟ್ಟಿಗೆ ಮಾಡಬೇಕಾದ ಸ್ಥಿತಿಗೆ ಪುರುಷ ಪ್ರಧಾನ ಸಮಾಜವೇ ಕಾರಣವಾಗಿದೆ. ಆದರೂ ಅವಳು ಹಾಗೆ ಇರಬಾರದೆಂದು ಅವಳು ಹೀಗೆ ಇರಬೇಕೆಂದು ಹೇಳುವುದು ಬಸವಣ್ಣನ ನಿಲುವಾಗಿದೆ.

ಹೊನ್ನು ಮಾಯೆಯಂಬರು, ಹೊನ್ನುಮಾಯೆಯಲ್ಲ,

ಹೆಣ್ಣು ಮಾಯೆಯಂಬರು, ಹೆಣ್ಣು ಮಾಯೆಯಲ್ಲ,

ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ,

ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ

ಈ ವಚನದ ವಿನ್ಯಾಸವು ಅನೇಕ ನಂಬಿಕೆಗಳ ಪ್ರಸ್ತಾಪಗಳನ್ನು ಅಲ್ಲಗಳೆಯುವುದಾಗಿದೆ. ವೈದಿಕ ಧರ್ಮದ ನಂಬಿಕೆಗಳನ್ನು ಶರಣರಲ್ಲೂ ಪ್ರಚಲಿತವಾಗಿದ್ದನ್ನು ಅಲ್ಲಗಳೆಯುತ್ತಾನೆ. ಶರಣರೂ ಕೂಡ ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂದು ನಂಬಿದವರು. ಅನೇಕ ವಚನಗಳಲ್ಲಿ ಮನುಷ್ಯನ ಮನಸ್ಸಿನಲ್ಲಿ ಆಗುವ ಚಂಚಲತೆಯ ಸ್ಥಿತಿಯನ್ನು ಕುರಿತು ಹೇಳಿದ್ದಾರೆ.

ಆಯ್ದಕ್ಕಿ ಲಕ್ಕಮ್ಮ :

೧೨ನೇ ಶತಮಾನದ ಸುಪ್ರಸಿದ್ದ ಶರಣ ದಂಪತಿಗಳಾದ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ತ್ರಿವಿಧ ದಾಸೋಹ ತತ್ವದಂತೆ ಬಾಳಿ ಬದುಕಿದವರು, ಕಾಯಕನಿಷ್ಠೆ, ಅಂತರಂಗಶುದ್ದಿಯುಳ್ಳ ಪರಿಪೂರ್ಣ ಭಕ್ತಿಯನ್ನು ಜೀವನದ ಕ್ರಮದಲ್ಲಿ ತೊಡಗಿಸಿಕೊಂಡು ಬಾಳಿದವರು. ಆಯ್ದಕ್ಕಿ ಲಕ್ಕಮ್ಮ ಅತ್ಯಂತ ನೇರದೃಷ್ಟಿಯ ವಚನಕಾರ್ತಿ.

ಇವರ ಜೀವನ ವೃತ್ತಾಂತಗಳು ಸಾಧನೆಗಳು ತುಂಬಾ ಕುತೂಹಲಕಾರಿಯಾಗಿವೆ. ರಾಯಚೂರಿನ ಅಮರೇಶ್ವರ ಇವರ ಸ್ಥಳ. ಅಲ್ಲಿಂದ ಕಲ್ಯಾಣಕ್ಕೆ ಬಂದು ದಾಸೋಹದ ಮೂಲಕ ಜೀವನ ಸಾಗಿಸುತ್ತಾರೆ. ಇವರು ಅಮರೇಶ್ವರದಿಂದ ಕಲ್ಯಾಣಕ್ಕೆ ಬರಲು ಮುಖ್ಯವಾದ ಕಾರಣ ಬಡತನ ಮತ್ತು ಕಲ್ಯಾಣದಲ್ಲಿನ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳು ಇವರ ಬಡತನದ ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಮಾರಯ್ಯನ ವಚನದ ಅಂಕಿತ ಅಮರೇಶ್ವರ ಲಿಂಗವಾದರೆ, ಲಕ್ಕಮ್ಮನ ಅಂಕಿತ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ.

ಇವರು ಕಲ್ಯಾಣದಲ್ಲಿ ಶಿವಭಕ್ತರ ಮನೆಗಳ ಬಳಿಯಲ್ಲಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡಿ ಬದುಕುತ್ತಿದ್ದರು. ತೀರಾ ಬಡತನವಿದ್ದರೂ ಇವರು ಹೆಚ್ಚಿನ ಅಕ್ಕಿಯನ್ನು ಆಯ್ದುಕೊಳ್ಳದೆ ಅವತ್ತಿನ ದಾಸೋಹಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತರುತ್ತಿದ್ದರು. ಇವರ ಬಡತನದ ಬಗ್ಗೆ ಬಸವಣ್ಣನಿಗೆ ತಿಳಿದು ಲಕ್ಕಮ್ಮ ಮಾರಯ್ಯನವರ ಅಕ್ಕಿ ಆಯುವ ಜಾಗದಲ್ಲಿ ಹೆಚ್ಚಾಗಿ ಅಕ್ಕಿಯನ್ನು ಚೆಲ್ಲಿಸುತ್ತಾನೆ. ಇದು ಲಕ್ಕಮ್ಮನಿಗೆ ಅರಿವಾಗಿ ಬಸವಣ್ಣನ ಮಹಾಮನೆಯಲ್ಲಿರುವ ಎಲ್ಲಾ ಶರಣರನ್ನೂ ತಮ್ಮ ಮನೆಗೆ ಊಟಕ್ಕೆ ಬರುವಂತೆ ಗಂಡನಿಗೆ ಹೇಳಿ ಕಳುಹಿಸುತ್ತಾಳೆ. ಅಂದು ಆಯ್ದು ತಂದ ಅಕ್ಕಿಯಿಂದ ಬಗೆಬಗೆಯ ಭಕ್ಷ್ಯ ಭೋಜನವನ್ನು ಮಾಡಿ ದಾಸೋಹ ಮಾಡುತ್ತಾಳೆ. ಇದರಿಂದಾಗಿ ಲಕ್ಕಮ್ಮನ ದಿಟ್ಟತನದ ಬಗ್ಗೆ ತಿಳಿಯಬಹುದು.

ಇವರಿಬ್ಬರ ಮುಕ್ತ ಭಕ್ತಿಯನ್ನು ಇಲ್ಲಿ ಕಾಣಬಹುದಾಗಿದೆ. ಆದರೆ ಲಕ್ಕಮ್ಮ ದಂಪತಿಗಳು ಮನೆಗೆ ಬಂದ ಅತಿಥಿಯನ್ನು ಸತ್ಕರಿಸುವ ಗುಣ ಎದ್ದು ಕಾಣುತ್ತದೆ. ಇವರ ಕಾಯಕ ನಿಷ್ಠೆಯಿಂದ ಎಲ್ಲರಿಗೂ ಮಾದರಿಯಾಗಿದ್ದಾರೆ. ಕಾಯಕದ ಮಹತ್ವವನ್ನು ಅನ್ಯರ ಜೊತೆಗೆ ಸೇರಿ ತನ್ನ ಪತಿಯಾದ ಮಾರಯ್ಯನಿಗೆ ಮನವರಿಕೆ ಮಾಡಿಕೊಡುತ್ತಾಳೆ.

ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ?

ಭಕ್ತರು ಬಡವರೆಂದು ಮತ್ತೊಂದು ಕೊಟ್ಟೆಯೆನೆಂದೆಡೆ

ಮಾರಯ್ಯಪ್ರಿಯ ಅಮರೇಶ್ವರ ಲಿಂಗವು

ಸತ್ತಂದಿಗಲ್ಲದೆ ಬಡತನವಿಲ್ಲ

ಲಕ್ಕಮ್ಮ ಪರಮೇಶ್ವರನನ್ನು ಮೀರಿಸುವವರುಂಟೆ? ಅಂತಹ ಭಕ್ತರಿಗೆ ಯಾವುದೇ ಕಾರಣಕ್ಕೂ ಬಡತನವು ನಮ್ಮ ಹತ್ತಿರ ಸುಳಿಯುವುದಿಲ್ಲವೆಂದು ತಿಳಿಸುತ್ತಾಳೆ. ನೇರ, ದಿಟ್ಟ, ನಿಷ್ಠೂರವಾಗಿ ಮಾತಿನ ವರಸೆಯಲ್ಲೆ 'ಕಾಯಕನಿಷ್ಠೆಯ' ಮಹತ್ವವನ್ನು ತಿಳಿಸುತ್ತಾಳೆ.

ಆಸೆಯೆಂಬುದು ಅರಸಿಂಗಲ್ಲದೆ,

ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಗಲ್ಲದೆ

ಅಜಾತರಿಗುಂಟೆ ಅಯ್ಯಾ?

ಈಸಕ್ಕಿಯಾಸೆ ನಿಮಗೇಕೇ? ಈಶ್ವರನೊಪ್ಪ

ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಲಕ್ಕಮ್ಮ ತನ್ನ ಗಂಡನ ಮೇಲೆ ಕೋಪ ಮಾಡಿಕೊಂಡು ನೀವು ಈ ಪಾಟಿ ಅಕ್ಕಿಯನ್ನು ಹೊತ್ತು ತಂದಿದ್ದೀರಲ್ಲ ಏನೆನ್ನಬೇಕು ನಿಮ್ಮ ಬುದ್ದಿಗೆ? ನೀವು ಮಾಡಿದ್ದು ಸರಿಯೇ ಎಂದು ಪ್ರಶ್ನೆ ಮಾಡುತ್ತಾಳೆ. ಕಾಯಕವನ್ನು ಅಂದಂದಿಗೆ ಬಂದಿದ್ದನ್ನು ಅಂದಂದಿಗೆ ಉಪಯೋಗಿಸಬೇಕು, ನಾಳೆಗೆ ನಾಡಿದೆಗೆಂದು ಹೆಚ್ಚು ಆಸೆ ಇರಬಾರದು. ಇದು ನನಗೆ ಇಷ್ಟವಿಲ್ಲ, ಮೊದಲು ಇದನ್ನು ಹಿಂದಕ್ಕೆ ಸುರಿದು ಬನ್ನಿ ಎಂದ ಲಕ್ಕಮ್ಮ ತನ್ನ ಗಂಡನಾದ ಮಾರಯ್ಯನಿಗೆ ಹೇಳಿದ್ದಾಳೆ. ಇಂತಹ ಆಸೆಯನ್ನು ಶಿವ ಒಪ್ಪುವುದಿಲ್ಲ ಎನ್ನುತ್ತಾಳೆ.

ವಿಮಲಾದೇವಿಯಿಂದ ದಂಪತಿಗಳಿಬ್ಬರೂ ದೀಕ್ಷೆ ತೆಗೆದುಕೊಂಡ ಮೇಲೆ ತ್ರಿವಿಧ ದಾಸೋಹ ಮಾಡುತ್ತಿದ್ದ ಭಕ್ತರಿಬ್ಬರ ಮನದಲ್ಲಿ ಲವಲೇಶವೂ ಬೇಡವಾದ ಹೊಲಸು ವಿಚಾರಗಳಿರಲಿಲ್ಲ. ಅವರು ನಿರ್ಮಲವಾದ ಮನಸ್ಸಿನಿಂದ ಸ್ವಚ್ಛಂದವಾಗಿದ್ದರು. ಆಗಾಗ ದಂಪತಿಗಳು ತಮ್ಮ ಕಾಯಕದ ನಡುವೆ ಅನುಭವ ಮಂಟಪಕ್ಕೆ ಪ್ರವೇಶ ದೊರೆತಿದ್ದರಿಂದ ಹೋಗಿ ಅಲ್ಲಿ ಕುಳಿತು ಗೋಷ್ಠಿಗಳನ್ನು ವೀಕ್ಷಿಸುತ್ತಿದ್ದರು.

ಲಕ್ಕಮ್ಮ ದಂಪತಿಗಳು ಅನುಭವ ಮಂಟಪಕ್ಕೆ ಬಂದು ಕುಳಿತಾಗಲೆಲ್ಲ ಬಸವಣ್ಣನವರ ದೃಷ್ಟಿ ಇವರ ಮೇಲೆ ಬಿದ್ದಿದೆ. ಆದರೆ ಅವರ ಸಾನಿಧ್ಯದ ಅವಕಾಶ ಇವರಿಗೆ ದೊರೆತಿರಲಿಲ್ಲ. ದೋರುಗಾಯಿ ಮಾಗದೆ ಹಣ್ಣಾಗುವುದಿಲ್ಲ ಎನ್ನುವ ಪರಿಜ್ಞಾನವೂ ಅವರಲ್ಲಿತ್ತು. ಅದು ಲಕ್ಕಮ್ಮನಿಗೆ ತಮ್ಮ ಕಾಯಕ ಸಿದ್ಧಾಂತದ ಬಗ್ಗೆ ಅನುಮಾನವಿದ್ದರೆ ಪ್ರತ್ಯಕ್ಷ ಬಂದು ನೋಡಲಿ ಎನ್ನುವ ಆಸೆಯೂ ಇತ್ತು. ಒಂದು ಸಲ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು ಮುಂತಾದ ಅಸಂಖ್ಯಾತ ಶಿವಶರಣರೆಲ್ಲಾ ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮರನ್ನು ದೇವರಿಗೆ ಭಿನ್ನಹ ಮಾಡಿ ಊಟಕ್ಕೆ ಕರೆದುಕೊಂಡು ಬನ್ನಿ ಎಂದಾಗ ಮಾರಯ್ಯ ತಬ್ಬಿಬ್ಬಾಗಿ ಅನಾವಶ್ಯಕ ತೊಂದರೆ ತೆಗೆದುಕೊಳ್ಳುತ್ತಿರುವೆ ಎಂದಾಗ ಲಕ್ಕಮ್ಮ ಮನಸ್ಸು ಸತ್ಯಶುದ್ಧಿಯಿಂದ ಕೂಡಿದ್ದು, ಒಳ್ಳೆಯ ಮನಸ್ಸಿನಿಂದ ಬೇಡಿದ್ದೆ ಆದರೆ ದೊರಕುತ್ತದೆ ಎಂಬ ನಂಬಿಕೆ ಇದೆ ಎಂದು ಅವಳ ಗಂಡನಲ್ಲಿ ಈ ರೀತಿ ಹೇಳುತ್ತಾಳೆ.

ಮನ ಶುದ್ಧವಿಲ್ಲದಂಗೆ ದ್ರವ್ಯದ ಬಡತನವಿಲ್ಲ

ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ

ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು

ಮಾರಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ

ಮನಸ್ಸು ಪರಿಶುದ್ಧವಾಗಿದ್ದರೆ ಸಂಪತ್ತಿಗೆ ಬಡತನ ಬರುವುದಿಲ್ಲ, ಮನಸ್ಸು ಶುದ್ಧವಾಗಿರಬೇಕು. ಅದರಿಂದ ಒಳ್ಳೆಯ ಕೆಲಸಗಳು ನೇರವೇರುತ್ತವೆ. ಎಲ್ಲಾ ಕಡೆ ಒಳ್ಳೆಯ ಭಕ್ತರಿಗೆ ಲಕ್ಷ್ಮೀ ತಾನಾಗಿಯೇ ಒಲಿಯತ್ತಾಳೆ. ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯನ್ನು ಮಾಡುತ್ತ ಆತನ ಪ್ರೀತಿ ಪಾತ್ರಕ್ಕೆ ಒಲಿಯವುದಾಗಿದೆ.

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;

ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;

ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ;

ಧೃಡವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ

ಮಾರಯ್ಯಪ್ರಿಯ ಅಮರೇಶ್ವರಲಿಂಗದ ಮುಟ್ಟದ ಭಕ್ತಿ

ಈ ಪ್ರಸ್ತುತ ವಚನದಲ್ಲಿ ವಿಡಂಬನೆ ಮಾಡುವುದರ ಮೂಲಕ ಧೃಡಭಕ್ತಿಯನ್ನು ಎತ್ತಿ ತೋರಿಸಿದ್ದಾರೆ. ಭಕ್ತಿ ಎಂದಿಗೂ ನಿರಹಂಕಾರವಾದುದಾಗಿದೆ. ಆದರೆ ಅಹಂಕಾರದಿಂದ ಮಾಡುವ ಭಕ್ತಿಯಿಂದ ಹಣ ವ್ಯಯವಾಗುತ್ತದೆ, ವಿನಹ ಇನ್ಯಾವ ಉಪಯೋಗವಿಲ್ಲ ಎಂದಿದ್ದಾರೆ. ಕೆಲವರು ತಮ್ಮ ಬಳಿ ಹಣ ಇದೆಯೆಂದು ನಾನಾರೀತಿಯ ಆಡಂಬರದ ಪೂಜೆಗಳನ್ನು ದೇವಾಲಯದಲ್ಲಿ ಮಾಡಿಸುತ್ತಾರೆ. ಎಲ್ಲರ ಮುಂದೆ ತಾವು ದೈವಭಕ್ತರೆಂದು ಅಹಂಕಾರದಿಂದ ಬೀಗುತ್ತಾರೆ. ಇಂತಹ ಪೂಜಾವಿಧಿಗಳಿಂದ ಹಣ ನಷ್ಟವಾಗುತದೆಯೇ ಹೊರತು ದೇವರನ್ನು ಮೆಚ್ಚಿಸಲಾಗದು. ಅಂತೆಯೇ ನುಡಿದಂತೆ ನಡೆಯದಿದ್ದರೆ ಜ್ಞಾನಕ್ಕೆ ಬೆಲೆಯಿಲ್ಲ. ನಮ್ಮ ಮಾತಿಗೆ ಬೆಲೆ ಸಿಗಬೇಕಾದರೆ ನಾವು ನುಡಿದಂತೆ ನಡೆದುಕೊಂಡಾಗ ಮಾತ್ರ ಬದುಕಿನಲ್ಲಿ ಸಾರ್ಥಕತೆಯಿರುತ್ತದೆ.

ಇವೆಲ್ಲವೂ ಉನ್ನತವಾದ ಆಧ್ಯಾತ್ಮಿಕ ನೆಲೆಯನ್ನು ಒಳಗೊಂಡಿರುತ್ತದೆ. ಇಲ್ಲಿ ಲಕ್ಕಮ್ಮ ಶರಣರು ಕೊಟ್ಟಿರುವ ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವಂತೆ ಮಾಡಿದ್ದಾಳೆ. ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೇ? ಎಂಬ ನಿಶ್ಚಲ ನಿಲುವು; ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ? ಎಂಬ ಅರಿವು 'ಕೂಟಕ್ಕೆ ಸತಿಪತಿ' ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ? ಎಂಬ ಸಮಾತಾಭಾವ, ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೋ? ಬಸವಣ್ಣನ ಅನುಮಾನ ಚಿತ್ತವೋ? ಎಂದು ಬಸವಣ್ಣನ ಒಳ್ಳೆಯತನವನ್ನೇ ಪ್ರಶ್ನಿಸುವ ಕೆಚ್ಚು ಆಯ್ದಿಹೆನೆಂಬ ಕಾಯಕದ ಅರಿಕೆ ಹಿಂಗಿತೆ? ನಾ ಮಾಡಿಹೆನೆಂಬ ತವಕ ಹಿಂಗಿತೇ? ಎಂದು ಆಸೆಬುರುಕ ಗಂಡನನ್ನೇ ನೇರವಾಗಿ ಝುಂಕಿಸಿ ಕೇಳುವಂತಹ ರೋಷ. ಮಾರಯ್ಯಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕರ ನನಗಾರ ಹಂಗಿಲ್ಲ ಎಂಬ ಆತ್ಮ ವಿಶ್ವಾಸ, ಇವು ಲಕ್ಕಮ್ಮನಲ್ಲಿ ಕಾಣುವ ಒಟ್ಟು ಅವಳ ವ್ಯಕ್ತಿತ್ವವಾಗಿದೆ.

ನೀಲಲೋಚನೆ ಮತ್ತು ಗಂಗಾಂಬಿಕೆ :

ಬಸವಣ್ಣನವರ ಇಬ್ಬರು ಹೆಂಡತಿಯರಾದ ಇವರು ವಚನಕಾರ್ತಿಯರು. ಇವರಲ್ಲಿ ನೀಲಲೋಚನೆ ಪ್ರಮುಖ ವಚನಕಾರ್ತಿ. ಇನ್ನೊಬ್ಬಳು ಗಂಗಾಂಬಿಕೆ ಇಬ್ಬರೂ ಸೇರಿ ಬಸವಣ್ಣನ ಮನೆಗೆ ಬಂದು ಹೋಗುತ್ತಿದ್ದ ಅತಿಥಿಗಳನ್ನು ಸತಕ್ಕರಿಸುವ ದೊಡ್ಡ ಜವಾಬ್ದಾರಿಯನ್ನು ಹೊತ್ತ ಈ ಬಸವಣ್ಣನ ಪತ್ನಿಯರ ಕೆಲಸ ಸಾಮಾನ್ಯವಾಗಿರಲಿಲ್ಲ. ನೀಲಲೋಚನೆಯ ವಚನಗಳಲ್ಲಂತೂ ಆಕೆಗೆ ಬಸವಣ್ಣನ ಬಗ್ಗೆ ಅಪಾರವಾದ ಪ್ರೀತಿ, ವಾತ್ಸಲ್ಯ ತುಂಬಿತುಳುಕಿತ್ತು. ಮುಕ್ತಾಯಕ್ಕನಿಗೆ ಅಜಗಣ್ಣನ ಬಗ್ಗೆ ಇದ್ದ ಅಭಿಮಾನ ಇವಳಿಗೆ ಗಂಡನ ಬಗ್ಗೆ ಇರುವ ಅಭಿಮಾನ ಎರಡೂ ಸರಿಸಮ, ಬಸವಣ್ಣನ ಭಕ್ತಿಯ ಪರಾಕಾಷ್ಠೆಯಲ್ಲಿ ವಿಚಿತ್ರವಾಗಿ ನಡೆದುಕೊಳ್ಳುತ್ತಿದ್ದಳು. ಪತಿಯೇ ಪರದೈವವೆಂದು ತಿಳಿದು ಅವರು ಎಲ್ಲವನ್ನೂ ನಗುನಗುತ್ತ ಸಹಿಸಿಕೊಂಡರು. ಒಮ್ಮೊಮ್ಮೆ ತ್ಯಾಗಕ್ಕೂ ಸಿದ್ದರಾಗಿರುತ್ತಿದ್ದರು. 'ಸಂಗಯ್ಯ ಅಥವಾ ಸಂಗಯ್ಯ ಬಸವ' ನೀಲಲೋಚನೆಯ ಅಂಕಿತ ನಾಮವಾಗಿದೆ.

ಬಸವಣ್ಣ ಕಲ್ಯಾಣದಿಂದ ಹೊರಟು ಕೂಡಲ ಸಂಗಮದಲ್ಲಿ ಐಕ್ಯನಾದ ಸುದ್ದಿಕೇಳಿ ದುಃಖಹೊಂದಿ ಆ ಬೇಜಾರಿನಿಂದ ಅವಳ ವಚನಗಳಲ್ಲಿ ಗಂಡನಾದ ಬಸವಣ್ಣನ ಮನಸ್ಸು ತಿಳಿಯುತ್ತದೆ. ಬಸವಣ್ಣ ಮಡಿದ ಜೀವನ ಅವಳಿಗೆ ಅಸಹನೀಯವಾಗಿತ್ತು. 'ಅಟ್ಟ ಅಡವಿಯಲ್ಲಿ ಬಿಟ್ಟು ಹೋದಿರಿ ಬಸವಾ' ಎಂಬುದು ಅವಳ ಅನಾಥತ್ವವನ್ನು ಬಹು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. 'ಎಲೆಯಿಲ್ಲದ ವೃಕ್ಷವಾದ ಬಸವಯ್ಯನು' ಎಂಬ ಮಾತು ಎದೆಯನ್ನು ನಡುಗಿಸುತ್ತದೆ. ಮಹಾವೃಕ್ಷವೆಲ್ಲ ಎಲೆ ತುಂಬಿಕೊಂಡಿರುವಾಗ ಜೀವ ಉಂಟು, ಚಲನೆ ಉಂಟು, ಎಲೆಗಳೆಲ್ಲ ಬಿದ್ದು ಹೋದಾಗ ಇದ್ದಕ್ಕಿದ್ದಂತೆ ಸ್ತಬ್ಧವಾಗುತ್ತದೆ. ಮರ ಸತ್ತಿಲ್ಲ, ಆದರೆ ಬದುಕಿನ ಚಿಹ್ನೆಯೂ ಇಲ್ಲ.

ಮಡದಿಯೆನಲಾಗದು ಬಸವಂಗೆ ಎನ್ನನು,

ಪುರುಷನೆನಲಾಗದು ಬಸವನ ಎನಗೆ

ಉಭಯದ ಕುಳವ ಬಸವಂಗೆ ಹರಿದು ಶಿಶುವಾನಾದೆನು

ಬಸವನೆನ್ನ ಶಿಶುವಾದ

ನೀಲಲೋಚನೆ ಮತ್ತು ಗಂಗಾಂಬಿಕೆ ಇಬ್ಬರಿಗೂ ಮಗುವಿನ ರೀತಿಯಾಗಿದ್ದರು ಬಸವಣ್ಣ. ಒಬ್ಬರು ಇನ್ನೊಬ್ಬರನ್ನು ಹಾಗೆ ನೋಡಿಕೊಂಡರು. ಇಲ್ಲಿ ಗಂಡ ಹೆಂಡತಿಯರ ಆಳವಾದ ಪ್ರೀತಿ ವ್ಯಕ್ತವಾಗಿರುವುದನ್ನು ಸಾಂಸಾರಿಕವಾಗಿ ಒಳಿತನ್ನು ಅವರು ಸರಿಸಮವಾಗಿ ನಡೆದುಕೊಂಡಿರುವುದನ್ನು ಕಾಣಬಹುದು.

ರೆಮ್ಮವ್ವೆ (ಅಕ್ಕಮ್ಮ):

ಕದಿರಿನಿಂದ ನೂಲು ತೆಗೆಯುವ ಕಾಯಕ ಮಾಡುವ ರೆಮ್ಮವ್ವೆ ಸಾಮಾಜಿಕ ಚಳುವಳಿ ಹೊಂದಿದ್ದು ತನ್ನ ಈ ವಚನದಲ್ಲಿ 'ನಾತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣ! ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿದೆ' ಎಂದು ವಿವರಿಸುತ್ತಾಳೆ.

ಅಕ್ಕಮ್ಮನು ಕೂಡ "ವಿಪ್ರ ಮೊದಲು ಅಂತ್ಯಜ ಕೊನೆ" ಎಂಬ ಮಾತನ್ನು ವಿರೋಧಿಸುತ್ತಾಳೆ. ಬೂಟಾಟಿಕೆ ಆಡಂಬರದ ಭಕ್ತರನ್ನು ಈ ಕೆಳಗಿನಂತೆ ಅಲ್ಲಗಳೆಯುತ್ತಾಳೆ. (ಕನ್ನಡ ವಿಶ್ವಕೋಶದಲ್ಲಿರುವಂತೆ ರೆಮ್ಮವ್ವೆಯೇ ಅಕ್ಕಮ್ಮ)

ಬತ್ತಲೆಯಿದ್ದವರೆಲ್ಲ ಕತ್ತೆಯ ಮಕ್ಕಳು

ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು

ತಲೆ ಜಡೆ ಗಟ್ಟಿದವರೆಲ್ಲ ಹೊಲೆಯರ ಸಂತಾನ

ಅವ ಪ್ರಕಾರವಾದಡೇನು? ಅರಿವೆ ಮುಖ್ಯವಯ್ಯ

ಆಚಾರವೇ ಪ್ರಾಣವೆಂದು ವಿವರಿಸುತ್ತಾಳೆ.

ಈ ವಚನದಲ್ಲಿ ಅಕ್ಕಮ್ಮ ಜಾತಿ ಮುಖ್ಯವಲ್ಲ ನಿಜವಾದ ಶರಣರಿಗೆ ಇರಬೇಕಾದದ್ದು, ಅರಿವು ಎಂಬುದನ್ನು ವಿವರಿಸಿದ್ದಾಳೆ. ಆದ್ದರಿಂದ ಶರಣರ ಜಾತಿಯನ್ನು ಹೇಳಿ ನಿಂದಿಸಬಾರದು. ವೇಷ ಹಾಕಿಕೊಂಡ ಮಾತ್ರಕ್ಕೆ ಶ್ರೇಷ್ಠರಾಗುವುದಿಲ್ಲವೆಂದು ಹೇಳಿ ವೇಷ ಹಾಕಿಕೊಂಡ ಜನರನ್ನು ಕಡೆಗಣಿಸುತ್ತಾಳೆ. ಶರಣರಲ್ಲಿ ಕಂಡುಬರುವ ಬಹುಮುಖ್ಯವಾದ ಮೌಲ್ಯವೆಂದರೆ ಸಮಾನತೆ. ಎಲ್ಲಾ ಮಾನವರು ಸಮಾನವೆಂದು ಹೇಳಲಾಗುತ್ತದೆ. ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವುದು ಶರಣರ ಮುಖ್ಯ ಉದ್ದೇಶ. ವರ್ಣ, ಜಾತಿ, ಲಿಂಗಗಳ ನಡುವಣ ವ್ಯತ್ಯಾಸವನ್ನು ತಿಳಿಸಿದ್ದಾನೆ. ಒಂದೇ ಎಂಬ ಮಾತಿನಲ್ಲಿ ಎಲ್ಲಾ ಮನುಷ್ಯರ ಸಮಾನತೆಯನ್ನು ಎತ್ತಿ ತೋರಿಸಿದ್ದಾನೆ. ವ್ಯಕ್ತಿ

ಸಮಾಜದ ಒಂದು ಭಾಗವಾಗಿ ನಿರ್ವಹಿಸುವ ಪಾತ್ರ ಹಾಗೂ ಸಮಾಜದ ವ್ಯಕ್ತಿಗೆ ಒದಗಿಸುವ ಸುಭದ್ರತೆ ಇವುಗಳ ಬಗ್ಗೆ ಶರಣರಿಗೆ ಖಚಿತವಾದ ಕಲ್ಪನೆ ಇರುವುದು ಕಂಡುಬರುತ್ತಿದೆ. ಭಾರತೀಯ ಸಮಾಜವನ್ನು ಬಹುಕಾಲದಿಂದ ತನ್ನ ಹಿಡಿತದಲ್ಲಿ ಕಾಡಿಸುತ್ತಿದ್ದ ಈ ಪದ್ದತಿಯನ್ನು ವಿಫಲಗೊಳಿಸಿದರೂ ಯಾವುದೇ ರೀತಿಯ ಸೊಪ್ಪುಹಾಕದೇ ನುಡಿದಂತೆಯೇ ನಡೆದು ಕ್ರಾಂತಿಯ ಹೋರಾಟ ಮಾಡಿದ್ದಾರೆ.

ವರದಾನಿ ಗುಡ್ಡವ್ವೆ :

ಬಸವಣ್ಣನ ಪೂರ್ವ ಕಾಲದ ಶರಣೆ ಕೆಲವು ಶಾಸನ ಮತ್ತು ಪುರಾಣಗಳಲ್ಲಿ ಈಕೆಯ ಹೆಸರು ದಾಖಲಾಗಿದೆ. ವೀರ ಸ್ತ್ರೀ ಪವಾಡ ಪುರುಷಳಾಗಿರುವ ಈಕೆಯು ಅಸ್ಪೃಶ್ಯ ಜನಾಂಗದವಳು. "ಶರಣರ ಸಂಘಟನೆ ಮಾಡಿ ಶರಣ ಧರ್ಮದ ವಿರೋಧಿಗಳೊಡನೆ ಹೋರಾಡಿ ಶರಣ ಧರ್ಮವನ್ನು ಪುನರ್ ಸ್ಥಾಪಿಸಿದ ದಿಟ್ಟ ಮಹಿಳೆ" ಎಂದು ಕ್ರಿ.ಶ. ೧೧೮೪ ರಲ್ಲಿ ರಚಿತವಾಗಿರುವ ತಾಳೀಕೋಟೆ ಶಾಸನದಲ್ಲಿ ತಿಳಿಸಲಾಗಿದೆ. ಗುಡ್ಡವ್ವೆಯು ಮಾವದಿಗೆ ಗ್ರಾಮದವಳಾದ ಈಕೆ ಬ್ರಾಹ್ಮಣರ ಅಗ್ರಹಾರದ ಮೂಲಕ ಹೋಗುತ್ತಿರುವಾಗ ಬ್ರಾಹ್ಮಣನು ನಿಂದಿಸತ್ತಾನೆ. ಆಗ ಅವಮಾನಿತಳಾಗಿ ತನಗಾದ ಅವಮಾನಕ್ಕೆ ಪ್ರತೀಕಾರವಾಗಿ ಕೆಟ್ಟ ಬ್ರಾಹ್ಮಣರನ್ನು ಶಪಿಸುತ್ತ ಶಿವನನ್ನು ಏಕರೂಪ ಮನಸ್ಥಿತಿಯಿಂದ ಸ್ಮರಿಸಿ ಶಿವನಕೃಪೆಗೆ ಪಾತ್ರಳಾಗುವುದರ ಮೂಲಕ ಬದುಕಿನ ಸಾಕ್ಷಾತ್ಕಾರವನ್ನು ಕಂಡುಕೊಂಡಳೆಂಬ ಪ್ರಸಂಗವು ಭೀಮಕವಿಯಿಂದ ರಚಿತವಾದ 'ಬಸವಪುರಾಣ'ದಲ್ಲಿ ಬಂದಿದೆ. ಭಾರತೀಯ ಬಹುಮುಖೀ ಸಂಸ್ಕೃತಿಯ ವ್ಯವಸ್ಥೆಯಲ್ಲಿ ಸಾಮಾಜಿಕ ಬಂಧನಗಳ ವಿಮೋಚನೆ ಮತ್ತು ಸಾಹಿತ್ಯಕವಾಗಿ ತನ್ನ ಮಹತ್ವವನ್ನು ಶರಣ ಸಾಹಿತ್ಯ ಕಾಪಾಡಿಕೊಂಡು ಬಂದಿರುವುದು ಗಮನಾರ್ಹವಾಗಿದೆ.

ತನು ಬೆತ್ತಲೆಯಾದಡೇನು, ಮನ ಬೆತ್ತಲೆಯಾಗದನ್ನಕ್ಕೆ?

ವ್ರತವಿದ್ದಡೇನು, ವ್ರತಹೀನನಾದ ಬಳಿಕ?

ನೆರೆದಡೆ ನರಕವಯ್ಯ ನಿಂಬೇಶ್ವರ

'ನಿಂಬೇಶ್ವರ' ಅಂಕಿತದಿಂದ ಕೂಡಿದ ಈ ವಚನದಲ್ಲಿ ತನು-ಮನ ಶುದ್ಧಿ ರಹಿತ ಭಕ್ತಿಯನ್ನು ಮತ್ತು ಮೇಲ್ಜಾತಿ ವರ್ಗದವರನ್ನು ತರಾಟೆಗೆ ತೆಗೆದುಕೊಂಡಿರುವುದು ವ್ಯಕ್ತವಾಗುತ್ತದೆ. "ಮೈಗೆಟ್ಟ ಹೊಲತಿ ದೂರ ಹೋಗು" ಎಂಬ ಜಾತಿ ನಿಂದನೆಗೆ ಒಳಗಾದ ಗುಡ್ಡವ್ವೆಯಲ್ಲಿ ವ್ಯಕ್ತವಾಗಿರುವ ಅಸ್ಪೃಶ್ಯ ವಿರೋಧಿ ಧೋರಣೆ ಇಡೀ ಮಾನವಕುಲಕ್ಕೆ ಪ್ರಮುಖ ಪ್ರಶ್ನೆಯಾಗಿ ಉಳಿದುಕೊಂಡಿದೆ. ಜಾತಿ, ಕುಲ ಹಾಗೂ ಗೋತ್ರಗಳನ್ನು ಕುರಿತು ಈ ಪ್ರತಿಭಟನೆ ಆ ಕಾಲಧರ್ಮಕ್ಕೆ ಅಸಾಮಾನ್ಯವಾದ ವಿಚಾರವಾಗಿದೆ.

ಸತ್ಯಕ್ಕ :

ಈಕೆಯ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಹಿರೇಜಂಬೂರು. ಕೇವಲ ಶಿವಭಕ್ತರ ಮನೆಯ ಕಸ ಗುಡಿಸುವ ಕಾಯಕವನ್ನು ಶಿವನೇಮದ ಮಹತ್ವದ ಕಾಯಕವೆಂದು ಈಕೆ ಪರಿಗಣಿಸಿದ್ದಾಳೆ. ಜನಪದ ಸಾಹಿತ್ಯದ ಗರತಿಯ ಹಾಡುಗಳಲ್ಲಿ ಸತ್ಯಕ್ಕನ 'ಶರಣೆ ಜೀವನ' ಅಭಿವ್ಯಕ್ತವಾಗಿದೆ. ಅವರಿವರ ಮನೆಯ ಬಾಗಿಲ ಕಸ ಗುಡಿಸಿ ತಂದ ಹಣವನ್ನು ಶರಣರ ದಾಸೋಹಕ್ಕಾಗಿ ವಿನಿಯೋಗಿಸಿ 'ಕಾಯಕವೇ ಕೈಲಾಸ' ಎಂಬ ಬಸವಣ್ಣನವರ ವಚನದ ತಾತ್ವಿಕ ನಲವಿನೊಂದಿಗೆ ಸತ್ಯಕ್ಕನ ವ್ಯಕ್ತಿತ್ವವು ನಮಗೆ ಅರಿವಾಗುತ್ತದೆ. ಆಕೆಯ ನಿಜ ಜೀವನದಲ್ಲೂ ಅಚಲನಿಷ್ಠೆ ಮತ್ತು ಅಪಾರ ಭಕ್ತಿಗೆ ಹೆಸರಾದವಳು.

ಅರ್ಚನೆ ಪೂಜನೆ ನೇಮವಲ್ಲ;

ಮಂತ್ರ ತಂತ್ರ ನೇಮವಲ್ಲ;

ಧೂಪ ದೀಪಾರತಿ ನೇಮವಲ್ಲ

ಪರಧನ ಪರಸ್ತ್ರೀ ಪರದೈವಂಗಳಿಗೆರದಿಪ್ಪುವೆ ನೇಮ

ಶಂಭುಜಕ್ಕೇಶ್ವರನಲ್ಲಿ ಇವು ಕಾಣೆರಣ್ಣಾ ನಿತ್ಯನೇಮ

ಈಕೆಯ ವಚನದಲ್ಲಿ ಸತ್ಯಕ್ಕ ಸರಳವಾಗಿ ಬದುಕಿನ ಸಾಕ್ಷಾತ್ಕಾರವನ್ನು ದೈನಂದಿನ ನಿಯಮ, ನಿಷ್ಠೆ, ಮತ್ತು ಗುರಿಗಳನ್ನು ಮುಟ್ಟಲು ಅರ್ಚನೆ, ಪೂಜೆ, ಮಂತ್ರ, ದೂಪ ದೀಪಾರತಿ ಮೊದಲಾದ ಅರ್ಚನೆಯ ವಿಧಾನಗಳು ಜೀವನದ ನಿತ್ಯನೇಮಗಳಲ್ಲ. ಪರಧನ, ಪರಸ್ತ್ರೀ, ಮತ್ತು ಪರದೈವಗಳಿಗೆ ಎರಗದೆ ಇರುವುದೇ ನಿಯಮ, ಈ ನಿಯಮಗಳನ್ನು ಆಯಾ ಭಕ್ತರು ಕಂಡರಿಸಿದ ದೈವದ ನೆಲೆಗಳಲ್ಲಿ ಭರಿಸಿಕೊಳ್ಳಬೇಕೆಂಬ ಅಚಲವಾದ ನಿಷ್ಠೆಯನ್ನು ಹೊಂದಿರಬೇಕು. ಮನುಷ್ಯ ನೀತಿನಿಯಮಗಳನ್ನು ಅಳವಡಿಸಿಕೊಳ್ಳಬೇಕಾದ ಬದುಕಿನ ಮೂಲಭೂತ ವ್ಯವಸ್ಥೆಯನ್ನು ಸರಳವಾಗಿ ಹೇಳುವುದರೊಂದಿಗೆ ಆಚಾರ-ವಿಚಾರಗಳು ಶುದ್ಧವಾಗಿಲ್ಲದ ಪೂಜೆ,ದೀಪ, ಆರತಿಗಳನ್ನು ತಾತ್ವಿಕವಾಗಿ ಪ್ರತಿಭಟಿಸುವ ಧ್ವನಿ ಕಂಡುಬರುತ್ತಿದೆ.

ವೈದಿಕ ಸಮಾಜದಲ್ಲಿದ್ದ ಅನೇಕ ರೀತಿಯ ಕಟ್ಟು ಪಾಡುಗಳನ್ನು ವಿರೋಧಿಸುತ್ತ ಶಿವಶರಣರು ತಮ್ಮ ನೆಲೆಯನ್ನು ಕಂಡುಕೊಳ್ಳತೊಡಗಿದರು. ಸ್ವಚ್ಛ ಸಮಾಜ ನಿರ್ಮಾಣ ಮಾಡುತ್ತ ಶಾಂತಿಯ ಮಂತ್ರವನ್ನು ಬಿತ್ತಿದವರು. ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ಮಾಡಿದ ಪ್ರಯತ್ನಗಳೆಲ್ಲ ಈ ಶಿವಶರಣೆಯರ ವಚನಗಳಿಂದ

ವ್ಯಕ್ತವಾಗುವ ಬಹುದೊಡ್ಡ ಬಂಡಾಯವಾಗಿದ್ದು, ಈ ಎಲ್ಲಾ ಜೀವನದ ನೇರ–ನಡೆ–ನುಡಿಗಳಿಂದ ಕೂಡಿದ ಬದುಕಿನ ಸಮರ್ಪಣಾ ಮನೋಭಾವದಿಂದ ಕೂಡಿದೆ. ಹೆಣ್ಣಿಗೂ ಆಧ್ಯಾತ್ಮದ ಕಡೆ ಒಲವು ಮೂಡಿದ್ದು ಪುರುಷರಿಗಿಂತ ತಾವು ಯಾವುದರಲ್ಲೂ ಕಡಿಮೆಯಿಲ್ಲವೆಂದು ತಿಳಿಸಿದ್ದಾಳೆ. ವಿದ್ಯೆ ಇಲ್ಲದವರೂ ವ್ಯಕ್ತಿತ್ವದ ಮೂಲಕ ತಮ್ಮತನವನ್ನು ತೋರಿಸಿ ಹೋಗಿದ್ದಾರೆ. ಇದರಿಂದ ಪ್ರಸ್ತುತ ಕಾಲದಲ್ಲೂ ಆದುನಿಕ ಮಹಿಳೆಯರಿಗೆ ಹೊಸ ಹುರುಪನ್ನು ತುಂಬುತ್ತ ಪ್ರತಿಯೊಂದು ಕ್ಷೇತ್ರದಲ್ಲೂ, ಮುನ್ನುಗ್ಗುವಂತೆ ಪ್ರೇರಣೆ ನೀಡಿದ್ದಾರೆ. ಜೊತೆಗೆ ಸಂಸಾರದ ಜವಾಬ್ದಾರಿಯನ್ನೂ ಅಚ್ಚುಕಟ್ಟಾಗಿ 'ನೊಗ ಕಟ್ಟಿ ಎತ್ತುಗಳಿಂದ ಭೂಮಿಯನ್ನ ಉತ್ತಿ ಹಸನು ಮಾಡಿ ಬೆಳೆ ಬಿತ್ತಿ ಸರಿಯಾದ ಸಮಯಕ್ಕೆ ಮಳೆ ಬಂದು ಬೆಳೆ ನೀಡಿದಾಗ ಒದಗುವ ಸಂತೋಷಕ್ಕೆ ಪಾರವೇ ಇಲ್ಲ'. ತಾವೇ ಸ್ವತಃ ಆ ಸುಖ–ಸಂತೋಷವನ್ನು ತಾವೇ ಅನುಭವಿಸುವಂತಾಗುತ್ತದೆ. ವಚನಗಳ ಸಾಹಿತ್ಯವೆಂಬುದು ಮನಸ್ಸಿನ ಒಳಗೇ ನಾಟಿ ಹೃದಯದ ಆಳವನ್ನು ಒಕ್ಕಿ ನಮ್ಮ ಮನಸ್ಸೆಂಬ ಗರ್ಭಗುಡಿಯನ್ನು ಸೇರಿದಾಗ ಮತ್ತೆ ಯಾವುದೇ ಆಸೆಗೆ ಬಲಿಯಾಗುವುದಿಲ್ಲ.

ವ್ಯಕ್ತಿತ್ವ ವಿಕಸನ:

ವ್ಯಕ್ತಿ ಶುದ್ಧನಾಗದೆ ಸಮಾಜ ಶುದ್ಧವಾಗದು ಎಂದು ನಂಬಿದ್ದ ಶರಣರು ಅಂತರಂಗ–ಬಹಿರಂಗ ಶುದ್ಧಿಯನ್ನೇ ತಮ್ಮ ಧರ್ಮದ ಜೀವಾಳ ಮಾಡಿಕೊಂಡರು. ಅಂತೆಯೇ ವಚನಕಾರರು ರಚಿಸಿದ ಸಾಹಿತ್ಯ ಒಂದು ಧರ್ಮದ ಸಾಹಿತ್ಯವಾಗದೆ ಇಡೀ ಮನಕುಲವೇ ಉದ್ಧರಿಸುವ ಕೆಲಸ ನಡೆದಿದ್ದು ಅಂದಿನ ೧೨ನೇ ಶತಮಾನದ ವಚನಕಾರರು ರಚಿಸಿದ ಸಾಹಿತ್ಯದಿಂದ ನಮಗೆಲ್ಲ ಆ ವಚನಗಳ ಅಗಾದವಾದ ಸಾಹಿತ್ಯ ನಮಗೆ ಅರಿವಾಗುವುದು. ವಚನಕಾರರ ವ್ಯಕ್ತಿತ್ವದ ಹಾಗೂ ರಚನೆಯ ಪ್ರಭಾವ ಮುಂದಿನ ಅನೇಕ ಕವಿಗಳಲ್ಲಿ ಸಾಹಿತ್ಯ ಧೋರಣೆಯ ಮತ್ತು ರಚನೆಯ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಆಗದಿದ್ದರೂ, ವಚನಕಾರರ ವ್ಯಕ್ತಿತ್ವದ ಮಹತ್ತಿಗೆ ಬೆಲೆ ಕೊಟ್ಟಂತೆ ಅನ್ನಿಸುತ್ತದೆ. ಆದರೆ ವಚನಕಾರರಿಂದ ಸಾಹಿತ್ಯಕ್ಕೆ ಏನು ಲಾಭವಾಯಿತೆಂದು ಹೇಳುವುದಾದರೆ ಆಧುನಿಕ ಕಾಲಘಟ್ಟದಲ್ಲಿ ವಚನಗಳನ್ನು ಸಾಹಿತ್ಯವೆಂದು ಪರಿಗಣಿಸುವ, ಚರ್ಚಿಸುವ, ಬೆಲೆಕಟ್ಟುವ ದೃಷ್ಟಿ ಬೆಳೆಸಿಕೊಂಡಿದ್ದು ಆಧುನಿಕ ಕಾಲದಲ್ಲಿಯೇ ಎನ್ನಬಹುದು.

ದಲಿತರು, ಶೋಷಿತರು, ಕೆಳವರ್ಗದವರು, ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು, ಇದೇ ಸಂದರ್ಭದಲ್ಲಿ, ರಾಜಾಶ್ರಯದಿಂದ ದೂರವಾಗಿ ಅರಮನೆಗಳನ್ನು ತ್ಯಜಿಸಿ, ಪಂಡಿತರ ಕಪಿಮುಷ್ಠಿಯಿಂದ ಪಾರಾಗಿ ಬಂದು ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿ ನಿಟ್ಟುಸಿರು ಬಿಟ್ಟಿದ್ದು ಈ ನೆಲದಲ್ಲೆ. ಹೊಸ ಕ್ರಾಂತಿಯನ್ನು ಎಬ್ಬಿಸಿ ಜಾತಿ–ಮತ–ಪಂಥಗಳನ್ನು ಬಿಟ್ಟು, ದೇಶ–ಭಾಷೆ–ವಯಸ್ಸಿನ ಅಂತರವನ್ನು ಮರೆತು,

ಬಡವ-ಬಲ್ಲಿದ, ಮೇಲು-ಕೀಳು, ಎಂಬ ತಾರತಮ್ಯವನ್ನು ಅಳಿದು ಸಾಮಾನ್ಯ ಜನತೆ ಮೊದಲ ಬಾರಿಗೆ ತಮ್ಮನ್ನು ತಾವು ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದು, ಸರ್ವಕಾಲಿಕ ಮಹತ್ವವನ್ನು ಮೌಲ್ಯಯುತವಾಗಿ ನೀಡಿದ್ದು, ವಚನಸಾಹಿತ್ಯದಲ್ಲಿ ಗಮನಿಸಬಹುದು. ಪಂಡಿತರು ಬರೆದಿದ್ದು ಸಂಸ್ಕೃತವಾದ್ದರಿಂದ ಅವನ್ನು ನಿರಾಕರಿಸಿದರು. ಸರಳವಾಗಿ ಯಾವುದೇ ಮೌಢ್ಯಗಳನ್ನು ಬಿತ್ತದೆ ಮಹತ್ವಯುತ ಮೌಲ್ಯದ ಸಾಹಿತ್ಯವನ್ನು ಕೊಟ್ಟಿದ್ದು ಮುಖ್ಯವಾಗಿ ಗಮನಿಸಬೇಕಾದ ಸಂಗತಿಯಾಗಿದೆ.

ರಾಜಾಶ್ರಯದಿಂದ ಹೊರಬಂದ ಮೇಲೆ ಮೊದಲಿನ ಸಾಹಿತ್ಯಕ್ಕಿಂತ ಭಿನ್ನವಾಗಿ ಸಾಮಾನ್ಯನ ನೋವು-ನಲಿವುಗಳಿಗೆ ನಾಲಿಗೆಯಾದದ್ದು ವಚನಸಾಹಿತ್ಯ. ದುಡಿಯುವ ವರ್ಗದ ಜನರ ಮೊದಲ ಧ್ವನಿಯಾಗಿ ಮಾಡಿದ್ದು ವಚನಸಾಹಿತ್ಯದ ಜನಪರ ನಿಲುವನ್ನು ಸ್ಪಷ್ಟಪಡಿಸುತ್ತದೆ. ವಚನಕಾರರು ತಮ್ಮ ಹೋರಾಟ ಆರಂಭಿಸಿದ್ದು, ಧರ್ಮ-ದೇವರುಗಳನ್ನು ಪ್ರಶ್ನಿಸುತ್ತ ದೇಹವನ್ನೇ ದೇವಾಲಯ ಮಾಡಿಕೊಂಡವರು ಧರ್ಮಪ್ರಚಾರಕ್ಕಾಗಿ ಅವರು ಸಾಹಿತ್ಯವನ್ನು ಬಳಸಿಕೊಂಡರೇ ಹೊರತು, ಸಾಹಿತ್ಯದ ಪ್ರಚಾರಕ್ಕಾಗಿ ಧರ್ಮದ ಆಸರೆ ನಿರಾಕರಿಸಿದವರು. ತಳ ಸಮುದಾಯದವರು ಇಷ್ಟು ವರ್ಷಗಳ ಕಾಲ ಬಾಯಿ ಮುಚ್ಚಿಕೊಂಡು ಬದುಕಿದ್ದ ಜನತೆಯಲ್ಲಿ ಜಾಗೃತಿಯನ್ನು ಮೂಡಿಸುತ್ತ, ಜನರು ಸತ್ಯ ಮಾರ್ಗವನ್ನು ಅನುಸರಿಸಿದರು. ಸಾಮಾಜಿಕ ಸಮಸ್ಯೆಗಳಲ್ಲಿ ಕೈಹಾಕುತ್ತ ಜಾತಿ-ಭೇದವನ್ನು ಹೊಡೆದೋಡಿಸಲು ಪ್ರಯತ್ನಿಸಿದರು. ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ವಾಕ್‌ಸ್ವಾತಂತ್ರ್ಯ ಪಡೆಯಲು ಕಾರಣಕರ್ತರಾದರು. ಸಾಮಾಜಿಕ ಸಂಸ್ಥೆಗಳನ್ನು ಎಲ್ಲರಿಗೂ ಸವಾಲು ಹಾಕುತ್ತ ದೇವಾಲಯಗಳನ್ನು ದೇವರುಗಳನ್ನು ಬಯಲಲ್ಲಿ ಬಯಲಾಗಿಸಿದವರು. "ಉಳ್ಳವರು ಶಿವಾಲಯ ಮಾಡುವರು ನಾನೇನು ಮಾಡಲಿ ಬಡವನಯ್ಯ" ಎಂಬ ಕೀಳರಿಮೆಯ ಭಾವ ತಾಳಿ ಉಳ್ಳವರು ಬಡವರ ಅಂತರವನ್ನು ಕಡಿಮೆ ಮಾಡುವತ್ತ ದೃಷ್ಟಿ ಹಾಯಿಸಿದರು. ಉಳ್ಳವರನ್ನು ಎದುರು ಹಾಕಿಕೊಳ್ಳದೇ ಇದ್ದ ಪರಿಸರದಲ್ಲಿಯೇ ಸುಧಾರಣೆ ತರಲು ಪ್ರಯತ್ನಿಸಿದರು.

ಅಂತರಂಗ - ಬಹಿರಂಗವಾಗಿ ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳುತ್ತ ಅಂತರಂಗ ಸುಧಾರಣೆ ಕಾಣದಿದ್ದಾಗ, ತಮ್ಮ ದೇಹವನ್ನು ದೇಗುಲವನ್ನಾಗಿ ಮಾಡಿಕೊಂಡು ತೃಪ್ತಿ ಪಟ್ಟುಕೊಂಡರು. ಧರ್ಮದ ಚೌಕಟ್ಟಿನಲ್ಲಿ ಸಿಕ್ಕಿ ತೊಳಲಾಡುವವರನ್ನು ಧರ್ಮದ ಸಂಕೋಲೆಗಳಿಂದ ಮುಕ್ತಿ ಪಡೆಯುವಂತೆ ಮಾಡಿ ಕೊನೆಗೆ ಕೂಡಲಸಂಗನೂ, ಗುಹೇಶ್ವರನೂ, ಚೆನ್ನಮಲ್ಲಿಕಾರ್ಜುನನೂ, ಇನ್ನಾವುದೋ ತಮ್ಮ ಇಷ್ಟದೈವದ ಮೇಲೆ ಕೈಹಾಕಿ ಮುಗಿದು, ತಮ್ಮ ತಮ್ಮ ವೃತ್ತಿ ಅನುಸಾರ ಕಾಯಕದಲ್ಲಿ ಮುಳುಗಿ ದಾಸೋಹ, ಸಹಪಂಕ್ತಿಭೋಜನ, ಅಂತರ್ಜಾತಿ ವಿವಾಹ, ಕಾಯಕವೇ ಕೈಲಾಸ, ಮುಂತಾದವುಗಳಿಗೆ ಅನುಭವ ಮಂಟಪದಲ್ಲಿ ಸೇರಿದ್ದ ಎಲ್ಲಾ ಶರಣರಿಗೂ ಮಾನವೀಯ ಮೌಲ್ಯಗಳು ಎಲ್ಲಾ ಕಡೆ ತರುವಂತೆ, ಶಾಂತಿ ಮಂತ್ರಗಳನ್ನು ಜಪಿಸುವಂತೆ ಪ್ರೇರಣೆ ನೀಡುತ್ತ ನುಡಿದಂತೆ

ನಡೆದವರು. ಎಲ್ಲಾ ದೇವಮಾನವರು ಇದೇ ಉಪದೇಶ ಬೇರೆ ಬೇರೆ ಭಾಷೆಗಳಲ್ಲಿ ಈ ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ್ದಾರೆ. **ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್, ಕುವೆಂಪು** ಮುಂತಾದವರು ಕಾಲಕ್ಕೆ ತಕ್ಕ ಹಾಗೆ ವೈಚಾರಿಕ ತತ್ವಗಳ ಉಪದೇಶಗಳನ್ನು ನೀಡಿದ್ದಾರೆ. ಆದರೆ ೧೨ನೇ ಶತಮಾನದಲ್ಲಿ ಎಲ್ಲಾ ಶರಣರ ಮಾತುಗಳೇ ವೇದವಾಕ್ಯಗಳಂತೆ ಅದಕ್ಕೆ 'ಜೇಡರ ದಾಸಿಮಯ್ಯ' ತನ್ನ ವಚನಗಳಲ್ಲಿ ಶರಣರನ್ನು ಹಾಡಿ ಹೊಗಳಿದ್ದಾನೆ.

ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ!

ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ!

ನಿಮ್ಮ ಶರಣರ ಸೂಳ್ನುಡಿಯ ನೊಂದರಗಳಿಗೆಯಿತ್ತಡೆ

ನಿಮ್ಮನಿತ್ತೆ ಕಾಣಾ ರಾಮನಾಥ

ವೈದಿಕವರ್ಗ, ರಾಜಕೀಯದ ಬೆಂಬಲದಿಂದ ರಾಜನನ್ನು ತಮ್ಮ ಬುದ್ಧಿವಂತಿಕೆಯ ಬುಗುರಿಯಂತೆ ತಿರುಗಿಸುತ್ತ ತಮಗೆ ಬೇಕಾದ ಹಾಗೆ ಪಳಗಿಸಿಕೊಂಡಿದ್ದರು. ರಾಜನನ್ನು ಇಲ್ಲಿ ಕೇವಲ ಮೇಲುವರ್ಗದವರು ಸುಳಿಯಲ್ಲಿ ಸಿಲುಕಿ, ಅವರನ್ನು ಬಿಟ್ಟುಕೊಡಲಾಗದೆ ಬೇಕಾದ ಹಾಗೆ ರಾಜಕೀಯದಲ್ಲಿ ಸಾಮಾನ್ಯ ಜನತೆಯನ್ನು ತನ್ನ ಇಷ್ಟಕ್ಕೆ ಬಂದಂತೆ ದುಡಿಸಿಕೊಳ್ಳುತ್ತಿದ್ದರು. ಅರಾಜಕತೆ ಎಲ್ಲಾ ಕಡೆ ತಾಂಡವವಾಡುತ್ತಿತ್ತು. ಇದರಿಂದ ತಮಗೆ ಯಾವಾಗ ಮುಕ್ತಿ ದೊರೆಯುವುದೆಂದು ಕಾದು ಕುಳಿತದ್ದ ಜನತೆಗೆ ದಾರಿದೀಪವಾಗಿ ಸರಳವಾದ ಭಾಷೆಯಲ್ಲಿ ತಿದ್ದಿ ತೀಡಿ ಹೊಸ ಹುಟ್ಟಿಗೆ ನಾಂದಿ ಹಾಡಿದವರು ಬಸವಣ್ಣ. ಆತನ ಶರಣರ ತತ್ವ ಭೋಧನೆಗಳು ಸರಳ ವಾಕ್ಯಗಳಲ್ಲಿ ಎತ್ತಿ ಹಿಡಿದರು. "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದೆಡೆ ನರಕ" ಇಂತಹ ನುಡಿಮುತ್ತುಗಳೊಂದಿಗೆ ಜನಸಮುದಾಯದಲ್ಲಿ ಬೇರೂರಿದ್ದ, ಮೌಢ್ಯತೆಯನ್ನು ದೂರ ಸರಿಸಿದರು. ಶರಣರು ದೇವರು ಮತ್ತು ಧರ್ಮಗಳ ವ್ಯಾಖ್ಯೆಗಳನ್ನು ಬುಡಮೇಲು ಮಾಡಿ ಶರಣರು ಹೇಳುವಂತೆ ಧರ್ಮ-ದಯೆಯಾಯಿತು, ಕರ್ಮ-ಕ್ರಿಯೆಯಾಯಿತು, ದಯೆಯೇ ಧರ್ಮದ ಮೂಲವಾಯಿತು.

ಜ್ಞಾನದ ಬಲದಿಂದ ಪ್ರಶ್ನೆಗಳು ಸಂಘರ್ಷದಲ್ಲಿ ಸಂದೇಹಗಳ ತಾಕಲಾಟದಲ್ಲಿ ಹೊಸ ವಿಚಾರ ಜನ್ಮ ತಾಳುತ್ತದೆ. ಇಂತಹ ಚರ್ಚೆಗಳ ಸಮಯದಲ್ಲಿ ವೈಚಾರಿಕತೆಯೂ ಬೆಳೆಯುತ್ತ ಸಾಗುತ್ತದೆ. ಅಂದಂದಿನ ಸಮಾಜದ ವ್ಯವಸ್ಥೆಗಳಲ್ಲಿನ ಮೌಲ್ಯಗಳನ್ನು ಪ್ರಶ್ನಿಸುವುದರ ಮೂಲಕ ಹೊಸ ಆಲೋಚನೆಗಳು ಹುಟ್ಟುತ್ತ ಜ್ಞಾನವು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮುಂದುವರಿಯುತ್ತದೆ. ಜನಪರವಾಗಿ

ಆಲೋಚಿಸುತ್ತಾ ಸಾಗುವುದೇ ನಿಜವಾದ ವೈಚಾರಿಕತೆ, ಇದರಿಂದ ಅಂದಂದಿನ ಸಮಾಜದ ಜನ ಸಮುದಾಯದ ಆರೋಗ್ಯಕರ ಬೆಳವಣಿಗೆಗೆ ಸಹಾಯಕವಾಗುತ್ತದೆ. ೧೨ನೇ ಶತಮಾನವನ್ನು "ಜನತೆಯ ಮೋಕ್ಷಯುಗ" ವೆಂದು ಕರೆಯಬಹುದು.

ತುಕ್ಕು ಹಿಡಿದ್ದಿದ್ದ ಸಮಾಜವನ್ನು ಬದಲಾಯಿಸುವ ಮುಂಚಿತವಾಗಿ ಮನುಷ್ಯನ ವಿಚಾರಗಳನ್ನು ಬೆಳೆಸದೇ ಆತನ ಶೋಷಿತ ಬದುಕನ್ನು ಬದಲಾಯಿಸಲು ಆಗುವುದಿಲ್ಲವೆಂದು ಅರಿತು ನಿಜವಾದ ಕ್ರಾಂತಿಯನ್ನು ಪ್ರಾರಂಭಿಸಿ ವೈಚಾರಿಕತೆಗೆ ಎಡೆ ಮಾಡಿಕೊಟ್ಟರು. ಈ ರೀತಿಯ ಮನಸ್ಸುಗಳನ್ನು ಕಟ್ಟುವ ಕೆಲಸವನ್ನು ಕನ್ನಡ ವಚನ ಸಾಹಿತ್ಯದಲ್ಲಿ ಹುಟ್ಟಿ ಹಾಕಿದ್ದು ನಮ್ಮೆಲ್ಲರ ಭಾಗ್ಯವೆಂದು ತಿಳಿಯಬೇಕು. ಅದರಲ್ಲೂ ಅದನ್ನು ಉಳಿಸಿ-ಬೆಳೆಸುವ ಕಾರ್ಯ ಹೊತ್ತುಕೊಂಡು ಬಂದವರಿಗೆ ನಾವುಗಳು ಅಭಾರಿ.

ಶರಣರು ತಾವುಗಳು ನುಡಿದಂತೆ ನಡೆದವರು ತಮಗೊಂದು ರೀತಿ, ಪರರಿಗೆ ಇನ್ನೊಂದು ರೀತಿ ಎಂದು ವರ್ಣಿಸದೆ, ಯಾವತ್ತಿಗೂ ಬಾಯಿಮಾತಿಗೆಂದು ಹೇಳದೆ, ನುಡಿದಿದ್ದನ್ನು ಕಾರ್ಯರೂಪಕ್ಕೆ ತಂದವರು ಅದರಲ್ಲೂ ದೇವರಿಗೆ ಸವಾಲು ಹಾಕುತ್ತ ಭೂಮಿಗೆ ಕರೆ ತಂದಿರುವುದನ್ನು ಜೇಡರ ದಾಸಿಮಯ್ಯ ಮತ್ತು ಚೆನ್ನಬಸವಣ್ಣನ ವಚನಗಳಲ್ಲಿ ಕಾಣಬಹುದು.

ಒಡಲಲ್ಲಿದಾತ ಜಂಗಮ, ಪ್ರಾಣವಿಲ್ಲದಾತ ಭಕ್ತನಯ್ಯ

ಆಚಾರವೇ ಜಂಗಮ, ವಿಚಾರವೇ ಭಕ್ತನಯ್ಯ,

ಆಚಾರ ವಿಚಾರವೆಂಬುದು ಸ್ವಾನುಭಾವ ಸಂಭಾಷಣೆ

ಕೂಡಲ ಚೆನ್ನಸಂಗಮದೇವಾ

ಚೆನ್ನಬಸವಣ್ಣ ಭಕ್ತ-ಜಂಗಮ ಪದಗಳಿಗೆ ಹೊಸ ಕಲ್ಪನೆ ಮೂಡಿಸುವುದರ ಮುಖಾಂತರ ತಾತ್ವಿಕ ವಿಚಾರಗಳಿಗೆ ತಳಪಾಯ ಹಾಕಲು ಪ್ರಯತ್ನಿಸಿದ್ದಾರೆ. ಒಡಲಿದ್ದಾಕ್ಷಣವೇ ಜಂಗಮನಲ್ಲ ಪ್ರಾಣವಿದ್ದಾಕ್ಷಣವೇ ಭಕ್ತನಲ್ಲ ಎಂದು ಸ್ಪಷ್ಟಪಡಿಸಿ ಆಚಾರವೇ ನಿಜವಾದ ಜಂಗಮ, ವಿಚಾರವೇ ನಿಜವಾದ ಭಕ್ತ ಎಂದು ಹೇಳಿದ್ದಾರೆ.

ಜ್ಞಾನ ಬಲದಿಂದ ಅಜ್ಞಾನದ ಕೇಡುನೋಡಯ್ಯ

ಜ್ಯೋತಿಯ ಬಲದಿಂದ ತಮಂಧದ ಕೇಡುನೋಡಯ್ಯ

ಸತ್ಯದ ಬಲದಿಂದ ಅಸತ್ಯದ ಕೇಡುನೋಡಯ್ಯ

ಬಸವಣ್ಣನವರ ಈ ವಚನವು ಜ್ಞಾನದ ಅನಿವಾರ್ಯತೆಯನ್ನು ತುಂಬಾ ಸುಂದರವಾಗಿ ಬಿಡಿಸಿ ಹೇಳುತ್ತದೆ. ಜ್ಞಾನದ ಜೊತೆ ಸತ್ಯದ ಬೆಳಕು ಸೇರಿದಾಗ ಅಂದಕಾರವೆಲ್ಲ ಕಳೆದು ಹೊಸಲೋಕವೇ ಕಾಣಬಹುದಾದ ಅನೇಕ ಸಾಧ್ಯತೆಗಳನ್ನು ವಚನಕಾರರು ತಮ್ಮ ಸ್ವಾನುಭಾವದಿಂದ ಕಂಡುಹಿಡಿದಿದ್ದಾರೆ. ಅಜ್ಞಾನ ಅಳೆಯಲು, ಕತ್ತಲು ಕಳೆಯಲು, ಅಸತ್ಯ ದೂರವಾಗಲು, ಇದಕ್ಕಿಂತ ಸರಳ ಮಾರ್ಗ ಮತ್ತೊಂದು ಇರಲಾರದು. ವಚನಕಾರರು ತಮ್ಮ ನಡೆ–ನುಡಿಗಳಲ್ಲಿ ವೈಚಾರಿಕತೆಯನ್ನು ತರುವುದರ ಮೂಲಕ ಸಮಾಜದ ವ್ಯವಸ್ಥೆಯಲ್ಲಿ ಹೊಸ ಹೊಸ ಮೌಲ್ಯಯುತವಾದ ವಿಚಾರಗಳು ಹುಟ್ಟಲು ಕಾರಣವಾದವು.

ವ್ಯಕ್ತಿ ಹೊರಗೆ ದೈಹಿಕವಾಗಿ ಎಷ್ಟು ಶಕ್ತಿಶಾಲಿಯಾಗಿರುತ್ತಾನೋ ಅಷ್ಟೇ ಅವನ ಅಂತರಾಳದ ಮನಸ್ಸು ಸಹ ವಿಕಾಸಗೊಳ್ಳಬೇಕಾಗುತ್ತದೆ. ನಮ್ಮಲ್ಲಿರುವ ಅಡೆತಡೆಗಳನ್ನು ತಿದ್ದುವ ಹೃದಯವನ್ನು ಸೂರೆಗೊಂಡು ಜ್ಞಾನಕ್ಕೆ ಹಚ್ಚುವ ಅನುಭಾವಕ್ಕೆ ಎತ್ತುವ ವಚನಗಳು ನಮ್ಮ ಭವರೋಗಕ್ಕೆ ದಿವ್ಯೌಷಧ ಎಂಬಲ್ಲಿ ಎರಡು ಮಾತು ಇರಲಾರದು. ಕೆಟ್ಟವರು ತಿದ್ದಿಕೊಳ್ಳಲು, ಸಜ್ಜನರು ಕೆಡದಿರಲು ಈ ವಚನಸಾಹಿತ್ಯ ಉಪಯೋಗ. ಇದನ್ನು ಅರಿತು ಬಾಳಬೇಕು. 'ವ್ಯಕ್ತಿತ್ವ ವಿಕಾಸನವು ವ್ಯಕ್ತಿಯ ಮಾನಸಿಕ, ಮತ್ತು ವರ್ತನಾತ್ಮಕ ಚಲನೆಯಿಂದ ವಿಕಾಸಗೊಳ್ಳುತ್ತದೆ' ಹನ್ನೆರಡನೆಯ ಶತಮಾನದಲ್ಲಿ ಜೀವಿಸಿದ್ದ ವಚನಕಾರರು ಸಮಾಜ ಸುಧಾರಣೆಗೆ ಶ್ರಮಿಸಿದ್ದಾರೆ. ಅವರೆಂದರೆ ಜೇಡರ ದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಸಿದ್ದರಾಮ, ಅಂಬಿಗರ ಚೌಡಯ್ಯ, ಸರ್ವಜ್ಞ, ಮುಂತಾದವರು ಪ್ರಮುಖರಾಗಿದ್ದಾರೆ. 'ವ್ಯಕ್ತಿಯಲ್ಲಿ ಕಂಡುಬರುವ ವಿಶೇಷ ಗುಣಗಳ ಒಟ್ಟು ಮೊತ್ತವೇ ವ್ಯಕ್ತಿತ್ವ' ಮಾನವನು ದೈಹಿಕವಾಗಿ, ಬೌದ್ಧಿಕವಾಗಿ ವಿಕಾಸ ಹೊಂದುವುದೇ ವ್ಯಕ್ತಿತ್ವ ವಿಕಸನ. ಇಂತಹ ವ್ಯಕ್ತಿತ್ವ ವಿಕಸನವಾಗಬೇಕಾದರೆ ವಚನಕಾರರ ವಚನಗಳು ಪ್ರಮುಖ ಪಾತ್ರವಹಿಸುತ್ತವೆ. ಇಂತಹ ವ್ಯಕ್ತಿತ್ವ ವಿಕಸನದ ಮೂಲಕ ವ್ಯಕ್ತಿಗೆ, ಸಮಾಜಕ್ಕೆ, ನೆರೆಹೊರೆಯವರಿಗೆ ಹಿತ ಹಾಗೂ ಸುಖವೆನಿಸುತ್ತದೆ.

ಮಾಡಿ ಮಾಡಿ ಕೆಟ್ಟವರು ಮನವಿಲ್ಲದೇ,

ನೀಡಿ ನೀಡಿ ಕೆಟ್ಟವರು ನಿಜವಿಲ್ಲದೇ,

ಮಾಡುವ ನೀಡುವ ನಿಜಗುಣವುಳ್ಳಡೆ,

ಕೂಡಿಕೊಂಬ ನಮ್ಮ ಕೂಡಲಸಂಗಮದೇವ

ದಾನ, ಧರ್ಮ, ಸೇವೆ, ಪರೋಪಕಾರ, ಭಕ್ತಿಗಳ ಬಗೆಗೆ ಈ ವಚನದಲ್ಲಿ ವಿವರಿಸಲಾಗಿದೆ. ಏನೇ ಮಾಡಿದರೂ ಮನಸ್ಸಿಲ್ಲದೆ ಕೇವಲ ಹೆಸರಿಗಾಗಿ ದಾನ ಮಾಡುವವರು, ಭಕ್ತಿ ವಿಶ್ವಾಸದಿಂದ ದಾನಮಾಡದೆ ದಾನಶೂರರೆನಿಸಿಕೊಳ್ಳಲು ದಾನಮಾಡುವರು. ನಿಜವಾದ ದಾನ ಸೇವೆ ಮಾಡುವ ಜನರನ್ನು ಕೂಡಲಸಂಗಮದೇವನು ಸೇರಿಸಿಕೊಂಡು ಸಂತೋಷಪಡುತ್ತಾನೆ. ಯಾವುದೇ ಕಾರ್ಯವನ್ನು ದಾನವನ್ನು ಪೂರ್ಣ ಮನಸ್ಸಿಟ್ಟು ಮಾಡಬೇಕು.

ಲೋಕದ ಡೊಂಕ ನೀವೇಕೆ ತಿದ್ದುವಿರಿ?

ನಿಮ್ಮ ನಿಮ್ಮ ತನವ ಸಂತೈಸಿಕೊಳ್ಳಿ

ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

ನೆರೆಮನೆಯ ದುಃಖಕ್ಕೆ ಅಳುವವರ

ಮೆಚ್ಚ ಕೂಡಲಸಂಗಮದೇವ

ಈ ಮೇಲಿನ ವಚನದಿಂದ ವ್ಯಕ್ತಿಯ ವ್ಯಕ್ತಿತ್ವ ವಿಕಾಸಗೊಳ್ಳಬೇಕು. ತಮ್ಮಲ್ಲಿಯೇ ದೋಷವನ್ನಿಟ್ಟುಕೊಂಡು ಉಳಿದವರ ತಪ್ಪನ್ನು ತಿದ್ದುವವರಿಗೆ ಮಾರ್ಗದರ್ಶನ ನೀಡಿದ್ದಾರೆ. ಜೊತೆಗೆ ಖಂಡಿಸಿದ್ದಾರೆ. ಲೋಕದ ಡೊಂಕನ್ನು ತಿದ್ದುವ ಮೊದಲು ನಿಮ್ಮನ್ನು ನೀವು ಸಂತೈಸಿಕೊಳ್ಳಿರಿ, ಪಕ್ಕದ ಮನೆಯವರ ದುಃಖಕ್ಕೆ ಅಳುವವರ ಡಾಂಬಿಕ ಜೀವನವನ್ನು ಕೂಡಲಸಂಗಮದೇವನು ಮೆಚ್ಚುವುದಿಲ್ಲ ಎಂದಿದ್ದಾರೆ.

ವ್ಯಕ್ತಿತ್ವ ವಿಕಸನದಲ್ಲಿ ಸರ್ವಜ್ಞನ ಪಾತ್ರ ಬಹಳ ಮುಖ್ಯವಾದುದು. ಈತನ ವಚನಗಳಿಂದ ಸಹಜವಾಗಿಯೇ ವ್ಯಕ್ತಿತ್ವ ವಿಕಸನವಾಗುತ್ತದೆ. ಅಂದರೆ ಸಮಾಜದಲ್ಲಿರುವಂತಹ ಮೂಢನಂಬಿಕೆ ಅನಿಷ್ಟ ಪದ್ಧತಿ, ಜಾತಿಯತೆ

ಮುಂತಾದವುಗಳನ್ನು ವಚನಗಳ ಮೂಲಕ ಖಂಡಿಸಿ ಹೊಸ ಮೌಲ್ಯಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ.

ಉಪಸಂಹಾರ

ವಚನಕಾರರು ಮಾನವನ ಜಗತ್ತಿಗೆ ನೀಡಿದ ಸಂದೇಶಗಳನ್ನು ಪ್ರತಿಯೊಬ್ಬ ವ್ಯಕ್ತಿಯು ತನ್ನ ವ್ಯಕ್ತಿತ್ವ ವಿಕಾಸಗೊಳ್ಳಲು ವಚನಗಳನ್ನು ಅಧ್ಯೈಸಿಕೊಳ್ಳಬೇಕು. ಅಷ್ಟೇ ಅಲ್ಲದೇ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಒಂದು ನಿರ್ಧಿಷ್ಟ ಮಾರ್ಗಸೂತ್ರವನ್ನು ಶರಣರೆಲ್ಲರೂ ತಮ್ಮ ಅನುಭವದ ಮಾತುಗಳಲ್ಲಿ ರೂಪಿಸಿದ್ದಾರೆ. ಬಸವಣ್ಣನವರಂತೂ ಆ ಕೆಲಸವನ್ನು ಹೃದಯಕ್ಕೆ ಸಮೀಪವಾದ ಮಾತುಗಳಿಂದ ತಿಳಿಸಿದ್ದಾರೆ. ಬಸವಾದಿ ಶರಣರು ವ್ಯಕ್ತಿಯ ವ್ಯಕ್ತಿತ್ವ ವಿಕಸನ ಮಾಡುತ್ತಲೇ ಸಮಯ ಸೃಷ್ಟಿಯ ವಿಕಾಸದ ಸಾಧನೆ ಮಾಡಿ ಹೊಸ ಸಮಾಜದ ಪರಿಕಲ್ಪನೆಯಲ್ಲಿ ಹುತಾತ್ಮರಾಗಿ ಹೋದರು. ಅಂದು ಮಾಡಿದ ಧಾರ್ಮಿಕ ಕ್ರಾಂತಿ ಇಂದಿಗೂ ಮಾನವನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತಲೇ ಇದೆ. ಇಂತಹ ಮೌಲ್ಯಯುತವಾದ ಸಂದೇಶವನ್ನು ಜಗತ್ತಿನ ಯಾವುದೇ ಧರ್ಮಸಾಹಿತ್ಯವು ಕೊಡಲು ಸಾಧ್ಯವಿಲ್ಲ. ಶರಣರ ವಚನಗಳಿಂದ ಪ್ರತಿಯೊಬ್ಬರೂ ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಬೇಕಾಗಿದೆ. "ಹಿತವಾದ ಮಾತುಗಳನ್ನು ಮಿತವಾಗಿ ಆಡಿದರೆ ಮೌನಕ್ಕಿಂತಲೂ ಶ್ರೇಷ್ಠ" ಎನ್ನುವಂತ ವಚನಗಳು ಮತ್ತು ವ್ಯಕ್ತಿತ್ವ ವಿಕಸನವನ್ನು ಕುರಿತು ಎಷ್ಟೆ ಬರೆದರೂ ಸಾಲದು ಎನಿಸುತ್ತದೆ. ವಚನಗಳು ಪ್ರಸ್ತುತ ಕಾಲಕ್ಕೂ ಅನ್ವಯಿಸುತ್ತವೆ.

ವ್ಯಕ್ತಿತ್ವದ ಅರ್ಥವನ್ನು ಅರಿಯದ ಸಹಸ್ರಾರು ಸಾಮಾನ್ಯರು ವ್ಯಕ್ತಿತ್ವ ಪಡೆದಿದ್ದು ಆ ವ್ಯಕ್ತಿತ್ವದ ಬೆಳಕಿನಲ್ಲಿ ಬದುಕನ್ನು ಬೆಳಕಿಸಿದ್ದು ಇಂದಿಗೂ ಪ್ರಸ್ತುತವಾಗಿದೆ. ರಾಜನ ಹೆಸರಿಗೆ ಜೈಕಾರ ಹಾಕಿ ಅವನ ವ್ಯಕ್ತಿತ್ವವನ್ನು ಸ್ತುತಿಮಾಡುವ ಪರಂಪರೆಯುಳ್ಳ ಈ ದೇಶದಲ್ಲಿ ವಚನಕಾರರು ಹೊಸ ಪರಂಪರೆಯನ್ನು ಪ್ರಾರಂಭಿಸಿ ವ್ಯಕ್ತಿಯ ವ್ಯಕ್ತಿತ್ವ ವಿಕಾಸವಾಗುವಂತೆ ನೋಡಿಕೊಂಡರು.

ಬಸವಣ್ಣ – ಭಕ್ತಿಗೆ, ಚೆನ್ನಬಸವಣ್ಣ–ಜ್ಞಾನಕ್ಕೆ, ಸಿದ್ದರಾಮ–ಯೋಗಕ್ಕೆ, ಅಕ್ಕಮಹಾದೇವಿ– ವೈರಾಗ್ಯಕ್ಕೆ, ಅಲ್ಲಮಪ್ರಭು–ಜಂಗಮತ್ವಕ್ಕೆ ಹೆಸರಾಗಿರುವಂತೆ ಅನೇಕ ಮಾನವೀಯ ಮೌಲ್ಯಗಳನ್ನು ಹುಟ್ಟುಹಾಕುವಲ್ಲಿಯೂ ಇವರು ಪ್ರಮುಖರಾಗಿದ್ದಾರೆ. ದುಡಿಯುವ ವರ್ಗದಿಂದ ಬಂದ ಅಂಬಿಗರ ಚೌಡಯ್ಯ, ನುಲಿಯಚಂದಯ್ಯ, ಮಡಿವಾಳಯ್ಯ, ಘಟ್ಟಿವಾಳಯ್ಯ, ಉರಿಲಿಂಗಪೆದ್ದಿ, ಕಾಳವ್ವೆ, ಗೊಗ್ಗವ್ವೆ, ಸೂಳೆಸಂಕವ್ವೆ, ಈ ಮುಂತಾದ ವಚನಕಾರರು ಅನುಭವ ಮಂಟಪದ ಪ್ರಣಾಳಿಕೆಯನ್ನು ಪ್ರಶ್ನಿಸುವುದರ

ಮೂಲಕ, ಚರ್ಚಿಸುವುದರ ಮೂಲಕ ವಚನಕಾರರ ವ್ಯಕ್ತಿತ್ವ ಒಂದರ್ಥದಲ್ಲಿ ಸಾಮಾಜಿಕವಾಗಿ ಬೆಳೆಯುವಂತೆ ಮಾಡಿದವರು.

ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಬೇಕು. ವ್ಯಕ್ತಿಯಲ್ಲಿ ಆಡಂಬರ ಇರಬಾರದು.

ಲಾಂಛನಕ್ಕೆ ತಕ್ಕ ಆಚಾರ ಇರಬೇಕು

ವೇಷವಧರಿಸಿ ಫಲವೇನಯ್ಯ

ವೇಷದಂತಾಚರಣೆ ಇಲ್ಲದನ್ನಕ್ಕೆ

ಎಂದು ಬಸವಣ್ಣನವರು ಹೇಳಿದ್ದಾರೆ. ವ್ಯಕ್ತಿಯಾದವನು ಉಪವಾಸ, ವ್ರತವನ್ನು ಮಾಡುವವನ ಮನಸ್ಸು ಶುದ್ಧವಾಗಿರಬೇಕು ಎಂದು ಏಲೇಶ್ವರಕೇತಯ್ಯ ಸೂಚಿಸಿದ್ದಾರೆ. ಸಕಲಜೀವರಾಶಿಗೆ ಒಳ್ಳೆಯದನ್ನು ಬಯಸುವ ಗುಣವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಶರಣರು ಉಪದೇಶಿಸಿ ಬೆಳೆಸಿಕೊಂಡ ವ್ಯಕ್ತಿತ್ವವನ್ನು ಹೊಂದಿರುತ್ತಾರೆ ಎಂಬುದನ್ನು ಅಮೇರಿಕನ್ ಲೇಖಕ ಬ್ರೂಸ್ ಹೀಗೆ ವಿವರಿಸಿದ್ದಾರೆ. ಜಗತ್ತಿಗೆ ನೀವು ನಿಜಕ್ಕೂ ಏನನ್ನಾದರೂ ಅಮೂಲ್ಯವಾದುದನ್ನು ಕೊಡಬಯಸಿದರೆ, ಅದು ನಿಮ್ಮದೇ ಆದ ವ್ಯಕ್ತಿತ್ವದ ಪ್ರಕಟಣೆಯ ಮೂಲಕ ಬರುತ್ತದೆ ಎಂದು ತಿಳಿಸಿದ್ದಾರೆ.

ಹೀಗೆ ವ್ಯಕ್ತಿತ್ವ ಬೆಳೆಸಿಕೊಂಡ ಮನದ ಮಲೀನವನ್ನು ಕಳೆದುಕೊಂಡಿರುತ್ತಾನೆ. ನುಡಿದಂತೆ ನಡೆಯುವುದೇ ನಮ್ಮ ಜ್ಞಾನವನ್ನು, ಮಾನವೀಯತೆಯನ್ನು ಬೆಳೆಸಲು ಸಾಧ್ಯವಾಗುತ್ತದೆ. ಉತ್ತಮ ಜೀವನದ ಮೌಲ್ಯಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡ ವ್ಯಕ್ತಿ ಒಳ್ಳೆಯ ಆಚಾರಗಳನ್ನು ಅನುಸರಿಸುತ್ತಾನೆ. ಒಳ್ಳೆಯ ಸುಸಂಸ್ಕೃತನಾಗಿ ಬೆಳೆಯುತ್ತಾನೆ.

ಕನ್ನಡ ನೆಲದಲ್ಲಿ ಜನಸಮುದಾಯಕ್ಕೆ ಮೊದಲ ಬಾರಿಗೆ ಸಹಜವಾದ ವ್ಯಕ್ತಿತ್ವದ ಬಗ್ಗೆ ಪರಿಚಯ ಮಾಡಿಕೊಟ್ಟವರೆಂದರೆ ವಚನಕಾರರು. ವಚನಕಾರರ ಅರಿವು ಆಲೋಚನೆಗಳನ್ನು ಹುಟ್ಟುಹಾಕುವುದರ ಮೂಲಕ ಹೊಸ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು. ಎನಗಿಂತ ಕಿರಿಯರಿಲ್ಲ ಎನ್ನುತ್ತಲೇ ಬಸವಣ್ಣ ವಚನ ಚಳುವಳಿಯ ನಾಯಕನಾಗುವತ್ತ ವಿಶಿಷ್ಟ ವ್ಯಕ್ತಿತ್ವವನ್ನು ಪಡೆದುಕೊಂಡ. ಸಂಘಟನೆ ಮತ್ತು ಶಿಸ್ತು ಸಂಯಮ, ಹೃದಯ ವೈಶಾಲ್ಯತೆ ಈ ಭಕ್ತಿಬಂಡಾಯದ ಪ್ರಮುಖ ಲಕ್ಷಣಗಳಾಗಿದ್ದವು. ಮಾನವನ ಬದುಕಿನ ಹೊಸ ಆಯಾಮ ದೊರೆತಿದ್ದರಿಂದ ಶರಣರು ಸ್ಥಾಪಿಸಿದ ಅನುಭವ ಮಂಟಪ ಇಂದಿಗೂ ಹಸಿರಾಗಿದೆ.

ಶರಣು ಶರಣಾರ್ಥಿ

ಆಕರ ಗ್ರಂಥಗಳು

೧. ವಚನಸಾಹಿತ್ಯ – ಎಂ. ಚಿದಾನಂದಮೂರ್ತಿ – ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು–೨೦೧೨.

೨. ಶರಣರ ಸಮಗ್ರ ಕ್ರಾಂತಿ–ರಂಜಾನ್ ದರ್ಗಾ – ಲೋಹಿಯಾ ಪ್ರಕಾಶನ, ಬಳ್ಳಾರಿ–೨೦೧೫.

೩. ವಚನಗಳಲ್ಲಿ ವ್ಯಕ್ತಿತ್ವ ವಿಕಸನ–ಡಾ: ಪಿ.ಎಸ್. ಶಂಕರ್ – ಪ್ರಸಾರಾಂಗ, ಗುಲ್ಬರ್ಗಾ ವಿ.ವಿ., ಗುಲ್ಬರ್ಗಾ–೨೦೦೮.

೪. ವಚನಕಾರರು ಮತ್ತು ಶಬ್ದಕಲ್ಪ–ಅ.ರಾ. ಮಿತ್ರ – ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂ.–೨೦೦೪.

೫. ವಚನ: ವ್ಯಕ್ತಿತ್ವ ವಿಕಾಸ–ಡಾ: ಹಾ.ಮ. ನಾಗಾರ್ಜುನ್ – ದೇಸಿ ಪುಸ್ತಕ, ವಿಜಯನಗರ, ಬೆಂ.–೨೦೧೧.

೬. ಬಸವ ಪಥ–೪–ವಿಶೇಷಾಂಕಗಳು – ಬಸವ ಸಮಿತಿ, ಬೆಂಗಳೂರು.

೭. ಮುಕ್ತಾಯಕ್ಕನ ವಚನಗಳು–ಒಂದು ಅಧ್ಯಯನ–ಗಂಗಾಂಬಿಕಾ ಪಾಟೀಲ – ಕಣ್ವ ಪ್ರಕಾಶನ, ಬೆಂ.–೨೦೧೧.

೮. ವಚನಧರ್ಮಸಾರ–ಎಂ.ಆರ್. ಶ್ರೀನಿವಾಸ್‌ಮೂರ್ತಿ – ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೨೦೧೩.

೯. ವಚನಸಾಹಿತ್ಯದ ಹೊಸ ಪರಿಲ್ಪನೆ–ರಘುಶಂಖ ಭಾತಂಬ್ರಾ – ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೨೦೦೪.

೧೦.. ಅಕ್ಕಮಹಾದೇವಿ–ಗುರುಲಿಂಗ ಕಾಪಸೆ – ಸಾಹಿತ್ಯ ಅಕಾದೆಮಿ, ಸೆಂಟ್ರಲ್ ಕಾಲೇಜ್ ಆವರಣ, ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–೨೦೦೮.

೧೧. ಕನ್ನಡ ಸಾಹಿತ್ಯ ಸಂಗಾತಿ–ಕೀರ್ತಿನಾಥ ಕುರ್ತಕೋಟಿ – ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ–೨೦೦೮.

೧೨. ಬಸವಣ್ಣನವರು– ಎಂ. ಚಿದಾನಂದಮೂರ್ತಿ – ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ–೨೦೦೯.

೧೩. ವಚನ ಕಮ್ಮಟ–ಪ್ರೊ. ಕೆ. ಮರಳುಸಿದ್ದಪ್ಪ, ಪ್ರೊ. ಕಿ.ರಂ. ನಾಗರಾಜ – ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು–೧೯೯೬.

೧೪. ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ – ಡಾ: ಎಂ.ಎಸ್. ವೃಷಭೇಂದ್ರಸ್ವಾಮಿ – ಪ್ರಿಯದರ್ಶಿನಿ ಪ್ರಕಾಶನ, ಹಂಪಿನಗರ, ಬೆಂಗಳೂರು–೨೦೧೪.

೧೫. ಕನ್ನಡ ಸಾಹಿತ್ಯ ಚರಿತ್ರೆ–ರಂ. ಶ್ರೀ. ಮುಗಳಿ – ಗೀತಾ ಬುಕ್ ಹೌಸ್, ಪ್ರಕಾಶಕರು, ಮೈಸೂರು–೨೦೦೮.

೧೬. ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನ: ಒಂದು ಅಧ್ಯಯನ ಡಾ: ಜಿ. ನಾರಾಯಣಸ್ವಾಮಿ – ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೨೦೦೮.

೧೭. ವಚನಸಾಹಿತ್ಯ ಮೀಮಾಂಸೆ– ಡಾ.ವೀರಣ್ಣ ದಂಡೆ – ಬಸವ ಸಮಿತಿ, ಬೆಂಗಳೂರು–೨೦೦೭.

೧೮. ಅಲ್ಲಮನ ವಚನಗಳು – ಎಲ್.ಬಸವರಾಜು – ಮೈಸೂರು –೧೯೬೯.

೧೯. ಅಕ್ಕನ ವಚನಗಳು – ಸಂ.ಎಲ್.ಬಸವರಾಜು